2591

# ಸರ್ವವ್ಯವಹಾರಾತೀತವಾದ ಪರಮಾರ್ಥ

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1990

ಪುಸ್ತಕ ಭಂಡಾರ

ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಸರ್ವವ್ಯವಹಾರಾತೀತವಾದ ಪರಮಾರ್ಥ

ಸರ್ವವ್ಯವಹಾರಾತೀತನಾದ ನಿತ್ಯಶುದ್ಧಬುದ್ಧಮುಕ್ತಾತ್ಮನಲ್ಲಿ
ನೆಲೆನಿಲ್ಲುವ ಪರಮಾನುಭವವೇ ಪರಮಾರ್ಥವಿದ್ಯೆ-
ಎಂದು ತಿಳಿಸಿಕೊಡುವ ಉಪದೇಶಗಳು

ಉಪದೇಶಕರು :

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ ೧೧೬

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.

1990

# ಮುನ್ನುಡಿ

---

ಶುಭಕೃತ್ಸಂವತ್ಸರದಲ್ಲಿ (1962) ಮೈಸೂರಿನಲ್ಲಿ ನಡೆದ ಮೂವತ್ತೆರಡನೆಯ ಶಂಕರಸಪ್ತಾಹದಲ್ಲಿ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಮಾಡಿದ ಉಪದೇಶಗಳಿವು.

ಸಕಲಲೌಕಿಕವೈದಿಕವ್ಯವಹಾರಗಳೂ ಶಾಸ್ತ್ರಗಳೂ ಆತ್ಮಾನಾತ್ಮರ ಅಧ್ಯಾಸವನ್ನು ಮುಂದುಮಾಡಿಕೊಂಡೇ ಹೊರಟಿರುತ್ತವೆ. ಪರಮಾರ್ಥವಾದ ಆತ್ಮೈಕತ್ವವನ್ನು ಅರಿತವರಿಗೆ ನಮ್ಮಗಳೆಲ್ಲರ ಆತ್ಮನು ಸರ್ವವ್ಯವಹಾರಾತೀತವಾದ ಆ ಪರಮಾರ್ಥವಾದ ಬ್ರಹ್ಮವೇ- ಎಂಬುದನ್ನು ಇಲ್ಲಿ ಅತ್ಯಂತಸರಳವಾದ ಶೈಲಿಯಿಂದ ಶ್ರೀಗಳವರು ಉಪದೇಶಿಸಿರುತ್ತಾರೆ.

ವೇದಾಂತದ ಮರ್ಮವನ್ನು ಅರಿತುಕೊಳ್ಳಬೇಕೆನ್ನುವವರಿಗೆ ಅತ್ಯಂತೋಪಕಾರಕವಾಗಿರುವ ಈ ಉಪದೇಶಗಳನ್ನು ಪುಸ್ತಕರೂಪದಿಂದ ಪ್ರಕಾಶಗೊಳಿಸಿದರೆ ಜಿಜ್ಞಾಸುಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಾಗಬಹುದೆಂಬ ಭಾವನೆಯಿಂದ ಪ್ರಕಟಿಸಲಾಗಿದೆ.

ಈ ಗ್ರಂಥದ ಮೊದಲನೆಯ ಮುದ್ರಣದ ಪ್ರತಿಗಳೆಲ್ಲವೂ ಮಾರಾಟವಾಗಿಬಿಟ್ಟದ್ದರಿಂದ ಈಗ ಎರಡನೆಯ ಸಂಸ್ಕರಣವನ್ನು ಹೊರತರಲಾಗಿದೆ. ಎಂದಿನಂತೆ ವಾಚಕರು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ತಾ 15-10-1990 ಪ್ರಕಾಶಕರು.

# ವಿಷಯಗಳ ಪರಿವಿಡಿ


| | | |
|---|---|---|
| | | ಪುಟ |
| ೧. | ಭೋಕ್ತೃಭೋಗ್ಯವ್ಯವಹಾರ | ೧ |
| ೨. | ಕರ್ತೃಕರ್ಮಫಲವ್ಯವಹಾರ | ೮ |
| ೩. | ಜ್ಞಾತೃಜ್ಞಾನಜ್ಞೇಯವ್ಯವಹಾರ | ೧೪ |
| ೪. | ಅವಿದ್ಯಾವ್ಯವಹಾರ | ೧೯ |
| ೫. | ಅಹಂಮಮವ್ಯವಹಾರ | ೨೪ |
| ೬. | ವಿದ್ಯಾವಿದ್ಯಾವ್ಯವಹಾರ | ೩೧ |
| ೭. | ಶಾಸ್ತ್ರಪ್ರಮಾಣ | ೩೪ |
| ೮. | ಅಂತ್ಯಪ್ರಮಾಣ | ೪೦ |
| ೯. | ಶ್ರೀಶಂಕರಭಗವತ್ಪಾದರ ಗುಣಕಥನ | ೪೬ |

# ಕೃತಜ್ಞತಾಸಮರ್ಪಣೆ

ಹಾಸನ ನಗರದಲ್ಲಿರುವ ಸುಪ್ರಸಿದ್ಧ ನ್ಯಾಯವಾದಿಗಳಾದ ಶ್ರೀ ಬಿ.ಆರ್. ಕೃಷ್ಣಮೂರ್ತಿಯವರು ತಮ್ಮ ಪೂಜ್ಯ ಮಾತಾಪಿತೃಗಳಾದ ಶ್ರೀಮತಿ ಶಾರದಮ್ಮ ಉ|| ಚಿನ್ನಮ್ಮನವರು ಮತ್ತು ಶ್ರೀ|| ಬೆಳವಾಡಿ ರಾಮಣ್ಣನವರು ಇವರುಗಳ ನೆನಪಾಗಿ ಈ ಗ್ರಂಥಪ್ರಕಟನೆಗೆ ರೂ. 3500 ಗಳನ್ನು ದಾನಮಾಡಿರುತ್ತಾರೆ.

ಶ್ರೀಯುತರಿಗೂ ಅವರ ಕುಟುಂಬಬಂಧುಮಿತ್ರವರ್ಗದವರಿಗೂ ಭಗವಂತನು ಹಾಗೂ ಸದ್ಗುರುಗಳು ಆಯುರಾರೋಗ್ಯೈಶ್ವರ್ಯಾದಿಸಕಲ ಶ್ರೇಯಃಪರಂಪರೆಗಳನ್ನೂ ನೀಡಿ ಕಾಪಾಡಲೆಂದು ನಾವು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಪ್ರಕಾಶಕರು.



ಶ್ರೀಮತಿ ಶಾರದಮ್ಮ ಉ॥ ಚಿನ್ನಮ್ಮನವರು
ಮತ್ತು
ಶ್ರೀ॥ ಬೆಳವಾಡಿ ರಾಮಣ್ಣನವರು
ಹಾಸನ.

|| ಓಂ ||

# ಸರ್ವವ್ಯವಹಾರಾತೀತವಾದ ಪರಮಾರ್ಥ

## ೧. ಭೋಕ್ತೃಭೋಗ್ಯವ್ಯವಹಾರ

(8–5–62)

'ಬ್ರಹ್ಮೈವೇದಂ ವಿಶ್ವಮ್', 'ಆತ್ಮೈವೇದಂ ಸರ್ವಮ್'–ಮುಂತಾದ ಶ್ರುತಿಗಳನ್ನು ಅನುಸರಿಸಿ ನಮಗೆ ಕಾಣಿಸುತ್ತಿರುವ ಪ್ರಪಂಚವೆಲ್ಲವೂ ಬ್ರಹ್ಮವೇ, ಪರಮಾತ್ಮನೇ; ಇದರಲ್ಲಿ ಯಾವ ನಾನಾತ್ವವೂ ಇರುವದಿಲ್ಲ– ಎಂದು ಅದ್ವೈತಸಿದ್ಧಾಂತಿಗಳಾದ ವೇದಾಂತಿಗಳು ಹೇಳುತ್ತಿರುತ್ತಾರೆ. ಈ ಶ್ರುತಿಗಳಿಗೆ ಅಕ್ಷರಾರ್ಥವನ್ನು ತೆಗೆದುಕೊಂಡರೆ ನಮ್ಮೆಲ್ಲರ ಅನುಭವಕ್ಕೆ ಸರ್ವಥಾ ವಿರುದ್ಧವಾದ ಅಭಿಪ್ರಾಯವನ್ನು ಒಪ್ಪಿಕೊಂಡಂತೆ ಆಗುತ್ತದೆ. ಏಕೆಂದರೆ ಈ ಪ್ರಪಂಚವು ದ್ರಷ್ಟೃದೃಶ್ಯವಿಭಾಗ, ಕರ್ತೃಕಾರಕಕ್ರಿಯಾಫಲವಿಭಾಗ, ಭೋಕ್ತೃಭೋಗ್ಯವಿಭಾಗ– ಇವುಗಳನ್ನೊಳಗೊಂಡಿರುವಂತೆ ಅನುಭವದಲ್ಲಿ ತೋರುತ್ತಿರುತ್ತದೆ. ಈ ವಿಭಾಗವು ಯಾರ ಅನುಭವದಲ್ಲಿಯೂ ಎಂದಿಗೂ ಬಾಧಿತವಾಗುತ್ತಿಲ್ಲ. ಹೀಗಿರುವದರಿಂದ ಅದ್ವೈತಸಿದ್ಧಾಂತವು ಶ್ರುತಿಸಂಮತವೆಂಬುದನ್ನು ಹೇಗೆ ಒಪ್ಪುವದು? ಒಂದುವೇಳೆ ಯಾರಾದರೂ ಒಪ್ಪಿದರೆ ಶ್ರುತಿಯು ಅನುಭವವಿರುದ್ಧವಾದ ಅರ್ಥವನ್ನು ಬೋಧಿಸುತ್ತದೆ ಎಂದಾಗಿ ಅಪ್ರಮಾಣವೇ ಆಗಿಬಿಡುವದಲ್ಲವೆ? –ಎಂಬ ಶಂಕೆಯು ಜಿಜ್ಞಾಸುಗಳ ಮನದಲ್ಲಿ ಮೊಳೆಯುವದು ಸ್ವಾಭಾವಿಕವಾಗಿದೆ. ಸರ್ವಲೋಕಸಿದ್ಧವಾಗಿರುವ ಈ ದ್ರಷ್ಟೃದೃಶ್ಯಾದಿವ್ಯವಹಾರವನ್ನು ಕಾರಣವಿಲ್ಲದೆ ತಳ್ಳಿಹಾಕುವದು ಹೇಗೆ ಸಾಧ್ಯವಾದೀತು? ಲೋಕವಿರುದ್ಧವಾದ ಈ ಅರ್ಥವನ್ನು ಶ್ರುತಿಯು ಬೋಧಿಸಿದರೆತಾನೆ ಆ ಸರ್ವವ್ಯವಹಾರಾತೀತವಾದ ವಸ್ತುವನ್ನು ಶ್ರೋತೃಗಳು ಹೇಗೆ ತಿಳಿದುಕೊಳ್ಳುವದಕ್ಕಾದೀತು? –ಎಂಬುದೊಂದು ಆಕ್ಷೇಪ. ಈ ಆಕ್ಷೇಪದ ಸ್ವರೂಪವನ್ನು ಮೊದಲು ವಿವರಿಸಿ ಹೇಳಿದ ಬಳಿಕ ಶ್ರುತ್ಯುಕ್ತವಾದ ಪರಿಹಾರವು ವಿವೇಕಿಗಳು ಒಪ್ಪತಕ್ಕದ್ದೆ, ಅಲ್ಲವೆ?- ಎಂಬುದನ್ನು ನಿಶ್ಚಯಿಸಬೇಕಾಗುತ್ತದೆ.

ಮೊಟ್ಟಮೊದಲು ಭೋಕ್ತೃಭೋಗ್ಯವ್ಯವಹಾರದ ಸ್ವರೂಪವನ್ನು ವಿವರಿಸಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸೋಣ. ನಾಗರಿಕಪ್ರಪಂಚವನ್ನು ಮೊದಲನೆಯ ಸಾರಿಗೆ ಕಾಣುವ ಕಾಡುಜನಕ್ಕೆ ಇಲ್ಲಿರುವ ದೃಶ್ಯಗಳೆಲ್ಲವೂ ಆಶ್ಚರ್ಯಕರವಾಗಿ ಕಾಣುತ್ತಿರುತ್ತವೆ. ವಿಚಿತ್ರವಸ್ತುಪ್ರದರ್ಶನಶಾಲೆಗೆ ಏನೂ ಅರಿಯದ ಅನಾಗರಿಕನೊಬ್ಬನು ಬಂದರೆ ಅಲ್ಲಿ ಕಾಣುವ ಮನುಷ್ಯರ ಅಸ್ಥಿಪಂಜರಗಳು, ಯುಗಾಂತರದ ಅದ್ಭುತಪ್ರಾಣಿಗಳ ಅಸ್ಥಿಯ ಅವಶೇಷಗಳು, ಸತ್ತ ಪಕ್ಷಿಮೃಗಾದಿಗಳ ದೇಹಗಳು, ಅಪೂರ್ವವಾದ ಬಗೆಬಗೆಯ ವಸ್ತುಗಳು —ಇವನ್ನು ಕಂಡು ಬೆರಗಾಗುತ್ತಾನೆ. ಇದರಂತೆ ಹೊಸದಾಗಿ ಹುಟ್ಟಿದ ಮಗು ತನ್ನ ಸುತ್ತುವಳೆಯವನ್ನು ಕಂಡು ಬೆರಗಾಗುತ್ತದೆ. ತನಗೆ ಕಾಣಿಸುವ ತಾಯಿಯ ಮುಖ, ಹತ್ತಿರದಲ್ಲಿ ಕಾಣಿಸುವ ವಸ್ತುಗಳು, ಹೊಸ ಜನರು— ಇವನ್ನು ಕಂಡು ಕುತೂಹಲದಿಂದ ಪರೀಕ್ಷಿಸಿ ಮೆಲ್ಲಮೆಲ್ಲಗೆ ಅವುಗಳ ಜ್ಞಾನವನ್ನು ಸಂಪಾದಿಸಿಕೊಂಡು ಪರಿಚಯಮಾಡಿಕೊಳ್ಳುತ್ತದೆ. ನಾವು ಇದರಂತೆ ಈ ಪ್ರಪಂಚವನ್ನು ನೋಡಿ ಆಶ್ಚರ್ಯಪಡುತ್ತಿದೇವೆ. ಇದನ್ನು ಕಂಡು ಇದರ ತತ್ತ್ವವೇನಿರಬಹುದೆಂಬುದನ್ನು ಕಂಡುಕೊಳ್ಳುವದಕ್ಕೆ ಕುತೂಹಲದಿಂದ ಪ್ರಯತ್ನಿಸುತ್ತಿದೇವೆ ; ಕ್ರಮಕ್ರಮವಾಗಿ ಇದರ ಅರಿವನ್ನು ಮಾಡಿಕೊಂಡು 'ನಮ್ಮ ಪ್ರಪಂಚ' ಎಂದು ಇದರ ಪರಿಚಯವನ್ನು ಮಾಡಿಕೊಳ್ಳುತ್ತಿದೇವೆ.

ಈ ಪ್ರಪಂಚದಲ್ಲಿರುವ ವಸ್ತುಗಳು ಬಗೆಬಗೆಯಾಗಿರುತ್ತವೆ. ಅವುಗಳು ಚೇತನ, ಅಚೇತನ— ಎಂದು ಎರಡು ಬಗೆಯಾಗಿರುತ್ತವೆ. ಅಚೇತನಗಳಲ್ಲಿ ಲೋಹಗಳೂ ಅಲೋಹಗಳೂ ಇರುತ್ತವೆ. ಚೇತನವಸ್ತುಗಳಲ್ಲಿ ಸ್ಥಾವರ, ಜಂಗಮ— ಎಂಬ ಭೇದವಿದೆ. ಜಂಗಮಪ್ರಾಣಿಗಳಲ್ಲಿ ಪಶುಪಕ್ಷಿಮೃಗಾದಿಗಳು, ಮನುಷ್ಯ —ಎಂಬ ಭೇದವು ಕಾಣುತ್ತದೆ. ಶಾಸ್ತ್ರದಿಂದ ದೇವತೆಗಳು, ರಾಕ್ಷಸರು, ಯಕ್ಷಗಂಧರ್ವಾದಿಗಳು-ಎಂಬ ಚೇತನರೂ ಇರುತ್ತಾರೆಂದು ತಿಳಿಯಬರುತ್ತದೆ. ಚೇತನಪ್ರಾಣಿಗಳಲ್ಲಿ ಶರೀರ, ಇಂದ್ರಿಯ—ಮುಂತಾದ ವಿಶೇಷವು ಕಾಣಿಸುತ್ತಿರುತ್ತದೆ. ಈ ದೃಶ್ಯವೆಲ್ಲವೂ ಕ್ಷಣಕ್ಷಣಕ್ಕೂ ಮಾರ್ಪಡುತ್ತಲೇ ಇರುತ್ತದೆ. ಕೆಲವು ದೃಶ್ಯಗಳು ಮಾರ್ಪಡುವದಲ್ಲದೆ ಚಲಿಸುತ್ತಲೂ ಇರುತ್ತವೆ. ಇಲ್ಲಿ 'ದ್ರಷ್ಟೃ' — ನೋಡುವವರು —ಎಂದು ನಮ್ಮನ್ನು ನಾವು ಬೇರ್ಪಡಿಸಿ

ಕೊಂಡು ನಮಗೆ ವಿಷಯವಾಗಿರುವ ದೃಶ್ಯವನ್ನು ನಿರೀಕ್ಷಣಪರೀಕ್ಷಣಗಳಿಂದ ವಿಮರ್ಶಿಸುತ್ತಾ ಇರುತ್ತೇವೆ.

ನಾವು ನೋಡುವ ಪ್ರಪಂಚದಲ್ಲಿರುವ ದೃಶ್ಯವೆಲ್ಲವೂ ದೇಶಕಾಲಗಳ ಆಧಾರದಿಂದಲೇ ನಮಗೆ ಕಾಣುತ್ತಿರುತ್ತವೆ. 'ಇಲ್ಲಿ', 'ಅಲ್ಲಿ' –ಎಂದು ದೇಶದ ಆಧಾರದಿಂದ ವಸ್ತುಗಳನ್ನು ಕಾಣುತ್ತಿದೇವೆ. 'ಈಗ', 'ಆಗ' –ಎಂದು ಆ ವಸ್ತುಗಳ ಹುಟ್ಟು, ಬೆಳವಣಿಗೆ –ಮುಂತಾದ ವಿಕಾರಗಳನ್ನು ಕಾಲದ ಆಧಾರದಲ್ಲಿ ಕಾಣುತ್ತಿರುತ್ತೇವೆ. ದೇಶದ ಅಥವಾ ಕಾಲದ ಆಧಾರದಲ್ಲಿಲ್ಲದ ವಸ್ತುಗಳೇ ನಮಗೆ ಗೋಚರವಾಗುತ್ತಿಲ್ಲ. ನಮಗೆ ಗೋಚರವಾಗುವ ವಸ್ತುಗಳೆಲ್ಲವೂ ಮಾರ್ಪಡುತ್ತಿರುವದೂ ಚಲಿಸುತ್ತಿರುವದೂ ದೇಶದ ಆಧಾರದಿಂದ ; ಅವುಗಳು ಹುಟ್ಟುವದು, ಬೆಳೆಯುವದು, ಹೊಸಹೊಸದಾಗಿ ಪರಿಣಮಿಸುವದೂ ಚಲಿಸುವದೂ ಸೊರಗುವದೂ ಹಾಳಾಗುವದೂ ದೇಶವನ್ನು ಆಧಾರಮಾಡಿಕೊಂಡೇ. ಹಾಗೆ ಮಾರ್ಪಡುವದಕ್ಕೂ ಚಲಿಸುವದಕ್ಕೂ ಅವಕ್ಕೆ ಕಾಲವೂ ಬೇಕು. ಇಂಥಲ್ಲಿ, ಇಂಥದ್ದೊಂದು ವಸ್ತು, ಇಷ್ಟುಹೊತ್ತಿಗೆ ಹುಟ್ಟಿತು ; ಅದು ದೊಡ್ಡದಾಗುವದಕ್ಕೆ ಇಷ್ಟುಕಾಲವು ಬೇಕಾಯಿತು, ಕೊನೆಗೆ ಅದು ಸೊರಗಿ ಹಾಳಾಯಿತು–ಎಂದು ದೇಶಕಾಲಗಳ ಸಂಬಂಧದಿಂದಲೇ ಎಲ್ಲಾ ದೃಶ್ಯಗಳನ್ನೂ ನಾವು ಕಾಣುತ್ತಿದೇವೆ. ಕೆಲವು ದೃಶ್ಯಗಳು ಎಲ್ಲಿವೆ ? –ಎಂಬ ದೇಶಪರಿಚ್ಛೇದವು ನಮಗೆ ಕಾಣಿಸುವದಿಲ್ಲ ; ಉದಾಹರಣೆಗೆ ನಮಗೆ ಹೊಳೆಯುವ ಕೆಲವು ಯೋಚನೆಗಳು ಎಲ್ಲಿವೆ ? –ಎಂದರೆ ನಮಗೆ ಹೇಳುವದಕ್ಕೆ ಬರುವದಿಲ್ಲ. ಆದರೂ ಅವು ನಮ್ಮ ಮನಸ್ಸಿನಲ್ಲಿ ಆದ ಮಾರ್ಪಾಡುಗಳು ಎಂದು ನಮಗೆ ಅನಿಸುತ್ತಿದೆ. ಅವುಗಳು ಕಾಲದಲ್ಲಿ ಹುಟ್ಟಿ, ಕಾಲದಲ್ಲಿಯೇ ಮೈಗರೆಯುತ್ತವೆ.

ವಸ್ತುಗಳ ವಿಷಯದಲ್ಲಿ ನಮಗೆ ಕುತೂಹಲವುಂಟಾಗುವಂತೆ ಕಾಲದೇಶಗಳ ವಿಷಯದಲ್ಲಿಯೂ ನಮಗೆ ಕುತೂಹಲವುಂಟಾಗುತ್ತದೆ. ಕಾಲವೆಂಬ ವಸ್ತು ಯಾವದು ? ಕಾಲದಲ್ಲಿ ಭೂತ, ವರ್ತಮಾನ, ಭವಿಷ್ಯತ್ತು–ಎಂಬ ಮೂರು ಭಾಗಗಳಿರುತ್ತವೆಯಲ್ಲ, ಅವುಗಳ ತತ್ತ್ವವೇನು ? ಭೂತಕಾಲವೆಂದರೆ ಕಳೆದುಹೋದ ಕಾಲ ಎನ್ನುತ್ತೇವೆ ; ಆದರೆ ಕಾಲವು ಕಳೆದುಹೋಯಿತೆಂದರೇನು ? ಅದು ಎಲ್ಲಿಗೆ ಹೋಗುತ್ತದೆ ? ಭೂತಕಾಲವು ನಮಗೆ ಅನುಭವಕ್ಕೆ

ಬರುವದಕ್ಕಿಂತ ಬೇರೆಯ ಬಗೆಯಲ್ಲಿ ವರ್ತಮಾನಕಾಲವು ಅನುಭವಕ್ಕೆ ಗೋಚರವಾಗುತ್ತದೆ. ಇದಕ್ಕೆ ಕಾರಣವೇನು? ಕಾಲವು 'ಹೋಗುತ್ತದೆ' ಎಂದರೇನರ್ಥ? 'ಒಂದು ಬಂಡಿ ಹೋಗುತ್ತದೆ' ಎಂಬಂತೆ ಕಾಲವು ಹೋಗುತ್ತಿರುತ್ತದೆಯೆ? ಹೋಗುವಾಗ ಕಾಲವು ಏತರ ಆಧಾರದಿಂದ ಹೋಗುತ್ತದೆ? 'ಕಾಲವು ವೇಗವಾಗಿ ಹೋಯಿತು' ಎನ್ನುತ್ತಾರಷ್ಟೆ? ಅದರ ವೇಗವನ್ನು ಹೇಗೆ ಗೊತ್ತುಮಾಡಬೇಕು? ಭವಿಷ್ಯತ್ಕಾಲವೆಂದರೆ ಏನು? ಅದು ಬರುವದಕ್ಕಿಂತ ಮುಂಚೆ ಅದು ಇರುತ್ತದೆಯೆ? ಇಲ್ಲದಿದ್ದರೆ ಹೇಗೆ ಎಲ್ಲಿಂದ ಬರುತ್ತದೆ? ವರ್ತಮಾನ ಕಾಲವೆಂದರೇನು? ಈಗ ಇರುವ ಕಾಲ ಎಂದರೆ, ಎಲ್ಲಿಂದ ಪ್ರಾರಂಭವಾಗುವ ಕಾಲ? ಅದರ ಅಳತೆಯನ್ನು ಹೇಗೆ ಮಾಡಬೇಕು? 'ಸೌರಮಾನ', 'ಚಾಂದ್ರಮಾನ', 'ಬಾರ್ಹಸ್ಪತ್ಯಮಾನ'– ಎಂದುಮುಂತಾಗಿ ಜೋಯಿಸರು ಹೇಳುತ್ತಿರುವರಲ್ಲ! ಅವುಗಳನ್ನು ಹೇಗೆ ಗೊತ್ತುಪಡಿಸುವದು? ಸೂರ್ಯನ ಗತಿಯಿಂದ ಗೊತ್ತುಮಾಡುವ ಕಾಲವು ಸೌರಮಾನವಾದರೆ, ಆ ಗತಿಯನ್ನು ಹೇಗೆ ಅಳೆಯಬೇಕು? ಕಾಲವು ಸಾಪೇಕ್ಷವೆಂದಾಗುವದಿಲ್ಲವೆ? ನಿರಪೇಕ್ಷವಾದ ಕಾಲವೆಂಬುದೊಂದುಂಟೆ? ಕಾಲವು ಘಟನೆಗಳಿಗಿಂತ ಬೇರೆಯೆ, ಅಲ್ಲವೆ? ಇವೆಲ್ಲ ಕಾಲದ ವಿಷಯದಲ್ಲಿ ನಮಗೆ ಉಂಟಾಗುವ ಪ್ರಶ್ನೆಗಳು.

ಹೀಗೆಯೇ ದೇಶದ ವಿಷಯದಲ್ಲಿಯೂ ನಮಗೆ ಕುತೂಹಲವುಂಟಾಗುತ್ತಿರುವದು. "ಇಲ್ಲಿ', 'ಅಲ್ಲಿ', ಎಂಬ ಮಾತುಗಳಿಗೆ ಏನರ್ಥ? ವಸ್ತುಗಳಿಗೆ ಇರುವದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವ ಪರಮಾರ್ಥವು ಯಾವದು? ಇದನ್ನು ಆಕಾಶ ಎಂದು ಶಾಸ್ತ್ರಜ್ಞರು ಕರೆಯುತ್ತಿದಾರೆ. ಆಕಾಶ ಎಂಬ ಪದಾರ್ಥವೊಂದುಂಟೆ? ಅದನ್ನು ಇಲ್ಲಿ, ಅಲ್ಲಿ –ಎಂದು ತುಂಡುಮಾಡಿ ನಾವು ಅರಿಯುತ್ತಿರುವದು ಹೇಗೆ? ಕಾಲಗಳು ಅನೇಕವಿರುವಂತೆ ಆಕಾಶಗಳು ಅನೇಕವಾಗಿವೆಯೆ? –ಇವೆಲ್ಲ ದೇಶವಿಷಯಕವಾದ ಪ್ರಶ್ನೆಗಳು.

ಈಗ ಕಾಲದಲ್ಲಿಯೂ ದೇಶದಲ್ಲಿಯೂ ಕಾಣುತ್ತಿರುವ ದೃಶ್ಯಗಳನ್ನು ನೋಡೋಣ. ಇವು ದ್ರವ್ಯ, ಗುಣ, ಕ್ರಿಯೆ-ಎಂದು ಬಗೆಬಗೆಯಾಗಿ ಕಾಣುತ್ತವೆ. ಗಡಿಗೆ, ಮಡಕೆ, ಕುಡಿಕೆ; ಮೇಜು, ಕುರ್ಚಿ, ನಾಯಿ, ಕುದುರೆ, ಕತ್ತೆ-ಎಂಬಿವೇ ಮುಂತಾದವುಗಳು ದ್ರವ್ಯಗಳಾಗಿರುತ್ತವೆ; ದೊಡ್ಡದಾಗಿರುವದು, ಸಣ್ಣದಾಗಿರು

ವದು, ಕಪ್ಪಗಿರುವದು, ಕೆಂಪಗಿರುವದು- ಎಂಬಿವೇ ಮುಂತಾದ ಗುಣಗಳು ಅವುಗಳಲ್ಲಿ ತೋರುತ್ತವೆ. ಬಿದ್ದಿತು, ಒಡೆಯಿತು, ಓಡಿತು-ಎಂದು ಕ್ರಿಯೆಗಳೂ ಅವುಗಳಿಗೆ ಸಂಬಂಧಪಟ್ಟಿರುವ್ತವೆ. ಇದಲ್ಲದೆ ಮಣ್ಣಿನಿಂದ ಗಡಿಗೆಯಾಗುತ್ತದೆ, ಬೀಜದಿಂದ ಮೊಳಕೆಯಾಗುತ್ತದೆ, ಆದರಿಂದ ಗಿಡವೂ ಮರವೂ ಆಗುತ್ತವೆ- ಎಂದು ಕಾರ್ಯಕಾರಣಭಾವದಿಂದ ಅವು ಒಂದಕ್ಕೊಂದು ಸಂಬಂಧಪಟ್ಟಿರುತ್ತವೆ. ಕಾರಣವು ಮೊದಲಿರಬೇಕು, ಕಾರ್ಯವು ಆಮೇಲೆ -ಎಂಬ ಕಾಲ ನಿಯಮವಿರುತ್ತದೆ. ಈಗ ನಾವು ಸರಿಯಾದ ನೆಲದಲ್ಲಿ ಒಂದು ಸೊಪ್ಪೆಯ ತೆಂಗಿನಕಾಯನ್ನು ನೆಟ್ಟು, ಅದಕ್ಕೆ ಕೆಮ್ಮಣ್ಣು, ಗೊಬ್ಬರ, ನೀರು -ಮುಂತಾದದ್ದನ್ನು ಹಾಕಿ ಪೋಷಿಸುತ್ತಾಬಂದರೆ ಅದರಿಂದ ತೆಂಗಿನಮರವು ಎದ್ದುಕೊಂಡು, ಕಾಲಾನುಕಾಲದಲ್ಲಿ ಅದರ ತುದಿಯಲ್ಲಿ ತೆಂಗಿನಕಾಯಿಗಳು ಬೆಳೆಯುತ್ತವೆ -ಎಂದು ಕ್ರಿಯೆ, ಕಾರಕ, ಫಲ-ಇವುಗಳ ಸಂಬಂಧವೂ ನಮಗೆ ಕಾಣಿಸುತ್ತದೆ.

ಈ ಪ್ರಪಂಚವನ್ನು ನಾವು ಸುಮ್ಮನೆ ನೋಡುತ್ತಿಲ್ಲ. ಅವುಗಳಿಂದ ನಮಗೆ ಆಗುವ ಪ್ರಯೋಜನವನ್ನು ಲೆಕ್ಕಕ್ಕೆ ತೆಗೆದುಕೊಂಡೂ ನೋಡುತ್ತಿದೇವೆ. ಅದರಲ್ಲಿರುವ ದೃಶ್ಯಗಳನ್ನು ಇವು ಒಳ್ಳೆಯವು, ಅವು ಕೆಟ್ಟವು -ಎಂಬ ಭಾವನೆಯಿಂದಲೂ ನೋಡುತ್ತಿರುತೇವೆ. ಅಲ್ಲವೆ ? ಒಳ್ಳೆಯ ಪದಾರ್ಥಗಳಿಂದ ನಮಗೆ ಇಷ್ಟವಾದ ಪ್ರಯೋಜನವು ಆಗುತ್ತದೆ ; ಕೆಟ್ಟಪದಾರ್ಥಗಳಿಂದ ನಮಗೆ ಅನಿಷ್ಟವಾದ ಫಲಗಳು ಆಗುತ್ತವೆ -ಎಂದು ದೃಶ್ಯಗಳನ್ನು ನಮಗೆ ಸಂಬಂಧಿಸಿಕೊಂಡೇ ಅರಿಯುತ್ತಿದೇವೆ. ಇದು ನಮ್ಮ ಮನೆ, ಇವನು ನಮ್ಮ ಹುಡುಗ, ಇದು ನಮ್ಮ ಹಸು, ಇದು ನಮ್ಮ ಹೊಲ- ಎಂದುಮುಂತಾಗಿ ದೃಶ್ಯಗಳನ್ನು ನಮಗೆ ಸಂಬಂಧಿಸಿಕೊಂಡೇ ನಾವು ನೋಡುತ್ತಿರುವದು ರೂಢಿಯಲ್ಲಿದೆ. ನಮಗೆ ಇಷ್ಟವಾದ ಪ್ರಯೋಜನವಾದ ಮನೆ, ಹುಡುಗ, ಹಸು, ಹೊಲ -ಎಂದೇ ಈ ಭಾವನೆಯ ಅಭಿಪ್ರಾಯ. ಹೊರಗಿನ ವಸ್ತುಗಳಿಂದ ನಮಗೆ ಆಗುವ ಒಳ್ಳೆಯ ಅಥವಾ ಕೆಟ್ಟಫಲವನ್ನು ನಾವು ಅನುಭವಿಸುತ್ತಿರುತ್ತೇವೆ. ಆದ್ದರಿಂದ ಈ ಪ್ರಪಂಚದಲ್ಲಿ ನಾವು ಬರಿಯ ದ್ರಷ್ಟೃ ( ನೋಟಗಾರರು)ಗಳಾಗಿಯೇ ಇರುವದಿಲ್ಲ. ನಾವು ಭೋಕ್ತೃಗಳಾಗಿಯೂ ಇರುತ್ತೇವೆ. ಈ ದೃಷ್ಟಿಯಿಂದ ಪ್ರಪಂಚವನ್ನು ನೋಡುವಾಗ ಭೋಕ್ತೃ, ಭೋಗ, ಭೋಗ್ಯ- ಇವುಗಳ ಗುಂಪೇ ಪ್ರಪಂಚವು ಎನ್ನಬಹುದಾಗಿದ.

ಪ್ರಪಂಚದಲ್ಲಿ ಹೀಗೆ ಅನೇಕ ಭೋಕ್ತೃಗಳಿರುವದರಿಂದ ಒಬ್ಬರಿಗೆ ಒಂದು ಇಷ್ಟವಾದರೆ ಅದು ಮತ್ತೊಬ್ಬರಿಗೂ ಇಷ್ಟವಾಗಿರಬೇಕೆಂಬುದೇನೂ ಇಲ್ಲ. ಒಬ್ಬನಿಗೆ ಒಂದು ಬಗೆಯ ಆಹಾರ, ವಿಹಾರ, ಉಡುಪು, ವಾಸದಮನೆ, ನಡತೆ, ಮತ, –ವಿದ್ಯಾಭ್ಯಾಸ, ರಾಜ್ಯಭಾರಕ್ರಮ- ಇವು ಇಷ್ಟವಾಗಿದ್ದರೆ ಅದೇ ಮತ್ತೊಬ್ಬನಿಗೆ ಅನಿಷ್ಟವಾಗಿರಬಹುದು. ಒಂದೇ ಪದಾರ್ಥವು ಅನೇಕರಿಗೆ ಇಷ್ಟವಾಗಿದ್ದರೆ ಅದನ್ನು ಪಡೆದುಕೊಳ್ಳುವದಕ್ಕೆ ಅವರೆಲ್ಲರೂ ಪ್ರಯತ್ನಿಸಬಹುದು; ಆಗ ಎಲ್ಲರಿಗೂ ಅದು ಸಿಕ್ಕದೆಹೋಗಬಹುದು. ಆಗ ಜನರಲ್ಲಿ ಒಬ್ಬರಮೇಲೆ ಒಬ್ಬರಿಗೆ ಪೈಪೋಟಿ, ಅಥವಾ ದ್ವೇಷ- ಉಂಟಾಗಬಹುದು. ಆಹಾರ ಅಥವಾ ಬಟ್ಟೆಯು ಅಗ್ಗವಾಗಿರುವಾಗ ಅದೇ ಎಲ್ಲರಿಗೂ ಬೇಕಾಗಿರುವದರಿಂದ ಜನರಿಗೆ ಒಬ್ಬರಮೇಲೊಬ್ಬರಿಗೆ ಪೈಪೋಟಿಯಾಗುವದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಒಂದು ಮನೆಯವರಿಗೂ ಪಕ್ಕದ ಮತ್ತೊಂದು ಮನೆಯವರಿಗೂ ಒಂದೇ ಸ್ಥಳವು ಬೇಕಾಗಿದ್ದರೆ ಒಬ್ಬರಿಗೆ ಸಿಕ್ಕದಂತೆ ಮತ್ತೊಬ್ಬರು ಪ್ರಯತ್ನಿಸಬಹುದು. ಒಂದು ಜನಾಂಗಕ್ಕೂ ಮತ್ತೊಂದು ಜನಾಂಗಕ್ಕೂ ಮೇಲಾಟವಾಗಲಿ ಪರಸ್ಪರದ್ವೇಷವಾಗಲಿ ಉಂಟಾಗುವದಕ್ಕೆ ಒಂದೇ ಪದಾರ್ಥವು ಇಬ್ಬರಿಗೂ ಬೇಕಾಗುವದೂ ಕಾರಣವಾಗಬಹುದು; ಒಂದೇ ಸ್ಥಳದಲ್ಲಿರುವ ಎರಡು ಪಂಗಡದವರೊಳಗೆ, ಒಂದು ಪಂಗಡದವರಿಗೆ ಬೇಕಾದದ್ದು ಮತ್ತೊಬ್ಬರಿಗೆ ಬೇಡವಾದರೆ ಇಷ್ಟವಾದದ್ದನ್ನು ಸಂಪಾದಿಸಿ ನಿಲ್ಲಿಸಿಕೊಳ್ಳುವದಕ್ಕೆ ಒಂದು ಪಂಗಡದವರು ಅಪೇಕ್ಷಿಸಿದರೆ ಅದನ್ನೇ ತೊಲಗಿಸಿಕೊಂಡು ಸುಖವಾಗಿರುವದಕ್ಕೆ ಇನ್ನೊಂದು ಪಂಗಡದವರಿಗೆ ಇಚ್ಛೆಯಾಗಬಹುದು.

ಈ ಭೋಕ್ತೃವೈಷಮ್ಯವು ಪ್ರಾಣಿಗಳಲ್ಲಿಯೂ ಇರುತ್ತದೆ. ಇಲಿಗಳಿಗೆ ಭತ್ತವು ಆಹಾರವಾದರೆ. ಬೆಕ್ಕುಗಳಿಗೆ ಇಲಿಗಳೇ ಆಹಾರ, ನಾಯಿಗಳಿಗೆ ಬೆಕ್ಕುಗಳೇ ಆಹಾರ- ಇತ್ಯಾದಿಯಾಗಿ ಪ್ರಪಂಚದಲ್ಲಿ ಪ್ರಾಣಿಗಳಲ್ಲಿ ಒಂದಕ್ಕೊಂದಕ್ಕೆ ಭೋಕ್ತೃಭೋಗ್ಯಸಂಬಂಧವಿರುವದು ಕಂಡುಬರುತ್ತದೆ. ಹೀಗೆಯೇ ಕೆಲವು ಪ್ರಾಣಿಗಳನ್ನು ಮನುಷ್ಯರೂ, ಮನುಷ್ಯರನ್ನು ಆ ಪ್ರಾಣಿಗಳೂ ಭೋಗ್ಯವಾಗಿ ಮಾಡಿಕೊಳ್ಳುತ್ತವೆ; ಮನುಷ್ಯರೂ ಒಬ್ಬರನ್ನೊಬ್ಬರು ತಮ್ಮ ಇಷ್ಟಪ್ರಾಪ್ತಿಗೆ ಬಳಸಿಕೊಳ್ಳುವದರಿಂದ ಅವರೊಳಗೂ ಭೋಕ್ತೃಭೋಗ್ಯ

ಸಂಬಂಧವು ಏರ್ಪಡುತ್ತದೆ. ಗಂಡಸರನ್ನು ಹೆಂಗಸರು, ಹೆಂಗಸರನ್ನು ಗಂಡಸರು, ಹುಡುಗರನ್ನು ದೊಡ್ಡವರು, ದೊಡ್ಡವರನ್ನು ಹುಡುಗರು, ಆಳುಗಳನ್ನು ಧಣಿಗಳು, ಧಣಿಗಳನ್ನು ಆಳುಗಳು, ಜನನಾಯಕರು ಸಾಮಾನ್ಯಜನರನ್ನು, ಮತದಾರರು ಆ ನಾಯಕರನ್ನು-ತಮ್ಮ ಭೋಗ್ಯವಾಗಿ ಬಳಸಿಕೊಳ್ಳುತ್ತಿರುವರು. ಹೆಚ್ಚೇನು, ಈ ಪ್ರಪಂಚವೆಂಬುದೇ ಭೋಗ್ಯಭೋಗಭೋಕ್ತೃಗಳ ರಾಶಿ ಎಂದು ಎಣಿಸಬಹುದಾಗಿದೆ.

ಮನುಷ್ಯನು ವೈಯಕ್ತಿಕವಾಗಿ ತನ್ನ ಭೋಗವನ್ನು, ಬಳಿಕ ತನ್ನವರ ಭೋಗವನ್ನು, ಆಮೇಲೆ ತನ್ನ ಗುಂಪಿನವರ ಅಥವಾ ತನ್ನ ದೇಶದವರ ಭೋಗವನ್ನು ಗುರಿಯಲ್ಲಿಟ್ಟುಕೊಂಡು ವ್ಯವಹರಿಸುತ್ತಿರುತ್ತಾನೆ. ಕಟ್ಟಕಡೆಯಲ್ಲಿ ಮನುಷ್ಯಜಾತಿಯನ್ನೇ ತನ್ನದೆಂದು ಭಾವಿಸಿಕೊಂಡು ಮಾನವರಿಗೆ ಇಷ್ಟವಾದದ್ದು ಒಳ್ಳೆಯದು, ಅನಿಷ್ಟವಾದದ್ದು ಕೆಟ್ಟದ್ದು-ಎಂದು ಪ್ರಪಂಚವನ್ನು ವಿಭಾಗಮಾಡಿಕೊಳ್ಳುತ್ತಾನೆ. ಭೂಗುಣ, ವಾಯುಗುಣ, ಸಮಾಜ, ವಿದ್ಯಾಭ್ಯಾಸ, ಕೃಷಿ, ವಾಣಿಜ್ಯ, ಸರಕಾರ- ಮುಂತಾದವುಗಳೆಲ್ಲ ಮನುಷ್ಯನಿಗೆ ಭೋಗ್ಯವಾದ ಇಷ್ಟವಸ್ತುಗಳನ್ನು ಸಂಗ್ರಹಿಸುವ, ಮತ್ತು ಅನಿಷ್ಟವಸ್ತುಗಳನ್ನು ಪರಿಹರಿಸುವ ದೃಷ್ಟಿಯಿಂದ ವಿಮರ್ಶನೀಯವಾಗಿವೆ.

ಈ ಲೋಕದಲ್ಲಿ ಮಾತ್ರವೇ ಅಲ್ಲ, ಮತ್ತೊಂದು ಲೋಕವಿದ್ದರೆ ಆ ಪರಲೋಕದಲ್ಲಿಯೂ ಮನುಷ್ಯನಿಗೆ ಇಷ್ಟವಾದ ಭೋಗವು ಬೇಕು ; ಈ ಜನ್ಮದಲ್ಲಿಯೇ ಅಲ್ಲ, ಮತ್ತೊಂದು ಜನ್ಮವಿದ್ದರೆ. ಆ ಜನ್ಮಾಂತರದಲ್ಲಿಯೂ ಅವನಿಗೆ ಇಷ್ಟವಾದ ಭೋಗ್ಯವು ಬೇಕು, ಅನಿಷ್ಟವಾದದ್ದು ಬೇಡ. ಆದ್ದರಿಂದಲೇ ಇಷ್ಟಾನಿಷ್ಟಪ್ರಾಪ್ತಿಪರಿಹಾರೋಪಾಯಗಳನ್ನು ಹೇಳಿಕೊಡುವ ಶಾಸ್ತ್ರಗಳನ್ನು ಅವನು ಏರ್ಪಡಿಸಿಕೊಂಡಿರುತ್ತಾನೆ. ಹೀಗೆ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗೆ ಅವನು ಹೊರಗಿನ ಕಾರ್ಯಕಾರಣಭಾವವನ್ನು ಮಾತ್ರ ಮನಸ್ಸಿಗೆ ತಂದುಕೊಳ್ಳದೆ ಸ್ವವ್ಯಾಪಾರದಿಂದಲೂ ಬೇಕಾದ ವಸ್ತುಗಳನ್ನು ಪಡೆಯುವದಕ್ಕೂ ಬೇಡವಾದವುಗಳನ್ನು ದೂರವಾಗಿಸುವದಕ್ಕೂ ಪ್ರಯತ್ನಿಸುತ್ತಾನೆ. ಈ ದೃಷ್ಟಿಯಿಂದ ಕರ್ತೃಕರ್ಮಫಲವ್ಯವಹಾರವೂ ಪ್ರಪಂಚದ ಒಂದು ಭಾಗವಾಗಿರುತ್ತದೆ ಎಂದಾಗುತ್ತದೆ. ಆದರಿಂದ ಇದನ್ನು ಕುರಿತು ಇನ್ನು ನಾವು ವಿಚಾರಮಾಡಬೇಕಾಗಿದೆ.

# ೨. ಕರ್ತೃಕರ್ಮಫಲವ್ಯವಹಾರ

(9-5-62)

ದೃಶ್ಯಪ್ರಪಂಚವು ಸುಂದರವಾಗಿದೆ, ಆಶ್ಚರ್ಯಜನಕವಾಗಿದೆ, ಕುತೂಹಲಜನಕವಾಗಿದೆ, ಸುಖದುಃಖಗಳ ಮಿಶ್ರಣವಾಗಿದೆ- ಎಂದು ಮಾನವನು ಕ್ರಮಕ್ರಮವಾಗಿ ಕಂಡುಕೊಂಡಬಳಿಕ ಇದರಲ್ಲಿ ಸುಖವನ್ನು ಮಾತ್ರ ಸಂಪಾದಿಸಿಕೊಂಡು ದುಃಖವನ್ನು ತೊಲಗಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ಇದರಿಂದ ಅವನಿಗೆ ಕ್ರಿಯಾಕಾರಕಫಲವ್ಯವಹಾರದ ಅರಿವು ಬರುತ್ತದೆ. ತನಗೆ ಬೇಕಾದ ಕ್ರಿಯೆಯನ್ನು, ಆವಶ್ಯವಾದ ಕಾರಕಗಳನ್ನುಪಯೋಗಿಸಿಕೊಂಡು ಮಾಡಿ, ಇಷ್ಟವಾದ ಫಲವನ್ನು ಪಡೆಯಬಹುದು- ಎಂಬ ಭಾವನೆಯಿಂದ ಅವನು ಈ ಪ್ರಪಂಚದಲ್ಲಿ ಒಬ್ಬ ಸಕ್ರಿಯಪ್ರಾಣಿಯಾಗುತ್ತಾನೆ.

ಕರ್ತೃಗಳಲ್ಲಿ ಸ್ವಾಭಾವಿಕಪ್ರವೃತ್ತಿಯೂ ಇದೆ, ಸವಿಮರ್ಶಪ್ರವೃತ್ತಿಯೂ ಇದೆ. ಪಶುಪಕ್ಷಿಮೃಗಕ್ರಿಮಿಕೀಟಾದಿಗಳು ಸ್ವಾಭಾವಿಕಪ್ರವೃತ್ತಿಯುಳ್ಳವುಗಳಾಗಿರುತ್ತವೆ. ಅವು ತಮಗೆ ಅನುಕೂಲವಾಗಿ ಕಂಡುಬರುವ ಶಬ್ದಸ್ಪರ್ಶರೂಪರಸಗಂಧಗಳಲ್ಲಿ ತೊಡಗುತ್ತವೆ, ಪ್ರತಿಕೂಲವೆಂದು ತೋರುವ ಶಬ್ದಾದಿಗಳಿಂದ ಹಿಮ್ಮೆಟ್ಟುತ್ತವೆ. ಆದರೆ ಅವಕ್ಕೆ ಹಿಂದಿನ ಅನುಭವದ ಸ್ಮರಣೆಯನ್ನು ಮನದಂದುಕೊಂಡು ಮುಂದಕ್ಕೆ ಹೀಗಾಗಬಹುದೆಂದು ನಿರೀಕ್ಷಿಸಿ ಅದರಂತೆ ಮಾಡುವ ವಿಚಾರಶಕ್ತಿಯೇನೂ ಇರುವದಿಲ್ಲ. ಮನುಷ್ಯನು ಹೀಗಲ್ಲ ; ಅವನು ತಾನು ಇಂದ್ರಿಯಗಳಿಂದ ಅರಿಯುವ ವಸ್ತುಗಳು ಇಂಥವೆಂದು ವಿಚಾರದಿಂದ ನಿಶ್ಚಯಿಸಿಕೊಳ್ಳುತ್ತಾನೆ ; ಅವುಗಳ ಸ್ವಭಾವವನ್ನು ತಿಳಿದುಕೊಂಡು ಇಷ್ಟವಾದುವನ್ನು ತನ್ನ ಬಳಿಗೆ ಬರುವಂತೆಯೂ ಅನಿಷ್ಟವಾದವನ್ನು ಬಾರದಂತೆಯೂ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳುವದಕ್ಕೂ ಆಕಸ್ಮಾತ್ತಾಗಿ ಬಂದರೆ ಅವುಗಳನ್ನು ನಿವಾರಿಸುವದಕ್ಕೂ ಪ್ರಯತ್ನಿಸುತ್ತಾನೆ. ಆದರಿಂದ ಅವನು ಸವಿಮರ್ಶಕರ್ತೃವಾಗಿರುತ್ತಾನೆ. ಯಂತ್ರಗಳು ಮತ್ತೊಬ್ಬರ ಇಷ್ಟಕ್ಕೋಸ್ಕರ ಗಾಗಿ ಕೆಲಸಮಾಡುತ್ತವೆ, ಪ್ರಾಣಿಗಳು ಅರಿತು ಸ್ವತಂತ್ರವಾಗಿ ಪ್ರವರ್ತಿಸುತ್ತವೆ, ಮನುಷ್ಯನು ವಿಚಾರಮಾಡಿ ಪ್ರವರ್ತಿಸುತ್ತಾನೆ. ಈಗ ನಾವು ಪರಿಶೀಲನೆ

ಗೆ ತೆಗೆದುಕೊಂಡಿರುವದು ಸವಿಚಾರವಾಗಿ ತೊಡಗುವ ಕರ್ತೃವಾದ ಮನುಷ್ಯನ ವಿಷಯ.

ಸವಿಚಾರಕರ್ತೃಗಳಲ್ಲಿಯೂ ಸೀಮಿತವಾದ ಜ್ಞಾನವುಳ್ಳವರು, ಶಾಸ್ತ್ರೀಯ ಜ್ಞಾನವುಳ್ಳವರು– ಎಂದು ಎರಡು ವಿಭಾಗಗಳನ್ನು ಮಾಡಬಹುದಾಗಿದೆ. ಸೀಮಿತವಾಗಿರುವ ಜ್ಞಾನವುಳ್ಳ ಸಾಮಾನ್ಯಜನರು ಹೊರಗಿನ ನೆಲ, ನೀರು, ಗಾಳಿ, ಬೆಂಕಿ, ಬಯಲು– ಇವುಗಳನ್ನೂ ಅವುಗಳಲ್ಲಿ ತೋರುವ ವಸ್ತುಗಳನ್ನೂ ತನಗೆ ಅನುಕೂಲವಾಗುವಂತೆ ಉಪಯೋಗಿಸಿಕೊಳ್ಳುವ ಕ್ರಮವನ್ನು ಬಹು ಕಾಲದ ಅಭ್ಯಾಸದಿಂದ ತಿಳಿದುಕೊಂಡಿರುತ್ತಾರೆ. ಮರಗಿಡಗಳ ಹಣ್ಣುಹಂಪಲು ಗಳನ್ನು, ಪ್ರಾಣಿಗಳ ಮಾಂಸವನ್ನು ಆಹಾರಕ್ಕೆ ಉಪಯೋಗಿಸುವದು, ಗಾಳಿ ಮಳೆಬಿಸಿಲು– ಮುಂತಾದವುಗಳಿಂದಾಗುವ ಕಷ್ಟವನ್ನು ಪರಿಹರಿಸಿಕೊಳ್ಳು ವದಕ್ಕೆ ಗುಡಿಸಲು ಮುಂತಾದವುಗಳನ್ನು ಮಾಡಿಕೊಳ್ಳುವದು, ಬೆಂಕಿಯ ಉಪಯೋಗದಿಂದ ಅಡಿಗೆಯನ್ನು ಮಾಡಿ ಸರಿಯಾದ ಆಹಾರವನ್ನು ಮಾಡಿ ಕೊಳ್ಳುವದು, ನಡೆಯುವದಕ್ಕೆ ಹಾದಿಯನ್ನು ಮಾಡಿಕೊಳ್ಳುವದು, ತಮ್ಮ ಸುತ್ತಮುತ್ತಲಿನ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ತನಗೆ ಅನುಕೂಲ ವಾಗಿರುವವರ ಸಹವಾಸದಲ್ಲಿರುವದು, ತನಗೆ ಹಗೆಗಳೆಂದು ತೋರುವ ಪ್ರಾಣಿ ಗಳನ್ನು ಹೊರಡಿಸಿ ಹೊಡೆದುಬಡಿದು ಓಡಿಸುವದು, ಸಮಾಜದ ನೀತಿ, ಜನಗಳು ಒಗ್ಗಟ್ಟಾಗಿ ವರ್ತಿಸುವದಕ್ಕೆ ಬೇಕಾದ ಕಟ್ಟುಕಟ್ಟಳೆಗಳು– ಮುಂತಾದದ್ದನ್ನು ಏರ್ಪಡಿಸಿಕೊಳ್ಳುವದು– ಇಂಥ ತಿಳಿವಳಿಕೆಯುಳ್ಳವರನ್ನು ಸೀಮಿತಜ್ಞಾನ ವುಳ್ಳವರ ಗುಂಪಿನಲ್ಲಿ ಸೇರಿಸಬಹುದು. ವಸ್ತುಗಳ, ಪ್ರಾಣಿಗಳ, ಮನುಷ್ಯರ, ಸಮಾಜದ ಸ್ವಭಾವವನ್ನು ಒಳಹೊಕ್ಕು ಪರೀಕ್ಷಿಸಿ ತಕ್ಕ ಪ್ರಯೋಗಗಳಿಂದ ಅವುಗಳನ್ನು ತಮ್ಮ ಉಪಯೋಗಕ್ಕೆ ಬಳಸಿಕೊಳ್ಳುವ ಉಪಾಯಗಳನ್ನು ಹುಡುಕಿ ತೆಗೆಯುವವರನ್ನು ಶಾಸ್ತ್ರೀಯಜ್ಞಾನವುಳ್ಳವರು ಎನ್ನಬಹುದು.

ಸೀಮಿತಜ್ಞಾನವುಳ್ಳ ಕರ್ತೃಗಳಾಗಲಿ ಶಾಸ್ತ್ರೀಯಜ್ಞಾನವುಳ್ಳ ಕರ್ತೃ ಗಳಾಗಲಿ ಈ ಪ್ರಪಂಚದಲ್ಲಿ ಗೊತ್ತಾದ ಕೆಲಕೆಲವು ಕ್ರಿಯೆಗಳಿಗೆ ಕೆಲಕೆಲವು ಫಲಗಳು ಇಂಥಿಂಥ ದೇಶಕಾಲನಿಮಿತ್ತಗಳಿಂದ ಆಗುತ್ತವೆ ಎಂಬುದನ್ನು ಗೊತ್ತುಮಾಡಿಕೊಂಡು ಅದರಂತೆ ಆಯಾ ಫಲಕ್ಕೆ ತಕ್ಕ ಕ್ರಿಯೆಗಳನ್ನು

ಕೈಕೊಳ್ಳುತ್ತಿರುತ್ತಾರೆ. ಉದಾಹರಣೆಗೆ ಬೀಜದಿಂದ ಗಿಡಮರಗಳಾಗುತ್ತವೆ- ಎಂಬ ಕಾರ್ಯಕಾರಣಭಾವವನ್ನು ಮತ್ತೆಮತ್ತೆ ನೋಡಿದವರು ಬೀಜವನ್ನು ಬಿತ್ತಿ ನೀರುಗೊಬ್ಬರಗಳನ್ನು ಹಾಕಿ ಗಿಡಮರಗಳನ್ನು ಬೆಳೆಯಿಸಿಕೊಳ್ಳುತ್ತಾರೆ ; ಮಣ್ಣಿನಿಂದ ಮಡಕೆಕುಡಿಕೆಗಳನ್ನು ಮಾಡಿಕೊಳ್ಳಬಹುದು' ಮಣ್ಣಿನಲ್ಲಿ ಮಡಿಕೆ ಮುಂತಾದವುಗಳಾಗುವ ಶಕ್ತಿಯಿದೆ ಎಂಬುದನ್ನು ಪ್ರಯೋಗಗಳಿಂದ ತಿಳಿದುಕೊಂಡವರು ಬೇಕಾದ ಕಾರಕಗಳನ್ನು- ಎಂದರೆ ಮಣ್ಣು, ತಿಗುರಿ, ಕೋಲು, ಮುಂತಾದ ಸಾಧನಗಳನ್ನು-ಉಪಯೋಗಿಸಿಕೊಂಡು ಮಡಕೆಕುಡಿಕೆ ಮುಂತಾದವನ್ನು ಮಾಡುವ ಉದ್ಯೋಗದಲ್ಲಿ ಪರಿಣತರಾಗುತ್ತಾರೆ. ಇದು ಸೀಮಿತ ಜ್ಞಾನವುಳ್ಳ ಕರ್ತೃಗಳಿಗೆ ಉದಾಹರಣೆ. ಹೀಗೆಯೇ ಸೂಕ್ಷ್ಮಮತಿಗಳಾದವರು ನೀರಿನಲ್ಲಿ ಆಮ್ಲಜನಕ, ಜಲಜನಕ- ಎಂಬ ಎರಡು ಅನಿಲಗಳು ಸಂಯುಕ್ತವಾಗಿವೆ ಎಂಬುದನ್ನು ಪ್ರಯೋಗಗಳಿಂದ ಕಂಡುಕೊಳ್ಳುತ್ತಾರೆ. ಅವರು ಆ ಎರಡು ಅನಿಲಗಳನ್ನೂ ಸಂಯೋಗವಾಗುವ ಸಂನಿವೇಶದ ಸಾಧನಗಳನ್ನೂ ಉಪಯೋಗಿಸಿಕೊಂಡು ನೀರನ್ನು ನಿರ್ಮಾಣಮಾಡಿಕೊಳ್ಳುತ್ತಾರೆ. ಇದು ಶಾಸ್ತ್ರೀಯವಾದ ಜ್ಞಾನವುಳ್ಳ ಕರ್ತೃಗಳಿಗೆ ಉದಾಹರಣೆ. ಒಂದು ಕ್ರಿಯೆಯಿಂದ ಫಲವಾಗಬೇಕಾದರೆ ಕಾರಕಗಳೆಲ್ಲ ಬೇಕು ; ಕರ್ತೃವಾದವನೂ ಆ ದೃಷ್ಟಿಯಿಂದ ಕಾರಕವೇ ಆಗಿದ್ದರೂ, ಅವನು ಕ್ರಿಯೆಯನ್ನುಂಟುಮಾಡುವದರಲ್ಲಿ ಸ್ವತಂತ್ರನು ; ಮಿಕ್ಕ ಕಾರಕಗಳು ಅವನಿಗೆ ಅಧೀನ. ಹೀಗೆ ಈ ಪ್ರಪಂಚದಲ್ಲಿ ಪ್ರತಿನಿಯತವಾದ ದೇಶಕಾಲನಿಮಿತ್ತಗಳನ್ನು ಪ್ರಯೋಗಿಸಿಕೊಂಡು ಕ್ರಿಯೆಗಳನ್ನು ಮಾಡುವ ಕರ್ತೃಗಳೂ ಅವುಗಳ ಫಲವನ್ನುಣ್ಣುವ ಭೋಕ್ತೃಗಳೂ ಅನೇಕರು ಇರುತ್ತಾರೆ.

ಕರ್ತೃಗಳೂ ಭೋಕ್ತೃಗಳೂ ಆಗಿರುವವರು ಈ ಪ್ರಪಂಚದಲ್ಲಿ ಅನೇಕರು ಇರುತ್ತಾರೆ. ಅವರಿಗೆ ದೇಶ, ಕಾಲ, ನಿಮಿತ್ತ- ಇವುಗಳಿಂದಾಗುವ ಕ್ರಿಯೆಗಳಿಗೆ ಇಂಥಿಂಥ ಫಲಗಳುಂಟಾಗುವವೆಂದು ಎಷ್ಟರಮಟ್ಟಿಗೆ ತಿಳಿದಿರುವದೋ, ಅಷ್ಟರಮಟ್ಟಿಗೆ ಕ್ರಿಯೆಗಳೂ ಫಲಗಳೂ ವಶವಾಗುವವು. ಇಂಥಿಂಥ ಕ್ರಿಯೆಗಳಿಂದ ಇಂಥಿಂಥ ಫಲಗಳನ್ನು ಅನುಭವಿಸಬಹುದು ಎಂಬ ಜ್ಞಾನವು ಅನೇಕರಿಗೆ ಆದರೆ, ಆಗ ಅವರಲ್ಲಿ ಪ್ರತಿಯೊಬ್ಬನೂ ಆಯಾ ಫಲವನ್ನು ಪಡೆಯುವದಕ್ಕೆ ಪ್ರಯತ್ನಿಸುತ್ತಾನೆಂಬುದು ನಿಜ. ಹೀಗೆ ಕ್ರಿಯೆಯಲ್ಲಿ

ತೊಡಗುವದಕ್ಕೆ ಮನುಷ್ಯನಲ್ಲಿ ರಾಗದ್ವೇಷಾದಿಗಳೇ ಕಾರಣವಾಗಿರುತ್ತವೆ. ತಿಳಿವಳಿಕೆಯೂ ಇದ್ದು ಫಲಭೋಗದ ಆಶೆಯೂ ಇದ್ದವರು ಆದಷ್ಟು ಬೇಗನೆ ಆಯಾ ಫಲವನ್ನು ನಿಶ್ಚಿತವಾಗಿ ಪಡೆದುಕೊಳ್ಳಬೇಕೆಂದು ಹವಣಿಸುವರು. ರಾಗದ್ವೇಷಾದಿಗಳು ಹೆಚ್ಚಾಗಿದ್ದು 'ಮತ್ತೊಬ್ಬರು ಎಲ್ಲಿ ಇದೇ ಫಲವನ್ನು ತಾವೇ ಪಡೆದು-ಕೊಂಡುಬಿಡುವರೊ !' ಎಂಬ ಚಿಂತೆಯೂ ಹತ್ತಿಕೊಂಡರೆ ಆಗ ಅಂಥ ಕರ್ತೃಭೋಕ್ತೃಗಳಲ್ಲಿ ಮೇಲಾಟವು ಹುಟ್ಟಿಕೊಳ್ಳುತ್ತದೆ

ಈಗ್ಗೆ ಭೌತಿಕವಿಜ್ಞಾನವು ಜನರಲ್ಲಿ ಹೆಚ್ಚಾಗಿ ಬೆಳೆದುಕೊಂಡಂತೆಲ್ಲ ಸುಖಸಾಮಗ್ರಿಗಳನ್ನು ಆದಷ್ಟುಮಟ್ಟಿಗೂ ರಾಶಿಹಾಕಿಕೊಳ್ಳಬೇಕೆಂಬ ಆಶೆಯು ಹೆಚ್ಚುತ್ತಿರುವದು. ಈಗಿನ ಕಾಲದಲ್ಲಿ ಒಂದೊಂದು ಜನಾಂಗದಲ್ಲಿಯೂ ವ್ಯಕ್ತಿವ್ಯಕ್ತಿಗಳಿಗೂ ಒಂದು ಗುಂಪಿನವರಿಗೂ ಮತ್ತೊಂದು ಗುಂಪಿನವರಿಗೂ ಪೈಪೋಟಿಯು ಅನೇಕಬಗೆಗಳಲ್ಲಿ ಹೆಚ್ಚುತ್ತಿದೆ. ಒಂದು ಜನಾಂಗದವರಿಗೂ ಮತ್ತೊಂದು ಜನಾಂಗದವರಿಗೂ ಪೈಪೋಟಿಯು ಹೆಚ್ಚುತ್ತಿದೆ. ಧನದಾಶೆ, ಅಧಿಕಾರ, ಇತರ ಜನರಮೇಲೆ ಅಧಿಪತಿಯಾಗಿರುವದು- ಇವೇ ಮುಂತಾದ ಫಲಗಳ ರಾಶಿಯಿಂದ ಕರ್ತೃವ್ಯಕ್ತಿಗಳೂ ಜನಾಂಗಗಳೂ ಮೇಲಾಟಕ್ಕೆ ಕೈಹಾಕಿವೆ. ಜನರ ಆಶೆಯನ್ನು ಪೂರೈಸುವದಕ್ಕೇ ಅಲ್ಲದೆ ತನಗೆ ಆಗದವರಿಗೆ ಆಯಾ ಫಲಗಳು ಸಿಕ್ಕಬಾರದೆಂದು ದ್ವೇಷಪ್ರಯುಕ್ತರಾದವರು ಅನೇಕ ಉಪಕರಣಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ರೈಲು, ಹಡಗುಗಳು, ಜಹಜುಗಳು, ವಿಮಾನಗಳು- ಇವುಗಳನ್ನು ತಮ್ಮ ಅನುಕೂಲ್ಯಕ್ಕೂ ಮತ್ತೊಬ್ಬರಿಗೆ ಕೇಡನ್ನು ಮಾಡುವದಕ್ಕೂ ಬಳಸುತ್ತಿದಾರೆ. ಲಕ್ಷಗಟ್ಟಲೆ ಜನರನ್ನು ಏಕಕಾಲದಲ್ಲಿ ನಾಶಗೊಳಿಸುವದಕ್ಕೆ ಆಟಂಬಾಂಬು ಮುಂತಾದ ಘಾತುಕಾಸ್ತ್ರಗಳನ್ನು ಉಪಯೋಗಿಸುತ್ತಿದಾರೆ. ಇವರ ಜೊತೆಗೆ ಚಂದ್ರ, ಅಂಗಾರಕ- ಮುಂತಾದ ಗ್ರಹಗಳನ್ನು ಮುಟ್ಟಿ ಸಾಧ್ಯವಾದರೆ ಅವನ್ನು ತಮ್ಮ ಉಪಯೋಗಕ್ಕೆ ಇಟ್ಟುಕೊಳ್ಳಬೇಕೆಂಬ ಹವಣಿಕೆಯೂ ಮಾನವರಿಗೆ ಹುಟ್ಟಿದೆ. ಇದಕ್ಕಾಗಿ ಗ್ರಹಗಳವರೆಗೆ ಹೋಗುವ ಕ್ಷಿಪಣಿಗಳನ್ನು ಹಾರಿಸುತ್ತಿರುತ್ತಾರೆ. ಇದೆಲ್ಲ ಕರ್ತೃತ್ವಭೋಕ್ತೃತ್ವಬುದ್ಧಿಯಿಂದ ಜನರಮೇಲೆ ಆಗುತ್ತಿರುವ ಪರಿಣಾಮ.

ಶಾಸ್ತ್ರೀಯವಿಜ್ಞಾನವನ್ನು ಜನರು ತಮ್ಮ ಉಪಯೋಗಕ್ಕೆ ವಿದ್ಯುದ್ವೇಗದಿಂದ ಉಪಯೋಗಿಸಿಕೊಳ್ಳುತ್ತಿದಾರೆ. ಮುಂದೆ ಎಷ್ಟೋ ವರ್ಷಗಳಮೇಲೆ

ಆಗುವ ಗ್ರಹಣಾದಿಗಳನ್ನು ಈಗಿನಿಂದಲೇ ವಿಜ್ಞಾನದ ಸಹಾಯದಿಂದ ಕಂಡು ಹಿಡಿದುಕೊಳ್ಳುವರು. ಭೂಗರ್ಭವನ್ನು ಶೋಧಿಸುವದರಿಂದ ಅದರೊಳಗೆ ಆಳವಾಗಿ ಹೊಕ್ಕು ಉದ್ಯೋಗಗಳಿಗೆ ಬೇಕಾದ ಲೋಹಗಳನ್ನೂ ತೈಲವನ್ನೂ ತೆಗೆದುಕೊಳ್ಳುತ್ತಿದಾರೆ. ಸಮುದ್ರದಲ್ಲಿರುವ ಪ್ರಾಣಿಗಳ ಸ್ವಭಾವವನ್ನು ಪರಿಶೀಲಿಸಿ ಅವುಗಳಿಂದಾಗುವ ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗಾಗಿ ಹವಣಿಸುತ್ತಿದಾರೆ; ವ್ಯವಸಾಯಕ್ರಮವನ್ನು ಸಂಸ್ಕರಿಸಿಕೊಂಡು ಮರುಭೂಮಿಯಲ್ಲೂ ಪೈರುಬೆಳೆಯುವದಕ್ಕೆ ಮೊದಲುಮಾಡಿರುತ್ತಾರೆ; ಮನುಷ್ಯರಿಗೆ ಒದಗಿಬರುವ ಅನೇಕರೋಗರುಜಿನಗಳನ್ನು ಪರಿಹರಿಸಿಕೊಳ್ಳುವ ಉಪಾಯಗಳನ್ನು ಶೋಧಿಸಿ ತೆಗೆಯುತ್ತಿದಾರೆ. ಇದೆಲ್ಲ ಮನುಷ್ಯನ ಕಾಮಕ್ರೋಧಾದಿಗಳ ರೂಪದ ಪ್ರವರ್ತಕದೋಷಗಳಿಂದಲ್ಲದೆ ಮತ್ತೇನು? ಚಂದ್ರಲೋಕದಲ್ಲಿ ವಾಸಮಾಡುವ ಕ್ರಮವನ್ನು ಕಂಡುಹಿಡಿಯುವದಾದರೆ ಅಲ್ಲಿ ತಾನೊಂದು ಭೋಜನಶಾಲೆ (ಖಾನಾವಳಿ) ಇಡುವೆನೆಂದು ಒಬ್ಬ ಉತ್ತರದೇಶದವನು ತನ್ನ ಇಷ್ಟೆಯನ್ನು ಪ್ರಕಟಿಸಿದನಂತೆ! ಹೀಗಿದೆ, ಅನೇಕ ಕರ್ತೃಭೋಕ್ತೃಗಳ ವ್ಯವಹಾರದ ಪರಿಣಾಮ!

ಈಗ ಇನ್ನೊಂದು ವಿಷಯದಕಡೆಗೆ ಚಿತ್ತವನ್ನು ಹೊರಳಿಸಬೇಕಾಗಿದೆ. ಯಾವನಾದರೂ ಹೀಗೆಂದು ತನ್ನೊಳಗೆತಾನು ವಿಚಾರಮಾಡುವದಕ್ಕೆ ಮೊದಲು ಮಾಡಿದನೆಂದು ಇಟ್ಟುಕೊಳ್ಳಿರಿ: ಈ ಪ್ರಪಂಚದಲ್ಲಿ ಅನೇಕ ಚೇತನಾಚೇತನ ವಸ್ತುಗಳು ಇರುವಂತೆ ನನಗೆ ಕಾಣುತ್ತಿದೆಯಲ್ಲ, ಇದೇನು ಬರಿಯ ನನ್ನ ನಂಬಿಕೆಯೊ, ಅಥವಾ ನಿಶ್ಚಿತವಾದ ತಿಳಿವಳಿಕೆಯೊ? ನಮ್ಮಂತೆಯೇ ಅನೇಕರು ಈ ಪ್ರಪಂಚದಲ್ಲಿರುತ್ತಾರೆ; ಅವರೆಲ್ಲರೂ ಹೀಗೆ ಚಿತ್ರವಿಚಿತ್ರವಾದ ವಸ್ತುಗಳೂ ಅನೇಕಜನರು ನಮ್ಮಂಥ ಕರ್ತೃಭೋಕ್ತೃಗಳೂ ಇವಾರೆಂದೇ ಹೇಳುತ್ತಿದಾರೆ. ಆದ್ದರಿಂದ ಬಹುಜನಸಂಮತವಾದದ್ದನ್ನು ನಿಶ್ಚಿತವೆಂದೇ ತಿಳಿಯಬೇಕಲ್ಲವೆ?' ಎಂದು ಯಾರಾದರೂ ಕೇಳಬಹುದು. ಆದರೆ ನನಗೆ ಅನೇಕಕರ್ತೃಭೋಕ್ತೃಗಳಿರುವಂತೆ ಕಾಣಿಸುತ್ತಿರುವರೆಂಬುದೇನೋ ನಿಜ. ಅದು ಲೌಕಿಕಜ್ಞಾನದಿಂದ ಸಿದ್ಧವಾಗುವದೇನೋ ನಿಜ; ಆದರೆ ಇದೇನು ಪರಮಾರ್ಥವಾದ ನಿಶ್ಚಿತಜ್ಞಾನವೊ, ಪ್ರತೀತಿಮಾತ್ರವೊ? ನನ್ನಂತೆಯೇ ಮಿಕ್ಕವರೂ ಕ್ರಿಯೆಯಲ್ಲಿ ತೊಡಗುವದು ಕಾಣಿಸುತ್ತಿದೆ; ಆದರೆ ಅವರ

ತಿಳಿವಳಿಕೆ ಹೇಗಿದೆಯೋ, ಯಾರು ಬಲ್ಲರು ? ಅವರೆಲ್ಲರೂ ಭೋಕ್ತೃಗಳೆಂದು ನಾನು ಅವರ ಕ್ರಿಯೆಗಳಿಂದ ಕಲ್ಪಿಸಿಕೊಂಡಿರುವದೇನೊ ನಿಜ ; ಆದರೆ ಅವರ ಅನುಭವವು ನನಗೆ ಹೇಗೆ ಗೊತ್ತು ? 'ನನಗೆ ಹೊಟ್ಟೆನೋವು ಆಗಿದೆ' ಎಂದು ಯಾರಾದರೂ ಹೇಳಿದರೆ, ಅದರ ಅನುಭವವು ನನ್ನ ಹೊಟ್ಟೆನೋವಿನ ಅನುಭವ ದಂತೆ ನನಗೇನೂ ಮನವರಿಕೆಯಾಗುವದಿಲ್ಲವಷ್ಟೆ ? ದೂರದಲ್ಲಿ ಒಬ್ಬನು ಗುಂಡುಹಾರಿಸಿದರೆ ಅದರ ಶಬ್ದವೇನೋ ಕೇಳಿಸುತ್ತದೆ ; ಅದನ್ನು ಗುಂಡಿನ ಶಬ್ದವೆಂದು ನಾನು ನಿಶ್ಚಯಿಸುತ್ತೇನೆಂಬುದೂ ಅನುಭವಸಿದ್ಧ. ಆದರೆ ಅದು ನಿಜವಾಗಿ ಗುಂಡಿನಶಬ್ದವೇ ಆಗಿದೆ ಎಂಬುದು ನನಗೆ ಹೇಗೆ ಗೊತ್ತು ? ಅದನ್ನು ಒಬ್ಬನು ಹಾರಿಸಿದ್ದೆಂದೂ ಅವನ ಕೈಯಲ್ಲಿ ತುಪಾಕಿಯಿತ್ತೆಂದೂ ನನಗೆ ಹೇಗೆ ಈಗ ಗೊತ್ತು ? ವಸ್ತುಗಳು ನನಗೆ ಹೇಗೆ ತೋರುತ್ತದೆಯೋ ಹಾಗೆಯೇ ಅವು ಇವೆ ಎಂಬುದನ್ನು ಹೇಗೆ ನಿಶ್ಚಯಿಸುವದು ? ಅನೇಕರು ನನ್ನಮುಂದೆ ಇದ್ದಾರೆಂದೂ ನನ್ನಂತೆ ಅವರು ವರ್ತಿಸುತ್ತಿದಾರೆಂದೂ ನನ್ನ ನಂಬಿಕೆ. ಅದು ಅನುಮಿತಜ್ಞಾನವೆಂಬುದೇನೋ ನಿಜ ; ಅದನ್ನು ದೃಢಪಡಿಸಿಕೊಳ್ಳು ವದು ಹೇಗೆ ? ಆಕಾಶದಲ್ಲಿ ದೂರದಲ್ಲಿ ಕೆಲವು ಚುಕ್ಕೆಗಳು ಕಾಣಿಸುತ್ತಿರು ತ್ತವೆ ; ಹಾಗೆ ನನಗೆ ಕಾಣಿಸುವದು ಮಾತ್ರವೊ, ನಿಜವಾಗಿ ಸ್ವತಂತ್ರವಾಗಿಯೇ ಅವು ಇವೆಯೊ ? ವೈಕಿನಿಂದ ಉಂಟಾದ ಶಬ್ದವು ಧ್ವನಿವರ್ಧಕದ್ವಾರಗಳಿಂದ ನಾನಾದಿಕ್ಕುಗಳಲ್ಲಿ ಹರಡಿದರೆ ನಿಜವಾಗಿಯೂ ಅಷ್ಟುಜನರು ಮಾತನಾಡು ತ್ತಿದಾರೆಂದು ಭಾವಿಸುವದಕ್ಕಿಲ್ಲವಷ್ಟೆ ? ಹೀಗೆ ನಮ್ಮ ಮುಂದೆ ಅನೇಕ ಕರ್ತೃ ಭೋಕ್ತೃಗಳು ತೋರುತ್ತಿದಾರೆಂಬುದು ಬರಿಯ ಯಂತ್ರವಿಶೇಷಗಳು ಮಾತ್ರ ವೊ, ನಿಜವಾಗಿಯೂ ಸ್ವತಂತ್ರರಾದ ಕರ್ತೃಭೋಕ್ತೃಗಳಿರುವರೊ ?

ಈ ವಿಚಾರಕ್ರಮವನ್ನು ಕೇಳಿ ಕೆಲವರು ನಗಬಹುದು. ಆದರೆ ತತ್ತ್ವ ನಿರ್ಧಾರಣಕ್ಕೆ ಹೊರಟಾಗ ಬರಿಯ ನಂಬಿಕೆ ಸಾಲದೆಂಬುದು ಸ್ಪಷ್ಟ. ಭೋಕ್ತೃತ್ವಕ್ಕೆ ಆಧಾರವಾಗಿ ನಮಲ್ಲಿ ಕರ್ತೃತ್ವವೂ ಇರುವಂತೆ ಕ್ರಿಯಾ ಕಾರಕವಿವೇಕಜ್ಞಾನವೂ ಭೋಕ್ತೃಭೋಗಭೋಗ್ಯವಿವೇಕಜ್ಞಾನವೂ ತಳ ಹದಿಯಾಗಿವೆ ಎಂಬುದು ಎಲ್ಲರ ಅನುಭವದಲ್ಲಿದೆ. ಆದ್ದರಿಂದ ಜ್ಞಾತೃ ಜ್ಞಾನಾದಿವ್ಯವಹಾರವನ್ನು ಈಗ ವಿಚಾರಿಸಬೇಕಾಗಿರುತ್ತದೆ.

# ೩. ಜ್ಞಾತೃಜ್ಞಾನಜ್ಞೇಯವ್ಯವಹಾರ

( 10-5-62 )

ಮಾನವನು ಬರಿಯ ಭೋಕ್ತೃವೂ ಅಲ್ಲ, ಅಥವಾ ಬರಿಯ ಕರ್ತೃ ಭೋಕ್ತೃವೂ ಅಲ್ಲ; ಜ್ಞಾತೃವೂ ಆಗಿರುತ್ತಾನೆ. ಕಲ್ಲು ಮಣ್ಣು-ಮುಂತಾದ ಜಡವಸ್ತುಗಳಿಗೆ ಭೋಕ್ತೃತ್ವವಿಲ್ಲ; ಕಲ್ಲುಬಂಡೆಯಮೇಲೆ ಮಳೆ ಬಿದ್ದು ನೀರು ಅತ್ತಿತ್ತ ಜಾರಿಹೋದರೆ, ಮಣ್ಣಿನಮೇಲೆ ಮಳೆಬಿದ್ದು ಅದು ಕೆಸರಾದರೆ, ಅವುಗಳಿಗೆ ಅದರಿಂದ ಸುಖವಾಗಲಿ ದುಃಖವಾಗಲಿ ಆಗುವದಿಲ್ಲ. ಮರಗಿಡಗಳಿಗೆ ಗಾಳಿ, ಮಳೆ, ಬಿಸಿಲು, ಬೆಳದಿಂಗಳು- ಮುಂತಾದವುಗಳಿಂದ ಸುಖದುಃಖಗಳು ಆಗುತ್ತವೆ ಎಂದು ಒಂದರ್ಥದಲ್ಲಿ ಭಾವಿಸಬಹುದು ಮಳೆ ಬಂದಾಗ ಗಿಡಮರಗಳು ನಲಿಯುತ್ತಿರುವಂತೆ ಕಾಣುತ್ತವೆ. ಬಿಸಿಲು ಬಲವಾದರೆ ಅವು ಬಾಡುತ್ತವೆ. ಆದರೆ ಪಶುಪಕ್ಷಿಮೃಗಾದಿಗಳಂತೆ ಅವುಗಳಿಗೆ ಆಗುವ ಸುಖದುಃಖಗಳು ಅಷ್ಟು ಸ್ಪಷ್ಟವಾಗಿ ಕಾಣುವದಿಲ್ಲ. ಪಶ್ವಾದಿಗಳಿಗೆ ಕರ್ತೃತ್ವಪೂರ್ವಕವಾದ ಭೋಕ್ತೃತ್ವವುಂಟು. ; ಅವಕ್ಕೆ ಹಸಿವಾದಾಗ ಅವು ತಮ್ಮ ಮೇವು ಇದ್ದಲ್ಲಿಗೆ ಹುಡುಕಿಕೊಂಡು ಹೋಗಿ ಆಹಾರವನ್ನು ತೆಗೆದುಕೊಂಡು ನಲಿಯುವದನ್ನೂ, ಹೊರಗಿನ ಛಳಿಮಳೆಗಾಳಿಬಿಸಿಲು ಮುಂತಾದವುಗಳಿಂದ ಅವು ಪರಿತಾಪಪಡುವದನ್ನೂ ನಾವು ಕಾಣಬಹುದು. ಮೆಚ್ಚಾಗಿರುವ ವಸ್ತುಗಳ ಕಡೆಗೆ ಅಥವಾ ಜನರಕಡೆಗೆ ಅವು ಮುಂಬರಿಯುವದನ್ನೂ ಅನಿಷ್ಟವಾದ ವಸ್ತುಗಳ ಪ್ರಾಣಿಗಳ ಅಥವಾ ಮನುಷ್ಯರ ಕಡೆಯಿಂದ ಅವು ಹಿಮ್ಮೆಟ್ಟುವದನ್ನೂ ತಮ್ಮ ಇಚ್ಛೆ, ದ್ವೇಷ, ಭಯ- ಮುಂತಾದವುಗಳಲ್ಲಿ ಕೆಲವನ್ನು ಕೆಲಕೆಲವು ಪ್ರಕಾರಗಳಿಂದ ಹೊರಪಡಿಸುವದನ್ನೂ ನಾವು ಕಾಣಬಹುದು. ಆದರೂ ಅವುಗಳಿಗೆ ತಮಗೆ ಬೇಕಾಗಿರುವ ಅಥವಾ ಬೇಡದಿರುವ ವಿಷಯಗಳನ್ನು ಕುರಿತು ವಿಚಾರಮಾಡುವ ಶಕ್ತಿಯಿರುವದಿಲ್ಲ. ಮನುಷ್ಯರು ತಮ್ಮ ಅಭಿಪ್ರಾಯಗಳನ್ನು ಕ್ರಮಪಡಿಸಿಕೊಂಡು ತಮ್ಮ ಸಹಚಾರಿಗಳಾದ ಮನುಷ್ಯರಿಗೆ ಆ ಅಭಿಪ್ರಾಯವನ್ನು ಭಾಷೆಯ ಮೂಲಕ ತಿಳಿಯಪಡಿಸಬಹುದು. ಆದ್ದರಿಂದ ಅವರು ವಿಚಾರಸಹಿತಜ್ಞಾನಪೂರ್ವಕವಾಗಿ ಪ್ರವರ್ತಿಸುವ ಕರ್ತೃ

ಗಳೂ ಭೋಕ್ತೃಗಳೂ ಆಗಿರುತ್ತಾರೆ. ಹೇಯ, ಉಪಾದೇಯ– ಎಂಬ ವಿವೇಕವಿದ್ದು, ಅನಿಷ್ಟವಾದವುಗಳನ್ನು ತಿರಸ್ಕರಿಸಿ ಇಷ್ಟಪದಾರ್ಥಗಳನ್ನು ಸಂಪಾದಿಸುವದಕ್ಕೂ ಅವುಗಳನ್ನು ಭೋಗಿಸುವದಕ್ಕೂ ಶಕ್ತರಾಗಿರುತ್ತಾರೆ. ಇದರಿಂದ ಮಾನವನ ವ್ಯವಹಾರದಲ್ಲಿ ಕರ್ತೃತ್ವಭೋಕ್ತೃತ್ವಗಳಿಗೆ ಹಿಂತಡಿಕೆಯಾಗಿ ಜ್ಞಾತೃತ್ವವೂ ಇರುತ್ತದೆ.

ಮಾನವನಿಗೂ ಮಿಕ್ಕ ಪ್ರಾಣಿಗಳಿಗೂ ಇರುವ ಒಂದು ವಿಶೇಷವೇನೆಂದರೆ, ಅವನು ವಿಚಾರಪೂರ್ವಕವಾಗಿ ಮಾಡುತ್ತಾನೆ. ವಿಚಾರಪೂರ್ವಕವಾಗಿ ಫಲವನ್ನು ಭೋಗಿಸುತ್ತಾನೆ. ಆದ್ದರಿಂದಲೇ ಮನುಷ್ಯನಿಗೇ ಜ್ಞಾನಕರ್ಮಶಾಸ್ತ್ರಗಳಲ್ಲಿ ವಿಶಿಷ್ಟಾಧಿಕಾರವಿರುತ್ತದೆ ಎಂದು ನಾವು ತಿಳಿಯುತ್ತೇವೆ. ಮನುಷ್ಯನು ವಿಷಯಗಳನ್ನು ತಿಳಿಯುತ್ತಾನೆ ಎಂಬುದಿಷ್ಟೇ ಅಲ್ಲ; 'ಇದು ಸರಿಯಾದ ತಿಳಿವಳಿಕೆ; ಇದು ತಪ್ಪು' ಎಂದೂ ಗೊತ್ತುಮಾಡಬಲ್ಲನು. ಪಾಶ್ಚಾತ್ಯರಲ್ಲಿ ತರ್ಕಶಾಸ್ತ್ರ(Logic) ಎಂಬುದು ವಿಚಾರಗಳ ಶಾಸ್ತ್ರವೆಂದು ಬಗೆಯುತ್ತಾರಾದರೂ ಅವರು ತರ್ಕವನ್ನು ವಿಷಯಕ್ಕೆ ಹೊಂದಿಸಿ ನಿಶ್ಚಯಿಸಬೇಕಾದ ಸಂದರ್ಭವೂ ಇದೆ. ಪರಸ್ಪರವಿರೋಧವಿಲ್ಲದಂತೆ ವಿಚಾರಮಾಡಿದರೆ ತರ್ಕವೇನೊ ಆಗುತ್ತದೆಯಾದರೂ ಜ್ಞಾನವನ್ನು ವಸ್ತುಸ್ಥಿತಿಗೆ ಹೊಂದಿಸಿಯೇ ನೋಡಬೇಕಾಗುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ಪ್ರಮಾಣಪ್ರಮೇಯಾದಿಷೋಡಶಪದಾರ್ಥಗಳ ವಿಚಾರವೇ ತರ್ಕವೆನಿಸಿಕೊಂಡಿದೆ. ವಸ್ತುವಿದ್ದಂತೆ ತಿಳಿಸುವ ಜ್ಞಾನವು ಸಮ್ಯಗ್ಜ್ಞಾನ ; ಅದಕ್ಕೆ ಕರಣವಾದದ್ದು ಪ್ರಮಾಣ. ಆದ್ದರಿಂದ ಮನುಷ್ಯನು ಬರಿಯ ಜ್ಞಾತೃವಲ್ಲ ; ಅವನು ಪ್ರಮಾತೃವೂ ಆಗಿರುತ್ತಾನೆ. ವಸ್ತುಗಳನ್ನು ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿದುಕೊಂಡು ಆಬಳಿಕ ಆಯಾ ವಸ್ತುವಿನಲ್ಲಿ ಉಂಟಾಗುವ ರಾಗದ್ವೇಷಗಳಿಂದ ಪ್ರವರ್ತಿಸುತ್ತಾನೆ, ಅಥವಾ ಹಿಂಜರಿಯುತ್ತಾನೆ. ಆದ್ದರಿಂದ ಮನುಷ್ಯನ ಕರ್ತೃತ್ವಾದಿವ್ಯವಹಾರಕ್ಕೆ ಪ್ರಮಾತೃತ್ವವೇ ಹಿಂತಡಿಕೆಯಾಯಿತು.

ಈಗ ಪ್ರಮಾಣದ ಸ್ವಭಾವವನ್ನು ಸ್ವಲ್ಪ ಒಳಹೊಕ್ಕು ವಿಚಾರಿಸಬೇಕಾಗಿದೆ. ಪ್ರಮಾಣವೆಂದರೆ ಯಥಾರ್ಥಜ್ಞಾನವು ; ವಸ್ತು ಹೇಗೆ ಇದೆಯೋ ಹಾಗೆಯೇ ತಿಳಿಸಿದರೆ ಮಾತ್ರ ಪ್ರಮಾಣವಾಗುತ್ತದೆ. ವಿಚಾರಕರಿಗೆ ಇಲ್ಲಿ ಒಂದು ಶಂಕೆಯಾಗುವ ಸಂಭವವಿದೆ : ಪ್ರಮಾಣವು ತಿಳಿಸಿದ್ದರಿಂದ

ಪದಾರ್ಥವು ಹಾಗೇ ಇದೆಯೆನ್ನಬೇಕೆ, ಅಥವಾ ಯಥಾರ್ಥವಾಗಿರುವದ ರಿಂದ, ಎಂದರೆ ಪದಾರ್ಥವು ಹೇಗಿದೆಯೋ ಹಾಗೆಯೇ ತಿಳಿಸುವದರಿಂದ ಅದನ್ನು ಪ್ರಮಾಣವೆನ್ನಬೇಕೆ ? ಈ ಶಂಕೆಯ ಪರಿಹಾರಕ್ಕೆಂದು ಶಾಸ್ತ್ರಜ್ಞರು ಒಂದು ಯುಕ್ತಿಯನ್ನು ತಂದೊಡ್ಡುತ್ತಾರೆ, ಪ್ರಮಾಣಗಳು ಯಥಾರ್ಥ ವಾಗಿಯೇ ವಸ್ತುವನ್ನು ತಿಳಿಸಿಕೊಡುವವೆಂಬುದು ಸಾಮಾನ್ಯನಿಯಮವಾದರೂ ಅವುಗಳಲ್ಲಿ ದೋಷವಿದ್ದಾಗ ಬೇರೆಯ ಪ್ರಕಾರದಿಂದಲೂ ತಿಳಿಸಬಹುದಾಗಿದೆ. ಇಷ್ಟುಮಾತ್ರದಿಂದ ಪ್ರಮಾಣಗಳನ್ನು ಪ್ರಮಾಣವಲ್ಲವೆನ್ನುವದಕ್ಕೆ ಬರುವದಿಲ್ಲ. ಪ್ರಮಾಣಗಳಿಗೆ ಸ್ವತಃಪ್ರಾಮಾಣ್ಯವಿದೆ, ಪರತಃ ಅಪ್ರಾಮಾಣ್ಯವಿದೆ. 'ಹಾಗಾದರೆ ಯಾವದಾದರೊಂದು ಸಂದರ್ಭದಲ್ಲಿ ಪ್ರಮಾಣವು ಯಥಾರ್ಥವಾಗಿ ತಿಳಿಸಿತೊ, ಇಲ್ಲವೊ ?– ಎಂಬುದನ್ನು ಗೊತ್ತುಮಾಡುವದು ಹೇಗೆ ?' ಎಂದು ಯಾರಾದರೂ ಕೇಳಿದರೆ ಅದಕ್ಕೂ ಅವರ ಉತ್ತರವಿದೆ. ಪ್ರಮಾಣಗಳ ಯೋಗ್ಯತೆಯನ್ನು ಸಂವಾದೀಕರಣದಿಂದ ನಿಶ್ಚಯಿಸಬೇಕು. ದೂರದಲ್ಲಿ ನೀರಿದೆ ಎಂದು ಆ ಕಡೆಗೆ ಹೋದವನಿಗೆ ನಿಜವಾದ ನೀರೇ ಸಿಕ್ಕಿದರೆ, ಅಂದರೆ ಅದನ್ನು ಕುಡಿದು ನೀರಡಿಕೆಯನ್ನು ಇಂಗಿಸಿಕೊಳ್ಳುವದಕ್ಕೆ ಸಾಧ್ಯವಾಯಿತೆಂದು ಕಂಡುಬಂದರೆ, ಆ ಪ್ರಮಾಣವು ಸಂವಾದಿಪ್ರವೃತ್ತಿಜನಕವಾಯಿತು ; ಆದ್ದರಿಂದ ಅದು ನಿರ್ದುಷ್ಟವೇ.

ಈ ಸಮಾಧಾನವು ಸ್ವಲ್ಪಮಟ್ಟಿಗೆ ಯುಕ್ತಿಯುಕ್ತವಾಗಿ ಕಂಡುಬಂದರೂ ಅನೇಕ ಪ್ರಮಾಣಗಳು ನಮಗೆ ಪರೀಕ್ಷೆಮಾಡಿದಮೇಲೂ ಕೈಕೊಡುತ್ತವೆ. ಏಕೆಂದರೆ ಅನೇಕ ಪ್ರಮಾಣಗಳು ಈಸಲ ನಾನು ಹೇಳಿದ್ದು ನಿಜ ಎಂದೇ ಹೇಳಿದಮೇಲೂ ಇನ್ನೊಂದು ಬಗೆಯಿಂದ ಪರಿಕ್ಷೆಮಾಡಿದ ಬಳಿಕ ಅವುಗಳ ತೀರ್ಮಾನವು ಸರಿಯಿಲ್ಲವೆಂದು ಗೊತ್ತಾಗಿಬಿಡುತ್ತದೆ. 'ನನ್ನಾಣೆ ನಿಜ, ಸತ್ಯವಾಗಿ ಹೇಳುತ್ತೇನೆ' ಎಂದು ಹೇಳುವ ಎಷ್ಟೋ ಜನ ಮೋಸಗಾರರು ನಮ್ಮ ಅನುಭವದಲ್ಲಿರುವಂತೆ ಇಂದ್ರಿಯಾದಿಪ್ರಮಾಣಗಳು ನಮಗೆ ಇದು ನಿಜ ಎಂಬ ನಂಬಿಕೆಯನ್ನು ಹುಟ್ಟಿಸಿದಮೇಲೂ ಅವುಗಳಿಂದಾಗಿದ್ದ ಜ್ಞಾನವು ಯಥಾರ್ಥ ವಲ್ಲ ಎಂದು ಗೊತ್ತಾಗಿಬಿಡುತ್ತದೆ. ಹಕ್ಸ್ಲಿ ಎಂಬಾತನು ಬರೆದಿರುವ ಶಾರೀರಕ ಶಾಸ್ತ್ರದಲ್ಲಿ ಶ್ರೀಮತಿ ಎ. (Mrs. A.) ಎಂಬಾಕೆಯ ವೃತ್ತಾಂತವೊಂದನ್ನು ಬರೆದಿರುತ್ತಾನೆ. ಆಕೆಗೆ ಮನೆಯ ಜಮಖಾನೆಯ ಮೇಲೆ ತನ್ನ ಬೈಕು

ಕೂತಿರುವಂತೆ ಸ್ಪಷ್ಟವಾಗಿ ಕಂಡಮೇಲೂ, ಹತ್ತಿರಕ್ಕೆ ಹೋಗಿ ಮುಟ್ಟಿ ನೋಡಿದಮೇಲೆ ಅಲ್ಲಿ ನಿಜವಾಗಿ ಬೆಕ್ಕಿಲ್ಲವೆಂದು ತಿಳಿಯಿತು. ತನ್ನ ಗಂಡನು ದೂರದೇಶಕ್ಕೆ ಹೋಗಿರುತ್ತಾನೆಂದು ನಿಶ್ಚಯವಾದಾಗಲೂ ಆತನು ಕೋಣೆಯ ಮುಂದೆ ಬಾಗಿಲಿನಲ್ಲಿ ಪ್ರತ್ಯಕ್ಷವಾಗಿ ನಿಂತಿದ್ದಂತೆ ಕಾಣುತ್ತಿತ್ತು. ಹೀಗೆ ಕಂಡರೂ ಕಾಣಲಿಲ್ಲ, ಕೇಳಿದರೂ ಕೇಳಲಿಲ್ಲ– ಎಂದು ಮುಂತಾಗಿ ಗೊತ್ತಾಗುವಾಗ ಪ್ರಮಾಣಗಳನ್ನು ಯಥಾರ್ಥಜ್ಞಾನಜನಕವೆನ್ನಬೇಕೋ, ಬೇಡವೋ ?– ಎಂಬ ಪ್ರಶ್ನೆ ಏಳಬಹುದಷ್ಟೆ ? ಅದಕ್ಕೆ ಹಕ್ಸ್ಲೀಯು ಹೇಳಿರುವದೇನೆಂದರೆ ಇಂದ್ರಿಯಗಳು ತಮಗೆ ಕಂಡದ್ದನ್ನೇ ಹೇಳುತ್ತವೆ ; ನಮ್ಮ ತೀರ್ಮಾನವು ತಪ್ಪು; ಅಷ್ಟೆ. ಕಪ್ಪೆಯಚಿಪ್ಪು ಥಳಥಳನೆ ಹೊಳೆದಾಗ ಹಾಗೆ ಹೊಳೆಯುವದು ನಿಜ, ಅದು ಬೆಳ್ಳಿ ಎಂದು ತಿಳಿದುಕೊಳ್ಳುವದು ನಮ್ಮ ತೀರ್ಮಾನದ ತಪ್ಪು. ಐಂದ್ರಿಯಕವಾದ ಅಂಥ ಭ್ರಾಂತಿ (Illusions) ಗಳೇ ಅಲ್ಲದೆ, ಇಲ್ಲದ್ದನ್ನು ಕಲ್ಪಿಸುವ ಭ್ರಾಂತಿಗಳೂ ಉಂಟು. ಉದಾಹರಣೆಗೆ ಸನ್ನಿ ಮುಂತಾದ ಅವಸ್ಥೆಗಳಲ್ಲಿ ನಮಗೆ ಕಾಣುವ ದೃಶ್ಯಗಳೂ ಕೇಳಬರುವ ಶಬ್ದಗಳೂ ಆ ಬಗೆಯ ಬಯಲುಭ್ರಾಂತಿಗಳು (Hallucinations). ಜನರು ತಾವುತಾನೇ ಕಲ್ಪಿಸಿಕೊಂಡ ಮನೋರಥ (Delusion) ರೂಪವಾದ ಭ್ರಾಂತಿಗಳೂ ಉಂಟು. ಒಬ್ಬ ಹುಚ್ಚನು ತಾನು ಒಂದು ನೀರನ್ನೆತ್ತುವ ಯಂತ್ರವೆಂದು ಕಲ್ಪಿಸಿಕೊಂಡನಂತೆ ! ಹೀಗೆ ಬಗೆಬಗೆಯ ಭ್ರಾಂತಿಗಳಾಗುವದುಂಟು. ನಮ್ಮ ಜ್ಞಾನವು ಪ್ರಾಮಾಣಿಕವೋ, ಅಲ್ಲವೋ ?– ಎಂಬುದನ್ನು ನಿಶ್ಚಯಿಸುವದು ಕಷ್ಟವೆಂದು ಇದರಿಂದ ಸಿದ್ಧವಾಗುತ್ತದೆ.

ಮತ್ತೆಮತ್ತೆ ಪರೀಕ್ಷಿಸುವದರಿಂದ ಅಥವಾ ಅನೇಕಜನರು ಸೇರಿ ವಿಚಾರಪೂರ್ವಕವಾಗಿ ನಿಶ್ಚಯಿಸುವದರಿಂದ ಪ್ರಮಾಣನಿಶ್ಚಯವಾಗಬಹುದೆಂದು ಕೆಲವರಿಗೆ ತೋರಬಹುದು ; ಆದರೆ ಹಾಗೆ ನಿಶ್ಚಯಿಸುವವರ ಮನಃಸ್ಥಿತಿಯೆಲ್ಲ ಒಂದೇ ಸದೋಷಸ್ಥಿತಿಯಲ್ಲಿದ್ದರೆ ಆಗ ಹೇಗೆ ? ಮೊಸರನ್ನು ತಿನ್ನುವದು ತಪ್ಪಿಲ್ಲವೆಂದು ಜ್ವರಗ್ರಸ್ತರು ಅನೇಕರು ನಿಶ್ಚಯಿಸಿದರೆತಾನೆ, ಅದು ಸರಿಯಾದ ತೀರ್ಮಾನವೆಂದಾದೀತೆ ? ಅನೇಕಜನ ಹುಚ್ಚರು ಒಗ್ಗಟ್ಟಿನಿಂದ ಹೇಳಿದ್ದು ನಿಜವೆಂದಾದೀತೇನು ? ಈಗ ಜ್ಞಾನಸಾಮಾನ್ಯವನ್ನೇ ಪರೀಕ್ಷೆಗಿಟ್ಟುಕೊಂಡಿದೇವೆ.

ಜ್ಞಾನವು ಪ್ರಮಾಣ, ಅದು ಯಥಾರ್ಥ– ಎಂಬುದನ್ನು ಗೊತ್ತುಮಾಡುವದು ಹೇಗೆ ?– ಎಂಬುದೀಗ ಪ್ರಶ್ನೆ. ಪದಾರ್ಥಗಳು ಪ್ರಮಾಣಸಿದ್ಧ,

ಕೇವಲ ಪ್ರತೀತಿಸಿದ್ಧ– ಎಂದು ಎರಡು ಬಗೆ ಎಂತ ನಾವು ತಿಳಿದಿದೇವೆ. ಶುಕ್ತಿರಜತ (ಕಪ್ಪೆಯಚಿಪ್ಪಿನ ಬೆಳ್ಳಿ) ಪ್ರತೀತಿಸಿದ್ಧ, ಅದು ಪ್ರಮಾಣಸಿದ್ಧ ವಲ್ಲ ; ಕಪ್ಪೆಯಚಿಪ್ಪೆಂಬುದು ಪ್ರಮಾಣಸಿದ್ಧ. ಆದರೆ ಪ್ರಮಾಣಗಳೇ ನಿಜವಾಗಿ ಹೇಳದೆಹೋದರೆ ಗತಿ ಏನು ? ನ್ಯಾಯಾಧಿಪತಿಯೇ ಲಂಚವನ್ನು ತೆಗೆದುಕೊಂಡರೆ ಹೇಗೆ ? ಪ್ರಮಾಣಗಳನ್ನು ಪರೀಕ್ಷೆಮಾಡುವದಕ್ಕೆ ಬೇರೆ ಪ್ರಮಾಣಗಳಿವೆಯೆ ? 'ಕಣ್ಣಾರೆ ಕಂಡದ್ದನ್ನು ಸುಳ್ಳೆನ್ನಬಹುದೆ ?–' ಎಂದು ಆಕ್ಷೇಪಿಸುವದು ಇಲ್ಲಿ ಸರಿಯಲ್ಲ ; ಏಕೆಂದರೆ ಕಣ್ಣು ನಿಜವನ್ನು ಹೇಳು ತ್ತದೆಯೆ, ಇಲ್ಲವೆ ?– ಎಂಬುದೇ ಇಲ್ಲಿ ಪ್ರಶ್ನೆ. ಪದಾರ್ಥವು ಇದ್ದಂತೆ ತಿಳಿಸಿದಮೇಲೆ ಪ್ರಮಾಣವಾಯಿತೊ, ಇಲ್ಲವೊ ?–' ಎಂಬ ಆಕ್ಷೇಪವೂ ಸರಿಯಲ್ಲ. ಪದಾರ್ಥವು ಇದ್ದಂತೆ ತಿಳಿಸಿತೊ, ಇಲ್ಲವೊ ?– ಎಂಬುದೇ ಅಲ್ಲವೆ, ಇಲ್ಲಿ ವಿಚಾರಣೀಯ ? ಭೌತಿಕಶಾಸ್ತ್ರಜ್ಞರು 'ಪದಾರ್ಥವೆಂದರೆ ಸ್ಥಳ ವನ್ನಾಕ್ರಮಿಸುವ ವಸ್ತು' ಎಂದು ಗೊತ್ತುಮಾಡಿದ್ದಾರೆ ; ಆದರೆ ಪದಾರ್ಥವಿದೆ ಎಂದರೇನರ್ಥ ? ಕನಸಿನಲ್ಲಿ ಕಣ್ಣಾರೆ ಪದಾರ್ಥವನ್ನು ಕಂಡಂತೆ, ಅದು ಒಂದಿಷ್ಟು ಸ್ಥಳವನ್ನು ಆಕ್ರಮಿಸಿಕೊಂಡಿರುವ ಕಲ್ಲು ಎಂಬಂತೆ, ನಿಶ್ಚಯ ವಾಯಿತು ಎಂದು ಇಟ್ಟುಕೊಳ್ಳಿರಿ. ಅದನ್ನೇನೂ ನಾವು ಪ್ರಮಾಣಿಸಿದ್ಧ ಪದಾರ್ಥವೆನ್ನುವದಿಲ್ಲ. ಎಚ್ಚರದಲ್ಲಿ ಕಾಣುವದು ಪ್ರಮಾಣಸಿದ್ಧವೊ, ಕೇವಲ ಪ್ರತೀತಿಸಿದ್ಧವೊ ? ಇದೀಗ ನಾವು ವಿಚಾರಮಾಡುವದಕ್ಕೆ ಹೊರಟಿರುವದು. ಪ್ರಮಾಣವ್ಯವಹಾರವು ಹೀಗೆ ಬುಡವಿಲ್ಲದೆ ತಟ್ಟಾಡುತ್ತಿರುವದರಿಂದ ಅದನ್ನವ ಲಂಬಿಸಿ ಉಂಟಾಗುವ ಕರ್ತೃತ್ವ ಭೋಕ್ತೃತ್ವವ್ಯವಹಾರಗಳ ಗತಿಯೇನು ?– ಎಂಬ ಶಂಕೆಯು ಎದ್ದುಕೊಳ್ಳುವದು ಸ್ವಾಭಾವಿಕವಾಗಿದೆ. ಆದ್ದರಿಂದ ಪ್ರಮಾಣಗಳ ತತ್ತ್ವವನ್ನು ಇನ್ನಷ್ಟು ಒಳಹೊಕ್ಕು ಪರೀಕ್ಷಿಸಬೇಕೆಂದಾಯಿತು. ಆ ಕೆಲಸಕ್ಕೆ ಈಗ ಹೊರಡೋಣ.

# ೪. ಅವಿದ್ಯಾವ್ಯವಹಾರ

(11—5—62)

ಭೋಕ್ತೃತ್ವ, ಕರ್ತೃತ್ವ, ಜ್ಞಾತೃತ್ವ– ಈ ವ್ಯವಹಾರಗಳಲ್ಲಿ ಮೊದಲು ಮೊದಲಿನದಕ್ಕೆ ಅಪರದರ ಮುಂದಿನದು ಅವಶ್ಯವಾಗಿರುತ್ತದೆ– ಎಂದು ತಿಳಿದು ಕೊಂಡದ್ದಾಯಿತು. ಭೋಕ್ತೃತ್ವವು ನಮ್ಮ ನಿಜವಾದ ಸ್ವಭಾವವೆನ್ನ ಬೇಕಾದರೆ, ಕರ್ತೃತ್ವವು ನಿಜವಾಗಿ ನಮ್ಮ ಸ್ವಭಾವವಾಗಿರಬೇಕು; ಕರ್ತೃತ್ವವು ನಮ್ಮ ಸ್ವಭಾವವೇ ಎನ್ನುವದಕ್ಕೆ ಜ್ಞಾತೃತ್ವವು ನಮ್ಮ ಸ್ವಭಾವವೇ ಆಗಿರ ಬೇಕು. ಜ್ಞಾತೃತ್ವವು ನಮ್ಮ ಸ್ವಭಾವವಲ್ಲದಿದ್ದರೆ, ಜ್ಞಾತೃತ್ವದಿಂದ ನಾವು ನಿಶ್ಚಯಿಸಿಕೊಳ್ಳುವ ಯಾವ ಪದಾರ್ಥದ ತತ್ತ್ವವೂ ನಿಶ್ಚಿತವಲ್ಲವೆಂದಾದರೆ, ಯಾವ ಶಾಸ್ತ್ರಕ್ಕೂ ಬೆಲೆಯಿಲ್ಲದೆಹೋಗುತ್ತದೆ. ಏಕೆಂದರೆ ನಾವೆಲ್ಲರೂ ಪ್ರಮಾತೃಗಳು, ಯಥಾರ್ಥಜ್ಞಾನವನ್ನು ಪಡೆದುಕೊಂಡು ಆ ಜ್ಞಾನದ ಬಲದಿಂದ 'ಪ್ರವೃತ್ತಿನಿವೃತ್ತಿಗಳನ್ನು ಮಾಡಿ ಇಷ್ಟಾನಿಷ್ಟಪ್ರಾಪ್ತಿಪರಿಹಾರ ಗಳನ್ನು ಮಾಡಿಕೊಳ್ಳುವದಕ್ಕೆ ಶಕ್ತರು-ಎಂಬ ಗಟ್ಟಿಯಾದ ನಂಬಿಕೆಯಮೇಲೆ ಯೇ ಎಲ್ಲಾ ಶಾಸ್ತ್ರಗಳೂ ಹೊರಟಿರುತ್ತವೆ. ಆದ್ದರಿಂದ 'ಜ್ಞಾನವು ಯಥಾರ್ಥ ವನ್ನು ತಿಳಿಸಲೇಆರದು, ಇಂಥ ಜಾನವು ಪ್ರಮಾಣವು ಎಂದು ನಿಶ್ಚಯಿಸು ವದಕ್ಕೆ ಬರುವದೇ ಇಲ್ಲ– 'ಎಂದು ನಿನ್ನೆಯ ದಿನದ ವಿಚಾರದಲ್ಲಿ ನಿರ್ಣಯ ಮಾಡಿದ್ದು ಅತಿತರ್ಕವೆಂದೇ ಕಾಣುತ್ತದೆ. ಏಕೆಂದರೆ ಒಂದು ತರ್ಕವನ್ನು ಮತ್ತೊಂದು ತರ್ಕದಿಂದ ಯಾರಾದರೂ ಹೊಡೆದುಹಾಕಬಹುದು. ಆದರೆ ನಿರೀಕ್ಷಣ, ಪರೀಕ್ಷಣ, ಸಂವಾದೀಕರಣಗಳಿಂದ ವಸ್ತುತತ್ತ್ವವನ್ನು ನಿರ್ಣ ಯಿಸುವ ಶಾಸ್ತ್ರಜ್ಞಾನವನ್ನೂ ನಿಶ್ಚಿತಜ್ಞಾನವಲ್ಲವೆಂದರೆ ಹೇಗೆ ? ಗಣಿತಶಸ್ತ್ರವು ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದ ಫಲಿತಾಂಶವನ್ನು ತಿಳಿಸುವ ಶಾಸ್ತ್ರವು (Exact Science) · ನಕ್ಷತ್ರವಿದ್ಯೆಯು(astronomy) ಗಣಿತದಮೇಲೆ ನಿಂತಿರುತ್ತದೆ ; ಆ ಶಾಸ್ತ್ರವು ಗ್ರಹಣ, ಗ್ರಹಗಳ ಉದಯಾಸ್ತಗಳು–ಮುಂತಾದ ವುಗಳನ್ನು ಎಲ್ಲರಿಗೂ ಪ್ರತ್ಯಕ್ಷವಾಗುವಂತೆ ಸಿದ್ಧಪಡಿಸಿದ್ದನ್ನು ಅನಿಶ್ಚಿತವೆಂದು ಹೇಳುವದು ವಿವೇಕದ ಮಾತಾದೀತೆ ? –ಎಂಬ ಶಂಕೆ ನಮಗೆ ಬರುತ್ತದೆ.

ಈ ಶಂಕೆಗೆ ಪರಿಹಾರವನ್ನು ಹೇಳುವದಕ್ಕೆ ಮೊದಲು ಶಂಕೆಗೆ ಆಧಾರವಾಗಿರುವ ನಂಬಿಕೆಯನ್ನೇ ಮೊದಲು ಪರೀಕ್ಷಿಸಬೇಕಾಗುತ್ತದೆ. ಏಕೆಂದರೆ ಶಾಸ್ತ್ರಗಳೆಲ್ಲ ಪ್ರಮಾಣಬದ್ಧವಾಗಿಯೇ ವಿಚಾರವನ್ನು ಮಾಡಿ ತತ್ತ್ವನಿರ್ಣಯವನ್ನು ಮಾಡುತ್ತಿವೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಪ್ರಮಾಣಜ್ಞಾನ ಎಂದು ನಾವು ವ್ಯವರಿಸುತ್ತಿರುವದು ಅಬಾಧಿತವಾದ ಜ್ಞಾನವೆ ? ಅದು ನಂಬಿಕೆಯಮೇಲೆ ನಿಂತಿರುತ್ತದೆಯೊ, ಅಥವಾ ವಿಚಾರಮಾಡಿದಮೇಲೆ ನಿಲ್ಲುವ ತೀರ್ಪಿನಮೇಲೆ ನಿಂತಿದೆಯೊ ? -ಎಂಬುದನ್ನು ಮೊದಲು ವಿಚಾರಮಾಡಬೇಕು. ಪ್ರತ್ಯಕ್ಷಸಿದ್ಧವಾದ್ದನ್ನು ಪರಮಾರ್ಥವೆನ್ನಬಹುದೆ ?– ಎಂಬುದೀಗ ನಾವು ವಿಚಾರಮಾಡುವದಕ್ಕೆ ಹೊರಟಿರುವ ವಿಷಯ. ಅದು ವಿವಾದಗ್ರಸ್ತವಾಗಿದೆ ಎಂದು ನಾವು ಜ್ಞಾನದ ಸ್ವಭಾವದ ವಿಚಾರದಿಂದ ಕಂಡುಕೊಂಡದ್ದಾಗಿದೆ. ವ್ಯವಹಾರದಲ್ಲಿ ಅದನ್ನು ನಾವುಗಳೆಲ್ಲರೂ ಪರಮಾರ್ಥವೆಂದು ನಂಬುತ್ತೇವೆ ಎಂಬುದನ್ನು ಶಂಕಾವಾದಿಯು ಮುಂದಕ್ಕೊಡ್ಡಿದಮಾತ್ರದಿಂದ ಜ್ಞಾನಸ್ವಭಾವದ ವಿಚಾರವು ತಪ್ಪೆಂದು ಹೇಗೆತಾನೆ ಸಿದ್ಧವಾದೀತು ? ಬರ್ಕ್ಲಿ (Berkley) ಎಂಬಾತನು ನಮಗೆ ಕಾಣುವ ಪದಾರ್ಥಗಳೆಂಬಿವು ಕೆಲಕೆಲವು ಐಂದ್ರಿಯಕಜ್ಞಾನವಿಶೇಷಗಳು (Sensations) ಎಂದು ಅಭಿಪ್ರಾಯಪಟ್ಟಿದ್ದನು. ಉದಾಹರಣೆಗೆ ಮಾವಿನಹಣ್ಣು ಎಂದು ನಾವು ಕರೆಯುತ್ತಿರುವದು ಒಂದಾನೊಂದು ಆಕಾರ, ಒಂದು ಬಣ್ಣ, ಒಂದುಬಗೆಯ ವಾಸನೆ, ಒಂದು ಬಗೆಯ ರುಚಿ– ಇಂಥ ಗುಣಗಳುತಾನೆ ? ಈ ಗುಣಗಳಿಗಿಂತ ವ್ಯತಿರಿಕ್ತವಾಗಿ ಹಣ್ಣೆಂಬ ಪದಾರ್ಥವು ಯಾವದೂ ನಮಗೆ ಗೋಚರವಾಗುತ್ತಿಲ್ಲ ; ಗುಣಗಳಾದರೊ, ಒಂದೊಂದು ಇಂದ್ರಿಯಕ್ಕೆ ಹೊಳೆಯುವ ಜ್ಞಾನಮಾತ್ರವಾಗಿದೆ. ಆದ್ದರಿಂದ ನೋಡುವದು, ಕೇಳುವದು, ಮೂಸುವದು, ಮುಟ್ಟುವದು, ಸವಿಯುವದು– ಇವೆಲ್ಲ ಸೇರಿಯೇ ನಾವು ಹಣ್ಣು ಎನ್ನುತ್ತಿರುವ ಶಬ್ದಕ್ಕೆ ಅರ್ಥ. ವಿಷಯವನ್ನು ಮೂಸುವದಕ್ಕೆ ಬೇರೆಯಾಗಿ ಗಂಧವಿಲ್ಲ, ನೋಡುವದಕ್ಕೆ ಬೇರೆಯಾದ ರೂಪವಿಲ್ಲ– ಇತ್ಯಾದಿ. ಹೀಗಿರುವದರಿಂದ ಮನಸ್ಸಿನ ಭಾವಗಳ (ideas) ಗುಂಪುಮಾತ್ರವೇ ಪದಾರ್ಥವೆಂದು ನಾವು ಕರೆಯುತ್ತಿರುವದು– ಎಂದು ಆ ಬರ್ಕ್ಲಿ ಎಂಬಾತನು ಅಭಿಪ್ರಾಯಪಟ್ಟಿದ್ದನ್ನು ಕೇಳಿ ಜಾನ್ಸನ್ ಎಂಬಾತನು ಒಂದು ಕಲ್ಲನ್ನು ಕಾಲಿನಿಂದಒದೆದು 'ಈ ಅಭಿಪ್ರಾಯವನ್ನು ಖಂಡಿಸಿದೆನು'

ಎಂದನಂತೆ ! ಇಲ್ಲಿ ಜಾನ್ಸನನಿಗೆ ಬರ್ಕ್ಲಿಯ ಅಭಿಪ್ರಾಯವು ಸರಿಯಾಗಿ ತಿಳಿಯ ಲಿಲ್ಲ; ಏಕೆಂದರೆ ಕಲ್ಲನ್ನು ನೋಡುವದಕ್ಕಾಗಲಿ ಮುಟ್ಟುವದಕ್ಕಾಗಲಿ ಒದೆ ಯುವದಕ್ಕಾಗಲಿ ಆಗುವದಿಲ್ಲವೆಂದೇನೂ ಬರ್ಕ್ಲಿಯು ಹೇಳಲಿಲ್ಲ. ಇವೆಲ್ಲ ನಮ್ಮ ಮನಸ್ಸಿನ ವಿಜ್ಞಾನಗಳು ಮಾತ್ರವೇ ಆಗಿವೆ- ಎಂದುಅವನು ಹೇಳಿದ್ದು. ಹೀಗೆಯೇ ಪ್ರಕೃತದಲ್ಲಿಯೂ ಜ್ಞಾನವು ಪ್ರಮಾಣವೆಂಬುದು ಹೇಗೆ ಸಿದ್ಧ ವಾಯಿತು ?–ಎಂಬ ಆಕ್ಷೇಪಕ್ಕೆ ಶಾಸ್ತ್ರಗಳಲ್ಲಿ ಪ್ರತ್ಯಕ್ಷಾದಿವ್ಯವಹಾರವಿಲ್ಲವೆ ? ಜನರು ಪ್ರತ್ಯಕ್ಷವಾಗಿರುವದನ್ನು ನಿಜವೆಂದು ನಂಬುತ್ತಾರೆಯಲ್ಲವೆ ?– ಎಂದು ಪರಿಹಾರವನ್ನು ಹೇಳಿದರೆ ಸರಿಯಾದೀತೆ ? ಶಾಸ್ತ್ರಕಾರರೂ ಲೋಕದ ಜನರೂ ಪ್ರತ್ಯಕ್ಷ, ಅನುಮಾನ- ಎಂದು ಮುಂತಾಗಿ ಪ್ರಮಾಣವ್ಯವಹಾರವನ್ನು ಮಾಡುವದು ನಿಜ ; ಅದನ್ಮಾತ್ರಕ್ಕೆ ಅವು ಸತ್ಯವೆಂದಾದೀತೆ ? ಚದುರಂಗದಲ್ಲಿ 'ಆನೆ', 'ಒಂಟೆ', 'ಕುದುರೆ'- ಎಂದು ಮುಂತಾಗಿ ವ್ಯವಹಾರಮಾಡಿದಮಾತ್ರ ದಿಂದ ಚದುರಂಗದ ಕಾಯಿಗಳು ನಿಜವಾಗಿಯೂ ಆನೆ, ಒಂಟೆ, ಕುದುರೆ- ಎಂಬ ಪ್ರಾಣಿಗಳೇ ಆದಾವೇನು ? ಶ್ರೀಹರ್ಷನೆಂಬಾತನು "ಖಂಡನಖಂಡಖಾದ್ಯ" ವೆಂಬ ಗ್ರಂಥವೊಂದನ್ನು ಬರೆದಿರುತ್ತಾನೆ. ಅದರಲ್ಲಿ ಅವನು 'ವಾದಿಪ್ರತಿ ವಾದಿಗಳು ಒಬ್ಬರೊಡನೊಬ್ಬರು ವಿಷಯಗಳನ್ನು ಚರ್ಚಿಸುವಾಗ ಪ್ರಮಾಣಾದಿ ವ್ಯವಹಾರವನ್ನು ಮಾಡುತ್ತಾರೆ. ಆದರೆ ಪ್ರಮಾಣಾದಿಗಳು ಸತ್ಯವೆಂದೇ ಅಷ್ಟರಿಂದ ಇಟ್ಟುಕೊಳ್ಳಬಹುದೆ ?' ಎಂಬ ವಿಷಯವನ್ನು ವಿಚಾರಕ್ಕೆ ತೆಗೆದು ಕೊಂಡಿರುತ್ತಾನೆ. ಪದಾರ್ಥಗಳನ್ನು ಸತ್ಯವೆಂದು ಕೆಲವರೂ ನಿಃಸ್ವಭಾವ ವೆಂದು ಮತ್ತೆ ಕೆಲವರೂ ವಾದಿಗಳು ಹೇಳುತ್ತಿರುವದರಿಂದ ವಾದಕ್ಕಿಂತ ಮೊದಲೇ ಪ್ರಮಾದಿಗಳು ಸತ್ಯ ಅಥವಾ ಅಸತ್ಯ- ಎಂದಿಟ್ಟುಕೊಳ್ಳುವದು ಯುಕ್ತವಲ್ಲ ಎಂದು ಅವನು ತೀರ್ಮಾನಿಸಿರುತ್ತಾನೆ. ಅದು ಯುಕ್ತವೂ ಆಗಿದೆ. ಏಕೆಂದರೆ ವಿಚಾರಮಾಡದೆಯೇ ಯಾವದನ್ನಾದರೂ ಸರಿ, ಅಥವಾ ತಪ್ಪು– ಎಂದಿಟ್ಟುಕೊಳುವದಾದರೆ ವಿಚಾರವಾದರೂ ಏತಕ್ಕೆ ?

ಈವರೆಗೆ ನಾವು ಪ್ರಮಾತೃಗಳು- ವಸ್ತುಗಳನ್ನು ಅರಿತು ಅವುಗಳ ತತ್ತ್ವವನ್ನು ನಿಶ್ಚಯಿಸಬಲ್ಲ ಸ್ವಭಾವದವರು– ಎಂದಿಟ್ಟುಕೊಂಡೇ ವಿಚಾರ ಮಾಡಿದ್ದಾಯಿತು. ಆದರೆ ನಮಗೆ ಪ್ರಮಾತೃತ್ವವು ಸ್ವಭಾವದಿಂದಲೂ ಇದೆಯೆ ? - ಎಂಬುದನ್ನು ಈಗ ಪರೀಕ್ಷಿಸಿನೋಡೋಣ. ಪ್ರಮಾತೃತ್ವವೇ ನಮ್ಮ

ಸ್ವಭಾವವಲ್ಲದೆ ಇದ್ದರೆ ಪ್ರಮಾಣಗಳಿಂದ ವಿಷಯಗಳನ್ನು ನಿಶ್ಚಯಿಸುತ್ತೇವೆ– ಎಂದಿಟ್ಟುಕೊಳ್ಳುವದು ತಪ್ಪೇ ಆಗುವದಷ್ಟೆ ? ನಾವು ಪ್ರಮಾತೃಗಳು ಎಂದೇ ಎಲ್ಲರೂ ಇಟ್ಟುಕೊಂಡು ವ್ಯವಹರಿಸುತ್ತಿದೇವೆಂಬುದು ನಿಜ; ಆದರೆ ನಿಜವಾಗಿಯೂ ನಾವು ಪ್ರಮಾತೃಗಳೆ ? ನಾವು ಪ್ರಮಾತೃಸ್ವಭಾವವುಳ್ಳವರು ಎಂಬುದು ಹೇಗೆ ಸಿದ್ಧವಾಗುತ್ತದೆ? ಇದನ್ನು ಈಗ ವಿಚಾರಮಾಡಿ ನೋಡೋಣ.

ಪ್ರಮಾತೃ ಎಂದರೆ ಪ್ರಮಾಣಗಳನ್ನು ಉಪಯೋಗಿಸಿ ಪ್ರಮೇಯದ ತತ್ತ್ವವನ್ನು ನಿಶ್ಚಯಿಸುವದಕ್ಕೆ ಹೊರಡುವವನು. ಅಲ್ಲವೆ ? ಇಲ್ಲಿ ಪ್ರಮೇಯವೆಂದರೆ ತಿಳಿದು ನಿಶ್ಚಯಿಸಬೇಕಾಗಿರುವ ವಸ್ತು. ದೂರದಲ್ಲಿ ಒಂದು ಹಾವು ಇರುವಂತೆ ನಮಗೆ ಕಾಣಿಸುತ್ತದೆ; ಆಗ ಅಲ್ಲಿ ಹಾವಿದೆ ಎಂದು ನಿಶ್ಚಯಿಸುವ ಮುಂಚೆ– 'ಹಾವಿರುವಂತೆ ಕಾಣುತ್ತದೆ; ನಿಜವಾಗಿ ಹಾವೊ, ಇಲ್ಲವೆ ಹಗ್ಗವೊ ?–' ಎಂದು ನಮಗೆ ಸಂಶಯವುಂಟಾಗಬಹುದು. ಆ ಬಳಿಕ ನಾವು ಹತ್ತಿರಕ್ಕೆ ಹೋಗಿ ಪರೀಕ್ಷಿಸಿನೋಡಿ ಅದನ್ನು ನಿಶ್ಚಯಿಸುತ್ತೇವೆ, ಅಲ್ಲವೆ ? ಇಲ್ಲಿ ಹಾವಿರುವಂತೆ ಕಂಡದ್ದು ನಮ್ಮ ಕಣ್ಣಿಗೆ, ಸಂಶಯವು ಬಂದದ್ದು ನಮ್ಮ ಮನಸ್ಸಿಗೆ; ಕಣ್ಣು, ಮನಸ್ಸು– ಎರಡೂ ನಮ್ಮ ಶರೀರವನ್ನು ಆಶ್ರಯಿಸಿಕೊಂಡೇ ವ್ಯಾಪಾರಮಾಡುತ್ತಿರುತ್ತವೆ. ನಾವು ಹಾವಿನ ಬಳಿಗೆ ಹೋದದ್ದು, ಅದನ್ನು ಪರೀಕ್ಷಿಸಿದ್ದು, ಹಗ್ಗವಿರಬಹುದೆಂದು ಸಂಭಾವಿತವಾದದ್ದು, ಬಳಿಕ ಧೈರ್ಯದಿಂದ ಮುಟ್ಟಿನೋಡಿ ಹಗ್ಗವೇ ಎಂದು ನಿಶ್ಚಯಿಸಿದ್ದು– ಇವೆಲ್ಲವೂ ಶರೀರದ ಸಹಾಯದಿಂದಲೇ. ಅಂತೂ ಕಣ್ಣು ಮುಂತಾದ ಇಂದ್ರಿಯಗಳು, ಮನಸ್ಸು, ಇವೆರಡಕ್ಕೂ ಆಧಾರವಾಗಿರುವ ಶರೀರ– ಇಷ್ಟು ಇಲ್ಲದೆ, ಮತ್ತು ಶರೀರವನ್ನೇ ನಾನೆಂದೂ ಇಂದ್ರಿಯಮನಗಳನ್ನು ನನ್ನವೆಂದೂ ಇಟ್ಟುಕೊಳ್ಳದೆ 'ಹಗ್ಗವೆಂದು ಪ್ರತ್ಯಕ್ಷಪ್ರಮಾಣದಿಂದ ನಿಶ್ಚಯಿಸಿದೆನು' ಎಂದು ಯಾರೂ ಹೇಳಲಾರರು. ಅಲ್ಲವೆ ? ಈ ಅಭಿಪ್ರಾಯವನ್ನು ಶಂಕರಾಚಾರ್ಯರು ಆಕ್ಷೇಪಸಮಾಧಾನವಾಕ್ಯಗಳ ರೂಪದಿಂದ ಹೀಗೆಂದು ಬರೆದಿರುತ್ತಾರೆ :

"ಕಥಂ ಪುನರವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚೇತಿ ? ಉಚ್ಯತೇ, ದೇಹೇನ್ದ್ರಿಯಾದಿಷು ಅಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ ಪ್ರಮಾಣಪ್ರವೃತ್ತ್ಯನುಪಪತ್ತೇಃ॥"

(ಆಕ್ಷೇಪ) :– ಪ್ರತ್ಯಕ್ಷಾದಿಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತರ ವಿಷಯ ವೆಂಬುದು ಹೇಗೆ ?

(ಪರಿಹಾರ) : ಹೇಳುತ್ತೇವೆ. ದೇಹೇಂದ್ರಿಯಾದಿಗಳಲ್ಲಿ ನಾನು, ನನ್ನದು– ಎಂಬ ಅಭಿಮಾನವಿಲ್ಲದವರಿಗೆ ಪ್ರಮಾತೃತ್ವವೆನ್ನುವದು ಹೊಂದುವದಿಲ್ಲವಾಗಿ, ಪ್ರಮಾಣ ಗಳ ವ್ಯಾಪಾರವೇ ಹೊಂದುವದಿಲ್ಲವಾದ್ದರಿಂದ.

ಹೀಗೆ ನೋಡಿದರೆ ಸಾಮಾನ್ಯಜನರಾಗಲಿ, ಶಾಸ್ತ್ರಜ್ಞರಾಗಲಿ ತತ್ತ್ವ ವಿಚಾರವನ್ನು ಮಾಡುವಾಗ ನಾವು ಪ್ರಮಾತೃಗಳೆಂದೇ ಇಟ್ಟುಕೊಂಡಿರು ತ್ತಾರೆ ; 'ಪ್ರಮಾತೃ' ಎಂದರೆ ಶರೀರದಲ್ಲಿ ನಾನೆಂದೂ ಇಂದ್ರಿಯಮನಗಳಲ್ಲಿ ನನ್ನವೆಂದೂ ಇಟ್ಟುಕೊಂಡವನೇ. ಆದರೆ ಶರೀರಾದಿಗಳು ನಾನೆಂದಾಗಲಿ, ಇಂದ್ರಿಯಾದಿಗಳು ನನ್ನವೆಂದಾಗಲಿ ಯಾವ ಪ್ರಮಾಣದಿಂದಲೂ ಸಿದ್ಧವಾಗಿಲ್ಲ. ಇದೆಲ್ಲ ಕೇವಲ ಪ್ರತೀತಿಸಿದ್ಧ. ಆದ್ದರಿಂದ ವಿಚಾರಮಾಡದೆ ಶರೀರಾದಿಗಳಲ್ಲಿ ನಾನುನನ್ನದೆಂಬ ವ್ಯವಹಾರವು ಉಂಟಾದಮೇಲೆಯೇ ಪ್ರಮಾತೃಪ್ರಮಾಣಾದಿ ವ್ಯವಹಾರವು ಹುಟ್ಟುವದರಿಂದ ಇದೆಲ್ಲ ಅವಿದ್ಯೆಯೆಂದೇ– ತಪ್ಪುತಿಳಿವಳಿಕೆ ಯೆಂದೇ– ಆಯಿತು.

ಪ್ರಮಾಣಗಳನ್ನು ಆಧಾರಮಾಡಿಕೊಂಡು ತತ್ತ್ವವಿಚಾರವನ್ನು ಮಾಡು ವವರು ವಿದ್ಯಾವಿದ್ಯಾವಿಭಾಗವನ್ನೂ ವ್ಯವಹಾರವನ್ನೂ ಒಪ್ಪುತ್ತಾರೆಂಬುದು ನಿಜ. ಆದರೆ ಅವರು ಆ ದೃಷ್ಟಿಯಲ್ಲಿ ವಿಮರ್ಶೆಗೆ ಇಟ್ಟುಕೊಂಡಿರುವದು ಪ್ರಮೇಯಗಳ ವಿಷಯದ ವಿದ್ಯಾವಿದ್ಯೆಗಳು ಮಾತ್ರ. ಈಗ ನಾವು ಪರಿಶೀಲಿ ಸುತ್ತಿರುವದೇನೆಂದರೆ ಪ್ರಮಾಣವ್ಯವಹಾರವು ಸರ್ವಸಂಮತವೆಂದು ನಿಶ್ಚಿತ ವಾದಮೇಲಾದರೂ ಅದು ನಿಜವಾದ ಅರ್ಥದಲ್ಲಿ ವಿದ್ಯೆಯೆ, ಸಮ್ಯಗ್ಜ್ಞಾನವೆ ? ಪ್ರಮಾತೃತ್ವವೆಂದು ನಾವಿಟ್ಟುಕೊಂಡಿರುವದೂ ಅವಿದ್ಯೆಯೆಂದೇ ಕಾಣಿಸುತ್ತಿದೆ ಯಲ್ಲ ! ಈ ದೃಷ್ಟಿಯಿಂದ ಅವಿದ್ಯೆಯ ಕ್ಷೇತ್ರವು ಎಷ್ಟು ವಿಶಾಲವಾಗಿದೆ ಎಂಬುದನ್ನು ಈಗ ನಾವು ಪರೀಕ್ಷಿಸಿನೋಡಬೇಕಾಗಿದೆ.

# ೫. ಅಹಂಮಮವ್ಯವಹಾರ

(12-5-62)

ಪ್ರಮಾಣಪ್ರಮೇಯವ್ಯವಹಾರವನ್ನೇ ಅವಿದ್ಯೆಯ ಕಾರ್ಯವೆಂದು ಕರೆಯುವದು ಯುಕ್ತವೆ ?- ಎಂಬ ಶಂಕೆಗೆ ಸಾಮಾನ್ಯವಾಗಿ ಪರಿಹಾರವನ್ನು ಹೇಳಿದ್ದಾಗಿದೆ. ಸರ್ವಶಾಸ್ತ್ರಗಳಿಗೂ ಪ್ರಮಾಣಪ್ರಮೇಯವ್ಯವಹಾರವು ಅವಶ್ಯವಾದರೂ ಅಷ್ಟುಮಾತ್ರದಿಂದ ಅದನ್ನು ಪರೀಕ್ಷೆಮಾಡದೆ ಪರಮಾರ್ಥವೆಂದು ಇಟ್ಟುಕೊಳ್ಳುವದು ಸರಿಯಾಗುವದಿಲ್ಲ. ತರ್ಕಶಾಸ್ತ್ರದಲ್ಲಿ ಹೇತ್ವಾಭಾಸಗಳನ್ನು ನಿರೂಪಣೆಮಾಡಿ ತರ್ಕದಿಂದ ನಿಜವನ್ನು ಸುಳ್ಳನ್ನೂ ವಿಂಗಡಿಸುವ ರೀತಿಯನ್ನು ತಿಳಿಸಿಕೊಟ್ಟಿರುವದು ನಿಜ. ಮನಃಶಾಸ್ತ್ರಜ್ಞರು ಭ್ರಾಂತಿಗಳು ಹೇಗೆ ಆಗುತ್ತವೆ ?- ಎಂಬುದನ್ನು ಪರೀಕ್ಷಿಸಿ ತಿಳಿಸಿರುವದೂ ನಿಜ. ಗಣಿತಾದಿ ಶಾಸ್ತ್ರಗಳು ವಿಷಯವನ್ನು ನಿಸ್ಸಂದಿಗ್ಧವಾಗಿ ಸರ್ವಕಾಲಕ್ಕೂ ಸರ್ವಜನರಿಗೂ ಮನದಟ್ಟಾಗುವಂತೆ ನಿಶ್ಚಯಿಸಿ ತೋರಿಸಿರುವದೂ ನಿಜ. ಆದರೆ ಅದೆಲ್ಲ ಪ್ರಮೇಯವಿಷಯವು. ಪ್ರಮಾಣಗಳ ಪರೀಕ್ಷೆಯ ವಿಷಯವು ಅಲ್ಲಿ ಇಲ್ಲ ; ಪ್ರಮಾತೃತ್ವವು ಪರಮಾರ್ಥವೆ ?- ಎಂಬ ವಿಚಾರದ ಸುಳಿವೂ ಅಲ್ಲಿಲ್ಲ.

ಆದ್ದರಿಂದ ಮಿಕ್ಕ ಶಾಸ್ತ್ರಗಳಲ್ಲಿ ಹೇಳಿರುವ ಪ್ರಮಾಣಗಳು ಅವರ ವ್ಯವಹಾರದೃಷ್ಟಿಯಿಂದ ವಿದ್ಯೆಯನ್ನು-ಎಂದರೆ ಸರಿಯಾದ ತಿಳಿವಳಿಕೆಯನ್ನು-ಕೊಟ್ಟರೂ ಪ್ರಮಾತೃತ್ವನ್ನೇ ಕುರಿತು ಅವರು ವಿಚಾರಮಾಡಿಲ್ಲವಾದ್ದರಿಂದ ಪ್ರಮಾಣವ್ಯವಹಾರವು ಅವಿದ್ಯಾಕೃತವೆಂದು ಪರಮಾರ್ಥದೃಷ್ಟಿಯಿಂದ ನಿಶ್ಚಯಿಸುವದೇನೂ ತಪ್ಪಲ್ಲ. ಪ್ರಮಾತೃತ್ವಕ್ಕೆ ದೇಹ, ಇಂದ್ರಿಯ, ಮನಸ್ಸು- ಇವುಗಳಲ್ಲಿ ನಾನು, ನನ್ನದು- ಎಂಬ ಅಭಿಮಾನವಿರುವದು ಅವಶ್ಯವೆಂದು ಆಗಲೆ ತಿಳಿಸಿದ್ದಾಗಿದೆ. ಈಗ ದೇಹಾದಿಗಳು ಇವೆ ಎಂಬುದು ಹೇಗೆ ಸಿದ್ಧವಾಗಿದೆ ?- ಎಂಬುದನ್ನು ನಾವು ವಿಚಾರಿಸೋಣ. ಹೀಗೆ ವಿಚಾರಿಸುವದಕ್ಕೆ ಹೊರಟವರು ಮೊದಲು ಪ್ರಮಾತೃವಾಗಿರಬೇಕಷ್ಟೆ ? ಆದ್ದರಿಂದ ಪ್ರಮಾತೃವನ್ನು ವಿಚಾರಿಸುವದಕ್ಕೆ ಮೊದಲು ದೇಹಾದಿಗಳು ಇರಬೇಕಾದದ್ದು ಅವಶ್ಯ ;

ದೇಹಾದಿಗಳು ಇವೆಯೊ, ಇಲ್ಲವೊ ?– ಎಂಬದನ್ನು ವಿಚಾರಿಸುವದಕ್ಕೆ ಮೊದಲು ಪ್ರಮಾತೃತ್ವವಿರಬೇಕು. ಹೀಗೆ ಅನ್ಯೋನ್ಯಾಶ್ರಯದೋಷವಿರುವದರಿಂದ ದೇಹಾದಿಗಳು ನಮಗೆ ಇವೆ ಎಂಬುದು ಅಭ್ಯುಪಗಮಸಿದ್ಧ– ನಾವೆಲ್ಲರೂ ಒಪ್ಪಿಕೊಂಡೇ ವಿಚಾರಮಾಡುತ್ತಿರುವದರಿಂದ ಮಾತ್ರ ಸಿದ್ಧ– ಎಂದಾಯಿತು. ದೇಹಾದಿಗಳು ಪ್ರಮಾಣಸಿದ್ಧವೇ ಎಂದು ಎಲ್ಲಾ ಜನರೂ ಒಪ್ಪಿದ್ದರೂ ಇದರ ತತ್ತ್ವವನ್ನು ವಿಚಾರಿಸುವದಕ್ಕೆ ಹೊರಟರೆ ಇವು ಅವಿಚಾರಿತಸಿದ್ಧವೆಂದೇ ಆಯಿತು.

ಈಗ ಇನ್ನೊಂದು ಶಂಕೆ ಎದ್ದುಕೊಳ್ಳುತ್ತದೆ : ಪ್ರಮಾತೃತ್ವವನ್ನಾಗಲಿ ದೇಹಾದಿಗಳನ್ನಾಗಲಿ ನಾವು ವಿಚಾರಿಸಿ ನಿಶ್ಚಯಿಸುವದಕ್ಕೆ ಪ್ರಮಾತೃತ್ವವನ್ನು, ನಾನು ಪ್ರಮಾತೃ ಎಂಬುದನ್ನು, ಇಟ್ಟುಕೊಳ್ಳದೆ ಈ ವಿಚಾರವನ್ನು ಮಾಡುವದಾದರೂ ಏತರಬಲದಿಂದ ? ನಮಗೆ ಇರುವ ವಿಚಾರಸಾಧನವೆಲ್ಲ ಶರೀರ, ಇಂದ್ರಿಯಗಳು, ಮನಸ್ಸು– ಎಂಬಿವೇ ಸುಪ್ರಸಿದ್ಧವಾದವುಗಳು. ಪ್ರಸಿದ್ಧವಾದ ಅವುಗಳನ್ನು ಕೈಬಿಟ್ಟು ಅವುಗಳ ಇರುವಿಕೆಯನ್ನು ಕುರಿತೇ ವಿಚಾರಕ್ಕೆ ಹೊರಡುವದು ಸಾಹಸದ ಮಾತಲ್ಲವೆ ?– ಎಂದು ಯಾರಾದರೂ ಕೇಳಬಹುದು. ಮಿಕ್ಕ ಶಾಸ್ತ್ರಗಳ ದೃಷ್ಟಿಯಿಂದ ಈ ಶಂಕೆಯು ಸರಿಯಾದದ್ದೇ ; ಏಕೆಂದರೆ ಆ ಶಾಸ್ತ್ರಗಳಲ್ಲಿ ಪ್ರಮಾಣಗಳನ್ನು ಮೀರಿರುವ ತತ್ತ್ವದ ನಿರ್ಣಯಕ್ಕೆ ಕೈಹಾಕಿರುವದೇ ಇಲ್ಲ. ಪ್ರಮಾತೃತ್ವವು ಸತ್ಯ, ಪ್ರಮಾತೃವನ್ನು ಆಶ್ರಯಿಸಿರುವ ಪ್ರಮಾಣಗಳೂ ಸತ್ಯ, ಆ ಪ್ರಮಾಣಗಳಿಂದ ಸಿದ್ಧವಾಗುವ ಪ್ರಮೇಯಗಳೂ ಸತ್ಯ– ಎಂದೇ ಆ ಶಾಸ್ತ್ರಗಳು ಕಲ್ಪಿಸಿಕೊಂಡಿರುತ್ತವೆ. ಪ್ರಮೇಯಗಳ ಸಿದ್ಧಿಯು ಹೀಗೆ ಪ್ರಮಾಣದಿಂದ ಆಗುವದು ವ್ಯವಹಾರಕ್ಕೆ ಸಾಕಾಗಿದೆ ಎಂಬುದೂ ನಿಜ ; ಏಕೆಂದರೆ ಶರೀರ, ಇಂದ್ರಿಯ, ಮನಸ್ಸು– ಇವು ನಮಗೆ ನಿಜವಾಗಿ ಇದ್ದುಕೊಂಡಿವೆ ಎಂದೇ ನಾವೆಲ್ಲರೂ ಒಪ್ಪಿಕೊಂಡೇ ವ್ಯವಹರಿಸುತ್ತೇವೆ. ವ್ಯವಹಾರವೆಂದರೆ ಈ ಮೂರರಿಂದ ಆಗತಕ್ಕದ್ದೇ ಆಗಿದೆ.

ಆದರೆ ವೇದಾಂತಶಾಸ್ತ್ರವು 'ಇವುಗಳೂ ಜ್ಞೇಯವಾಗಿರುವದರಿಂದ ಇವುಗಳ ತತ್ತ್ವವನ್ನು ಪರೀಕ್ಷಿಸಿಯೇ ನಿಶ್ಚಯಿಸಬೇಕು' ಎನ್ನುತ್ತಿದೆ ; ಹೊರಗಿನ ಪದಾರ್ಥಗಳನ್ನು ಇಂದ್ರಿಯಗಳಿಂದಾಗುವ ಜ್ಞಾನದಿಂದ ಸಿದ್ಧಮಾಡಿಕೊಳ್ಳಬೇಕು. ಆ ಪದಾರ್ಥಗಳು ಪ್ರತ್ಯಕ್ಷವೇದ್ಯಗಳು. ಇಂದ್ರಿಯಗಳಿಗೆ ಗೋಚರ

ವಾಗದೆ ಇರುವ ಹೊರಗಿನ ಜ್ಞೇಯಗಳನ್ನು ಪ್ರತ್ಯಕ್ಷಕ್ಕೆ ನಿಲುಕುವ ಯಾವ ದಾದರೊಂದು ಗುರುತಿನ ಆಶ್ರಯದಿಂದ- ಹೊಗೆಯನ್ನು ನೋಡಿ ಇಲ್ಲಿ ಬೆಂಕಿಯಿರಬೇಕು ಎಂದು ಕಲ್ಪಿಸಿ ನಿಶ್ಚಯಿಸುವಂತೆ-ಊಹಿಸಿ ತಿಳಿಯಬೇಕು. ಇಂಥ ಜ್ಞೇಯಗಳು ಅನುಮಾನಾದಿಪ್ರಮಾಣವೇದ್ಯಗಳೆನಿಸುವವು. ಆದರೆ ಪ್ರಮಾಣಗಳೆಲ್ಲವನ್ನೂ ಪರೀಕ್ಷಿಸುವದಕ್ಕೆ ಹೊರಟಾಗ ನಮಗೆ ಮತ್ತೆ ಬೇರೆ ಯಾವ ಪ್ರಮಾಣಗಳೂ ಇರುವದಿಲ್ಲ. ಮನಸ್ಸುಕೂಡ ಹೊರಗಿನ ಇಂದ್ರಿಯ ಗಳಂತೆ ತನ್ನ ವಿಷಯಗಳಾದ ಸುಖದುಃಖಗಳನ್ನು ನೇರಾಗಿ ಅರಿಯಬಲ್ಲದೇ ಹೊರತು ಶರೀರೇಂದ್ರಿಯಮನಸ್ಸುಗಳ ಗುಂಪನ್ನು ಜ್ಞೇಯವಾಗಿಟ್ಟುಕೊಂಡು ವಿಚಾರಿಸುವಾಗ ಅದರ ಸಹಾಯವೂ ನಮಗೆ ದೊರಕುವಂತೆ ಇಲ್ಲ. ಏಕೆಂದರೆ ಆಗ ಅದೂ ಜ್ಞೇಯವಾಗಿರುತ್ತದೆ. ಇವುಗಳೆಲ್ಲವೂ ಜ್ಞೇಯವೆಂದು ನಾವು ಏತರ ಬಲದಿಂದ ಅರಿತುಕೊಳ್ಳುತ್ತಿರುವೆವೋ ಅದಕ್ಕೆ ಅನುಭವ ಎಂದು ಹೆಸರು. ಅನುಭವವೆಂದರೆ ಪ್ರತ್ಯಕ್ಷಾನುಭವ, ಮನೋವ್ಯಥೆಯೇ ಮುಂತಾದ ವೇದನಾನುಭವ- ಇವುಗಳಿಗಿಂತ ವಿಲಕ್ಷಣವಾದ, ಇವುಗಳೆಲ್ಲವನ್ನೂ ತನ್ನ ಸ್ವರೂಪವಾದ ಅರಿವಿನ ಬಲದಿಂದಲೇ ಬೆಳಗುತ್ತಿರುವ, ಚಿನ್ಮಾತ್ರವು. ಅದೇ ನಮ್ಮ ನಿಜವಾದ ಸ್ವರೂಪವು. ಇದನ್ನೇ ಆತ್ಮನೆಂದು ವೇದಾಂತದಲ್ಲಿ ಕರೆ ದಿರುವದು. ಅನುಭವಸ್ವರೂಪನಾದ ಆತ್ಮನು ಸ್ವಯಂಸಿದ್ಧನಾಗಿರುತ್ತಾನೆ ; ಯೂಕ್ಲಿಡ್ ಮುಂತಾದವರ ರೇಖಾಗಣಿತದಲ್ಲಿ ಒಪ್ಪಿರುವ ಸ್ವಯಂಸಿದ್ಧ (axioms) ತತ್ತ್ವಗಳಂತೆ ಅಲ್ಲ, ಇದು. ಅಂಶಿಯು ಅಂಶಕ್ಕಿಂತ ದೊಡ್ಡದು ; ಎರಡು ಪದಾರ್ಥಗಳು ಯಾವದಾದರೂ ಮತ್ತೊಂದಾದ ಒಂದೇ ಪದಾರ್ಥಕ್ಕೆ ಸಮವಾಗಿದ್ದರೆ ಅವುಗಳು ತಾವೂ ಒಂದಕ್ಕೊಂದು ಸಮವಾಗಿರುತ್ತವೆ- ಎಂಬಿವೇ ಮುಂತಾದವುಗಳನ್ನು ಸ್ವತಃಸಿದ್ಧಗಳೆಂದು ಗಣಿತಾದಿಶಾಸ್ತ್ರಗಳಲ್ಲಿ ಅಂಗೀಕರಿಸಿರುವದುಂಟು ; ಆದರೆ ಅವುಗಳೆಲ್ಲ ಮನಸ್ಸಿಗೆ ಗೋಚರವಾಗುವ, ಅಥವಾ ಮನಸ್ಸಿನ ತರ್ಕದಿಂದ ವಿಶೇಷಚರ್ಚೆಯಿಲ್ಲದೆ ಸಿದ್ಧವಾಗುವ ತತ್ತ್ವ ಗಳಾಗಿರುತ್ತವೆ. ಅನುಭವಸ್ವರೂಪನಾದ ಆತ್ಮನು ಸ್ವಯಂಸಿದ್ಧನೆಂದರೆ ಹಾಗಲ್ಲ. ಅವನು ಹಾನೋಪಾದಾನಗೋಚರನಲ್ಲ, ಆ ಅನುಭವವನ್ನು ತೆಗೆದುಕೊಳ್ಳುವದಕ್ಕಾಗಲಿ ಬಿಡುವದಕ್ಕಾಗಲಿ ಬರುವದಿಲ್ಲ ; ಯಾವದಾದ ರೊಂದು ಸಾಧನದಿಂದ ಇದೆಯೆಂದು ಸಾಧಿಸುವದಕ್ಕಾಗಲಿ, ಇಲ್ಲವೆಂದು

ನಿಷೇಧಿಸುವದಕ್ಕಾಗಲಿ ಬರುವದಿಲ್ಲ ; ಏಕೆಂದರೆ ಇದೆ, ಇಲ್ಲ- ಎಂಬ ವಿಧಿ ನಿಷೇಧಗಳೂ ಆ ಅನುಭವದಿಂದಲೇ ಸಿದ್ಧವಾಗಬೇಕಾಗಿರುತ್ತವೆ. ಅನುಭವ ವಿದೆ ಎಂದು ಇಟ್ಟುಕೊಳ್ಳೋಣ ಎಂಬ ರೀತಿಯ (postulate) ತತ್ತ್ವವೂ ಇದಲ್ಲ ; ಏಕೆಂದರೆ ಹಾಗೆ ಇಟ್ಟುಕೊಳ್ಳುವವನ ಸ್ವರೂಪವೇ ಅನುಭವಲಕ್ಷಣ ನಾದ ಆತ್ಮನಾಗಿರುತ್ತಾನೆ. ನಮ್ಮಗಳ ಎಲ್ಲಾ ವಿಧವಾದ ಇರವೂ ಜೀವಿತವೂ ವ್ಯವಹಾರವೂ ಆ ಅನುಭವದಲ್ಲಿದೆ. ಈ ಅನುಭವದ ವಿಷಯಕ್ಕೆ ಯಾವ ತರ್ಕ ಕ್ಕೂ ಅವಕಾಶವಿಲ್ಲ. ಏಕೆಂದರೆ ಶ್ರೀಸುರೇಶ್ವರಾಚಾರ್ಯರು ಹೇಳಿರುವಂತೆ 'ಅಮುಂ ಪ್ರಾತ್ಯಕ್ಷಿಕಮುದ್ದಿಶ್ಯ ತರ್ಕಜ್ವರಭೃಶಾತುರಾಃ । ತ್ವಾಚ್ಛಿಗ ಸ್ಕವಚೋಜಾಲೈರ್ನೋದಯನ್ತಿ ಪರಸ್ಪರಮ್ ॥' ತರ್ಕಜ್ವರದಿಂದ ನರಳುತ್ತಿರುವವರೆಲ್ಲ ಅನುಭವವೆಂಬ ಈ ಮಧ್ಯಸ್ಥನನ್ನು ಒಪ್ಪಿಯೇ, 'ಹೀಗಿರು ವದರಿಂದ ಹೀಗೆ' ಎಂದು ತರ್ಕಮಾಡಿ ಒಬ್ಬರೊಡನೊಬ್ಬರು ವಾದಮಾಡು ತ್ತಿರುತ್ತಾರೆ.

ಈ ಅನುಭವದ ಬಲದಿಂದ ಶ್ರೀಶಂಕರಾಚಾರ್ಯರು ಒಂದು ಅಮೋಘ ತತ್ತ್ವವನ್ನು ನಮಗೆಲ್ಲ ಉಪದೇಶಿಸಿರುತ್ತಾರೆ : "ಅನ್ಯೋನ್ಯಸ್ಮಿನ್ನನ್ಯೋ ನ್ಯಾತ್ಮಕತಾಮ್ ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯ ಇತರೇತರಾ ವಿವೇಕೇನ, ಅತ್ಯನ್ತವಿವಿಕ್ತಯೋರ್ಧರ್ಮಧರ್ಮಿಣೋರ್ಮಿಥ್ಯಾ ಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ ಅಹಮಿದಂ ಮಮೇದ ಮಿತಿ ನೈಸರ್ಗಿಕೋಽಯಂ ಲೋಕವ್ಯವಹಾರಃ" ಸ್ವಯಂಸಿದ್ಧನಾಗಿರುವ ಆತ್ಮ, ಪ್ರತೀತಿಮಾತ್ರಸಿದ್ಧವಾಗಿರುವ ಶರೀರೇಂದ್ರಿಯಾದ್ಯನಾತ್ಮ- ಇವೆರ ಡನ್ನೂ ಒಂದನ್ನೊಂದೆಂದೂ ಒಂದರ ಧರ್ಮವು ಇನ್ನೊಂದರದೆಂದೂ ಹುಟ್ಟಿ ಹಾಕಿಕೊಂಡು ಅವೆರಡೂ ಅತ್ಯಂತವಿಲಕ್ಷಣಸ್ವಭಾವವಾಗಿದ್ದರೂ ವಿಂಗಡಿಸಿ ಕೊಳ್ಳಲಾರದೆ ತಪ್ಪುತಿಳಿವಳಿಕೆಯಿಂದ 'ನಾನು', 'ನನ್ನದು' ಎಂದು ಜನರು ನೈಸರ್ಗಿಕವಾಗಿ ವ್ಯವಹರಿಸುತ್ತಿರುವರು. ಇವುಗಳನ್ನು ಒಂದನ್ನೊಂದೆಂದು ತಿಳಿಯುವದು ಎಂದರೆ ಒಂದರ ಹತ್ತಿರದಲ್ಲಿ ಒಂದು ಇರುವ ತವರಬೆಳ್ಳಿಗಳನ್ನು ಒಂದನ್ನೊಂದೆಂದು ತಿಳಿಯುವಂತಲ್ಲ ; ಹಾಲುನೀರುಗಳ ಬೆರಕೆಯನ್ನು ಹಾಲು ಎಂದೇ ವ್ಯವಹರಿಸುವಂತೆ ಆತ್ಮಾನಾತ್ಮಗಳ ಬೆರಕೆಯನ್ನು 'ನಾನು' ಎಂಬ ಒಂದೇ ಪದಾರ್ಥವೆಂತ ವ್ಯವಹರಿಸುತ್ತಿರುತ್ತಾರೆ. ಅದನ್ನೇ ತಮ್ಮ

'ಆತ್ಮ' ಎಂದರೆ ಸ್ವರೂಪ ಎಂದೂ ತಿಳಿಯುತ್ತಿರುತ್ತಾರೆ. ಅವಿವೇಕಿಯಾದವನು ಶರೀರ, ಇಂದ್ರಿಯ, ಮನಸ್ಸು-ಮುಂತಾದವುಗಳಲ್ಲಿ ಒಂದೊಂದನ್ನೂ ನಾನೆಂದು ಕರೆದುಕೊಳ್ಳುತ್ತಾ ನನ್ನ ಮಗ, ನನ್ನ ಶರೀರ, ನನ್ನ ಕಣ್ಣು, ನನ್ನ ಮನಸ್ಸು-ಎಂದು ಯಾವಾಗ ಹೇಗೆ ತೋಚಿದರೆ ಹಾಗೆ-ಹೊಸದಾಗಿ ಬಂದ ಅಧಿಕಾರಿಯು ಕೆಲಸದ ಪರಿಚಯ ಸರಿಯಾಗಿಲ್ಲದಾಗ ಗುಮಾಸ್ತೆ ತಂದಿಟ್ಟ ಕಾಗದಗಳಿಗೆಲ್ಲ ಸಹಿಹಾಕುತ್ತಿರುವಂತೆ- 'ನಾನು', 'ನನ್ನದು' ಎಂದು ವ್ಯವಹರಿಸುತ್ತಿರುತ್ತಾನೆ. ಈಗ ನಾನಾಗಿರುವದೇ ಇನ್ನೊಂದು ಕ್ಷಣಕ್ಕೆ ನನ್ನದು ಎಂದಾಗುತ್ತದೆ ! ಇದು ತಪ್ಪುತಿಳಿವಳಿಕೆ ಎಂದರೂ ಜನರಿಗೆ ಸಿಟ್ಟು ಬರುತ್ತದೆ ! ಕುಡುಕನೊಬ್ಬನು ಅಮಲಿನ ಪ್ರೇರಣೆಯಿಂದ ಸಮೀಪದವರನ್ನೆಲ್ಲ ಕುಡುಕರೆಂದು ಭಾವಿಸುವಂತೆ ನಿಜವನ್ನು ವಿವೇಚನೆಮಾಡಿ ಹೇಳುವದಕ್ಕೆ ಬಂದವರನ್ನುಕೂಡ ಅವಿವೇಕಿಗಳೆಂದು ಹೇಳುವದಕ್ಕೂ ಹಿಂಜರಿಯುವದಿಲ್ಲ, ಈ ಅಧ್ಯಾರೋಪವನ್ನು ಮಾಡಿಕೊಂಡಿರುವಾತ !

ಈ ನಾನು ಎಂಬ ಪದಾರ್ಥವನ್ನು ಸ್ವಲ್ಪ ಬಿಡಿಸಿನೋಡೋಣ. ಇದು ಯಾವ ವಸ್ತು ? ಇದರಲ್ಲಿ ಯಾವ ಅವಯವಗಳೂ ನಮಗೆ ತೋರುತ್ತಿರುವದಿಲ್ಲ ; ಉಂಡೆಯಾದ ಅರಿವು, ಈ ನಾನೆಂಬುದು. ಇದರಲ್ಲಿ ನಾನಾತ್ವವೇ ಇಲ್ಲ. ಯಾವದನ್ನು ಬೇಕಾದರೂ ನಾನು ಎಂದು ಕರೆದುಕೊಳ್ಳಬಹುದು ; ಯಾವ ತಪ್ಪುತಿಳಿವಳಿಕೆ ಹೋದರೂ ನಾನು ಎಂಬುದು ಏನೆಂಬುದು ಗೊತ್ತಾಗುತ್ತಿರುವದಿಲ್ಲ. ಇದಕ್ಕೆ ಬಹುವಚನವಿಲ್ಲ. 'ಮರ'. 'ಮರ', 'ಮರ'- ಎಂದು ಸೇರಿಸಿಕೊಂಡು 'ಮರಗಳು' ಎನ್ನುವಂತೆ 'ನಾನು', 'ನಾನು', 'ನಾನು'-ಎಂದು ಸೇರಿಸಿ 'ನಾವು' ಎನ್ನುವದಕ್ಕಾಗುವದಿಲ್ಲ ; ನಾನು ಎಂಬುದಕ್ಕೆ ಎರಡನೆಯದಾಗಿರುವ ನಾನೇ ಇಲ್ಲ. ಇದು ತನಗಿಂತ ಬೇರೆಯಾಗಿರುವದನ್ನೆಲ್ಲ ವಿಷಯವಾಗಿಸಿಕೊಂಡು, 'ನನ್ನದು' ಎನ್ನುತ್ತದೆ ; ತಮಗಿಂತ ಬೇರೆಯಾದದ್ದು ಇಷ್ಟವಾದದ್ದಾದರೆ, ಜನರು ಅದರಲ್ಲಿ ಹೆಚ್ಚಿನ ಅಭಿಮಾನವನ್ನು ಮಾಡಿಕೊಂಡು ಇದು 'ಇಂಥದ್ದು', 'ಅಂಥದ್ದು'- ಎಂದು ಹೊಗಳುತ್ತಾರೆ ; ಅನಿಷ್ಟವಾದರೆ ತೆಗಳುತ್ತಾರೆ. ಆದರೆ ಯಾವನಿಗೂ ತನ್ನನ್ನು ತಾನು ವಿಷಯವಾಗಿಸಿಕೊಂಡು ನೋಡುವದಕ್ಕೆ ಬರುವದೇ ಇಲ್ಲ. ಅಸ್ಮತ್ಪ್ರತ್ಯಯಕ್ಕೆ ಇದು ಗೋಚರ, -ನಾನು ಎಂದು ಇದನ್ನು ವಿಷಯಮಾಡಿಕೊಳ್ಳಬಹುದು- ಎಂದು ತೋರು

ತ್ತದೆಯಾದರೂ ವಿಷಯವಮಾಡಿಕೊಳ್ಳುವ 'ನಾನು' ವಿಷಯಿಯಾಗಿ ಉಳಿದುಕೊಂಡೇ ಇರುತ್ತದೆ. ಮನುಷ್ಯನು ತನ್ನನ್ನೇ ವಿಷಯವಾಗಿ ಮಾಡಿಕೊಂಡೆನೆಂದು ಸುಳ್ಳುಸುಳ್ಳಾಗಿಯೇ ಹೆಮ್ಮೆಪಡುತ್ತಾನೆ. ಅಸ್ಮತ್ಪ್ರತ್ಯಯವು– ನಾನು ಎಂಬ ಪ್ರತ್ಯಯವು– ಘಟಪ್ರತ್ಯಯ, ಪಟಪ್ರತ್ಯಯ, ಎಂದುಮುಂತಾಗಿರುವ ಕ್ವಾಚಿತ್ಕಪ್ರತ್ಯಯಗಳಂತೆ ಯಾವಾಗಲೋ ಒಂದು ಸಲ ಮಾಡಿಕೊಳ್ಳುವದಲ್ಲ. ಅನೇಕಘಟಗಳನ್ನು ನೋಡಿ ಘಟಪ್ರತ್ಯಯವನ್ನು ವ್ಯವಹಾರಕ್ಕೆ ಇಟ್ಟುಕೊಂಡಿರುವಂತೆ ಅನೇಕ ನಾನುಗಳನ್ನು ನೋಡಿ 'ನಾನು' ಎಂಬ ಪ್ರತ್ಯಯವನ್ನು ಯಾರೂ ಏರ್ಪಡಿಸಿಕೊಂಡಿರುವದಿಲ್ಲ. ಮಕ್ಕಳಿಗೆ 'ನಾನು' ಎಂಬ ಅರಿವು ಸ್ಫುಟವಾಗಿ ತೋರಿಕೊಂಡಮೇಲೂ ನಾನು ಎಂದು ವ್ಯವಹರಿಸುವದಕ್ಕೆ ಬಾರದೆಇರಬಹುದು ; ಆದರೆ ಪ್ರತ್ಯಯವು ಮಾತ್ರ ಎಂದಿಗೂ ಇದ್ದುಕೊಂಡೇಇರುತ್ತದೆ.

ಅಂತು ನಾವುಗಳೆಲ್ಲರೂ ನಮ್ಮನಮ್ಮನ್ನು ನಾನು ಎಂದೂ ಮಿಕ್ಕವರನ್ನು ನೀನು, ಅವನು- ಎಂದುಮುಂತಾಗಿಯೂ ವ್ಯವಹರಿಸುತ್ತೇವೆ. ಈ ನಾನು ಎಂಬುದರಲ್ಲಿ ಎರಡು ಪದಾರ್ಥಗಳ ಅಧ್ಯಾಸವು– ಒಂದನ್ನೊಂದೆಂದು ತಿಳಿದುಕೊಂಡಿರುವದು– ಸೇರಿಕೊಂಡಿದೆ ಎಂಬುದು ಯಾರೊಬ್ಬರಿಗೂ ಹೊಳೆಯುವದಿಲ್ಲ. ವೇದಾಂತಿಗಳು ಆತ್ಮ ಮತ್ತು ಅನಾತ್ಮ– ಈ ಎರಡೂ ಸೇರಿ 'ನಾನು' ಎಂಬ ವಿಪರೀತಪ್ರತ್ಯಯವಾಗಿದೆ ಎಂದರೆ ಎಲ್ಲರಿಗೂ ಆಶ್ಚರ್ಯ, ಅಸಮಾಧಾನ ಅಥವಾ ಸಿಟ್ಟು ಬರುತ್ತದೆ. ನಾನು ಎಂಬುದು ಒಂದೇ ಪದಾರ್ಥವೆಂದು ಅಷ್ಟು ಸ್ವಾಭಾವಿಕವಾಗಿ ನಮಗೆಲ್ಲರಿಗೂ ತೋರುತ್ತಿರುತ್ತದೆ ! ಆದರೂ ಅಹಂಮತಿಯು– ನಾನು ಎಂಬ ಭಾವನೆಯು–ಗುಬ್ಬಚ್ಚಿಯಂತೆ ಇಲ್ಲಿಂದಲ್ಲಿಗೆ ಹಾರಾಡುತ್ತಾ ಯಾವದಕ್ಕೆ ಅಂಟಿಕೊಳ್ಳುವದೋ ಅದನ್ನೆಲ್ಲ ನಾನು ಎಂದೇ ಭಾವಿಸಿಕೊಳ್ಳುವಂತೆ ಮಾಡುತ್ತಿರುತ್ತದೆ. ಆದ್ದರಿಂದ ಶ್ರುತಿ ಹೀಗೆನ್ನುತ್ತಿದೆ : "ಸ ವಾ ಅಯಮಾತ್ಮಾ ಬ್ರಹ್ಮ ವಿಜ್ಞಾನಮಯೋ ಮನೋಮಯಃ ಪ್ರಾಣಮಯಶ್ಚಕ್ಷುರ್ಮಯಃ ಶ್ರೋತ್ರಮಯಃ ಪೃಥಿವೀಮಯ ಆಪೋಮಯ ವಾಯುಮಯ ಆಕಾಶಮಯಸ್ತೇಜೋಮಯೋಽತೇಜೋಮಯಃ ಕಾಮಮಯೋಽಕಾಮಮಯಃ ಕ್ರೋಧಮಯೋಽಕ್ರೋಧಮಯೋ ಧರ್ಮಮಯೋಽಧರ್ಮಮಯಃ ಸರ್ವಮಯಃ ॥"

(ಬೃ.೪-೪-೫) 'ನಾನು ವಿಚಾರಿಸುತ್ತೇನೆ, ಅರಿಯುತ್ತೇನೆ, ಉಸಿರಾಡುತ್ತೇನೆ, ನೋಡುತ್ತೇನೆ, ಕೇಳುತ್ತೇನೆ, ಹಾಡುತ್ತೇನೆ, ಮಾತಾಡುತ್ತೇನೆ, ಮುಟ್ಟುತ್ತೇನೆ, ಮೂಸುತ್ತೇನೆ'- ಇತ್ಯಾದಿ, ಇತ್ಯಾದಿ. ಈ ಎಲ್ಲವೂ ನಾನೇ ! ಒಬ್ಬ ಹುದ್ದೇದಾರನು ತನ್ನ ಕೈಕೆಳಗಿನ ನೌಕರರಿಗೆ ಬೇರೆಬೇರೆಯ ಕೆಲಸದ ಹೊಣೆಗಾರಿಕೆಯನ್ನು ಕೊಟ್ಟಿರುವದು ಕಂಡಿದೆ. ಆದರೆ ಇಲ್ಲಿ ನಾನೇ ಈ ಎಲ್ಲ ಕೆಲಸವನ್ನೂ ಮಾಡುತ್ತೇನೆ- ಹಣ್ಣು ಬೀಳುವದು ಕೇಳಿದೆ, ಅಲ್ಲಿಗೆ ಹೋದೆ, ಕೈಯಲ್ಲಿ ತೆಗೆದುಕೊಂಡೆ, ಮೂಸಿನೋಡಿದೆ, ಚಾಕಿನಿಂದ ಕೊಯ್ದು ಬಾಯಿಯಲ್ಲಿ ಹಾಕಿಕೊಂಡು, ಅಗಿದು, ಸವಿಯನ್ನು ನೋಡಿ, ನುಂಗಿ ತೃಪ್ತಿಪಟ್ಟೆ !- ಎಂದು ಎಲ್ಲಕ್ಕೂ ತನ್ನನ್ನೇ ಸಂಬಂಧಿಸಿಕೊಳ್ಳುವ ಈ ನಾನು ಎಂಬ ತಿಳಿವಳಿಕೆಯು ಅವಿದ್ಯೆಯಲ್ಲದೆ ಮತ್ತೇನಾದೀತು ? ಕೋಶದಲ್ಲಿ 'ಅವಿದ್ಯಾಽಹಂಮತಿಃ' ನಾನೆಂಬ ಬುದ್ಧಿಯೇ ಅವಿದ್ಯೆ ಎಂದು ಸ್ಪಷ್ಟವಾಗಿ ಬರೆದೂ ಇದೆ. ಕೆಲವು ವೇಳೆ ತನಗಿಂತ ಬೇರೆಯಾದವರನ್ನೂ ನಾನು ಎಂದು ವ್ಯವಹರಿಸುವದುಂಟು. ಉದಾಹರಣೆಗೆ ತನ್ನ ಮಗನ ಅಥವಾ ತನ್ನ ಆಳಿನಮೂಲಕ ಮಾಡಿಸಿದ ಕೆಲಸವನ್ನು 'ನಾನು ಮಾಡಿದೆ' ಎಂದು ಹೇಳಿಕೊಳ್ಳುತ್ತಾರಲ್ಲವೆ ? ಇಲ್ಲಿ ಮಗನು ಅಥವಾ ಆಳು ಬೇರೆಯವರು ಎಂದು ಗೊತ್ತಿದ್ದರೂ 'ಅವರು ನನ್ನವರು ನನ್ನವರು ಮಾಡಿದರೆ ನಾನು ಮಾಡಿದಂತೆ'- ಎಂಬ ಭಾವನೆಯಿಂದಲೇ ಹಾಗೆ ವ್ಯವಹರಿಸುತ್ತಾರೆ. ಆದರೆ ಅಲ್ಲಿಯೂ ಅವರು 'ನನ್ನವರು' ಎಂಬುದು ನಾನು ಎಂಬ ಅವಿದ್ಯೆಯ ಆಶ್ರಯದಿಂದಲೇ ಆಗಿರುವದರಿಂದ ಇದೆಲ್ಲವೂ ಅವಿದ್ಯಾವ್ಯವಹಾರವೇ ಎನ್ನುವದರಲ್ಲಿ ಯಾವ ಸಂಶಯವೂ ಇಲ್ಲ.

ಹಾಗಾದರೆ ವಿದ್ಯೆ ಎಂದರೇನು ? ದೇಹೇಂದ್ರಿಯಗಳು ಯಾವವೂ ಇಲ್ಲದೆ ವಿದ್ಯೆ ಬರುವದಾದರೂ ಹೇಗೆ ? ಇದನ್ನು ಈಗ ವಿಚಾರಿಸಬೇಕಾಗಿದೆ.

# ೬. ವಿದ್ಯಾವಿದ್ಯಾವ್ಯವಹಾರ
(13-5-62)

ಪ್ರಮಾತೃತ್ವಕ್ಕೆ ಶರೀರಾದಿಗಳು ಇವೆ ಎಂಬ ಭಾವನೆಯೇ ಅಡಿಗಟ್ಟು. ಶರೀರಾದಿಗಳನ್ನು ಇವೆಯೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕೆ ಬರುವಂತಿಲ್ಲ. ಅವೆಲ್ಲ ಲೋಕಸಿದ್ಧ ಎಂದು ತಿಳಿಸಿದ್ದಾಯಿತು. ನಾನು ಎಂದು ತಿಳಿಯುವದೂ ಅಹಂಮತಿಯ ಆಧಾರದಿಂದಾಗುವ ಸಕಲವ್ಯವಹಾರಗಳೂ ಅವಿದ್ಯಕವೆಂದು ಹೇಳಿದ್ದಾಯಿತು. ಇದೆಲ್ಲ ಅವಿದ್ಯಕವೆಂದು ನಮಗೆ ಹೇಗೆ ಗೊತ್ತಾಗುತ್ತದೆ ? ಈ ಅವಿದ್ಯೆಯನ್ನು ಹೊಡೆಯುವ ವಿದ್ಯೆ ಯಾವದು ? ಅದು ಹೇಗೆ ಉಂಟಾಗುತ್ತದೆ ?- ಎಂಬುದನ್ನು ಇನ್ನೂ ವಿಚಾರಿಸಬೇಕಾಗಿದೆ.

ಮೊಟ್ಟಮೊದಲು 'ಜ್ಞಾನವುಂಟಾಯಿತು' ಎಂದರೇನು ?- ಎಂಬುದನ್ನು ಸ್ವಲ್ಪ ವಿಚಾರಿಸೋಣ. ಆತ್ಮನು ಮನಸ್ಸಿನೊಡನೆ ಸಂಯೋಗವಾಗಿ, ಮನಸ್ಸು ಇಂದ್ರಿಯದೊಡನೆ ಸಂಯುಕ್ತವಾದಮೇಲೆ ಇಂದ್ರಿಯವಿಷಯಗಳ ಸಂಬಂಧದಿಂದ ಜ್ಞಾನವಾಗುತ್ತದೆ-ಎಂದು ತಾರ್ಕಿಕರು ಹೇಳುತ್ತಾರೆ. ಆದರೆ ನಮಗೆ ಈ ಯಾವ ವಿವರದ ಅರಿವೂ ಲೋಕದಲ್ಲಿ ಆಗುವದಿಲ್ಲ ; 'ಕಣ್ಣುಬಿಟ್ಟಮಾತ್ರದಿಂದ ವಿಷಯವು ಕಂಡಿತು' ಎಂದಲ್ಲವೆ, ನಮಗೆಲ್ಲ ತೋರುವದು? ಮನಸ್ಸು ಇಂದ್ರಿಯಗಳ ಮೂಲಕ ಹೋಗಿ ವಿಷಯಾಕಾರವಾಗುತ್ತಲೂ ಅದು ಚೈತನ್ಯದ ಬೆಳಕಿನಿಂದ ಬೆಳಗಿತೋರುತ್ತದೆ ಎಂದು ಕೆಲವರು ಹೇಳುವದುಂಟು. ಆದರೆ ಚೈತನ್ಯದ ಬೆಳಕಿಲ್ಲದೆ ಮನಸ್ಸಾಗಲಿ, ಇಂದ್ರಿಯವಾಗಲಿ, ತಾವೇ ಬೆಳಗುವಂತಿಲ್ಲ ; ಸೂರ್ಯನ ಬೆಳಕಿನಿಂದ ಹೊಳೆಯುವ ಕನ್ನಡಿಯಂತೆ ಅವು ಚಿತ್ತಿನ ಬೆಳಕಿನಿಂದಲೇ ಹೊಳೆಯುತ್ತಿರುವವು. ಚೈತನ್ಯದ ಬೆಳಕಿಗೆ ಯಾವ ಎಲ್ಲೆಕಟ್ಟೂ ಇರುವದಿಲ್ಲ. 'ಇಲ್ಲಿಯವರೆಗೆ ನನ್ನ ಅನುಭವ, ಮುಂದಕ್ಕೆ ಇಲ್ಲ' ಎನ್ನುವದಕ್ಕೆ ಬರುವಂತಿಲ್ಲ. ಏಕೆಂದರೆ 'ಇಲ್ಲ' ಎನ್ನುವದಕ್ಕೂ ಅನುಭವವೇ ಬೇಕಾಗಿರುತ್ತದೆ.

ಇಂದ್ರಿಯವು 'ಇದು ರೂಪ' ಎಂದಿಷ್ಟೇ ತಿಳಿಯುತ್ತದೆ; ಅದು ತಾನು ಇದ್ದಂತೆ ಇದ್ದ ವಿಷಯದ ಪ್ರತಿಬಿಂಬವನ್ನು ತೆಗೆದುಕೊಳ್ಳುತ್ತಿರುತ್ತದೆ. ಮನಸ್ಸು ಮಾತ್ರ ಆಯಾ ವಿಷಯದ ಪ್ರತ್ಯಯವನ್ನು ಮಾಡಿಕೊಂಡು ಹೇಳುತ್ತದೆ, ಬುದ್ಧಿಯು ನಿಶ್ಚಯಿಸುತ್ತದೆ. ಇದಿಷ್ಟೂ ಸವಿಕಲ್ಪವೇ. ಆತ್ಮಚೈತನ್ಯವಾದರೆ ನಿರ್ವಿಕಲ್ಪಕ, ಸೂರ್ಯನಂತೆ ತಾನು ಯಾವ ವ್ಯಾಪಾರವನ್ನೂ ಮಾಡದೆ

ಎಲ್ಲವನ್ನೂ ಬೆಳಗುತ್ತದೆ. ಅಂತಃಕರಣವು ಚಿದ್ವ್ಯಾಪ್ತವಾಗಿ ಚಿದಾಭಾಸವಾಗಿರುವ ವೃತ್ತಿಗಳಿಂದಲೇ ಇಂದ್ರಿಯಗಳ ಮೂಲಕ ಹೋಗಿ ವಿಷಯಗಳನ್ನು ಬೆಳಗಬೇಕಾಗಿದೆ. ಹೀಗಿರುವದರಿಂದ 'ಜ್ಞಾನವುಂಟಾಯಿತು' ಎಂದು ನಾವು ವ್ಯವಹರಿಸುವಾಗ ಜ್ಞಾನವು ಯಾವದು ? ಅದು ಹುಟ್ಟಿತೆ ? ಮೋಡ ಅತ್ತ ಸರಿದರೆ ಸೂರ್ಯನು ಕಣ್ಣಿಗೆ ಕಾಣುತ್ತಾನೆ. ಆಗ 'ಸೂರ್ಯನು ಹುಟ್ಟಿದನು' ಎನ್ನಬಹುದೆ ? ಇದರಂತೆ ಪ್ರತಿಯೊಂದು ಪ್ರತ್ಯಯದ ಕೊನೆಯಲ್ಲಿ ತೋರಿಕೊಳ್ಳುವ ಚೈತನ್ಯವೇ ಜ್ಞಾನವು. ವೃತ್ತಿಯ ಸ್ವಭಾವದಿಂದ 'ಸರಿಯಾದ ಜ್ಞಾನ' ಅಥವಾ 'ಮಿಥ್ಯಾಜ್ಞಾನ' ಎಂದು ನಿಶ್ಚಯಿಸಬೇಕಾಗಿರುತ್ತದೆ. ಮಿಥ್ಯಾಜ್ಞಾನದ ಕೊನೆಯಲ್ಲಿ ತೋರಿಕೊಳ್ಳುವದೂ ಅದೇ ಆತ್ಮಚೈತನವೇ. ಚೈತನ್ಯವೆಂಬ ಅನುಭವದಲ್ಲಿಯೇ ಬುದ್ಧಿ, ಮನಸ್ಸು, ಇಂದ್ರಿಯ- ಎಲ್ಲವೂ ಇರುತ್ತವೆ. ಅಂತಃಕರಣದ ವೃತ್ತಿಗಳು ಹುಟ್ಟುವದರಿಂದ ಜ್ಞಾನಕ್ಕೆ ಉತ್ಪತ್ತಿ ವ್ಯವಹಾರವೂ ಅವುಗಳು ಹೋಗುವದರಿಂದ ಜ್ಞಾನಕ್ಕೆ ನಾಶವೆಂಬ ವ್ಯವಹಾರವೂ ಆಗುತ್ತವೆ. ನಿಜವಾಗಿ ಸ್ವರೂಪಜ್ಞಾನಕ್ಕೆ ಉತ್ಪತ್ತಿಯೂ ಇಲ್ಲ, ನಾಶವೂ ಇಲ್ಲ.

ಈ ರೀತಿಯಲ್ಲಿ ನೋಡಿದರೆ ಶರೀರೇಂದ್ರಿಯಮನಸ್ಸುಗಳೆಲ್ಲ ಸೇರಿಕೊಂಡೇ ವೃತಿಯು ಉಂಟಾಗುತ್ತಿರುವದರಿಂದ **ವಿದ್ಯೆಯ– ಸಮ್ಯಗ್ಜ್ಞಾನದ– ಉತ್ಪತ್ತಿಯೂ ಅವಿದ್ಯೆಯ ಕ್ಷೇತ್ರದಲ್ಲಿಯೇ** ಎಂದಾಯಿತು. ಆದ್ದರಿಂದ **ವಿದ್ಯಾವಿದ್ಯಾವ್ಯವಹಾರಗಳೆರಡೂ ಅವಿದ್ಯಾಭೂಮಿಯಲ್ಲಿಯೇ** ಎಂದಾಯಿತು.

ಇಲ್ಲೊಂದು ಶಂಕೆ : 'ಶರೀರಾದಿಗಳು ಇವೆ' ಎಂಬ ಜ್ಞಾನವು ಅಬಾಧಿತವಾಗಿರುವದರಿಂದ ಅದು ಸರಿಯಾದ ಜ್ಞಾನವೇ ಎನ್ನಬೇಕಲ್ಲವೆ ?- ಎಂದರೆ ಹಾಗಲ್ಲ. ಶರೀರವಾಗಲಿ, ಇಂದ್ರಿಯಗಳಾಗಲಿ, ಮನಸ್ಸಾಗಲಿ ಒಂದು ಕ್ಷಣವೂ ಇದ್ದಂತೆ ಇರುವದಿಲ್ಲ ; ಅವುಗಳ ಸ್ವರೂಪವು ಬದಲಾಯಿಸುತ್ತಲೇಇರುತ್ತದೆ. ಶರೀರವು ಹುಟ್ಟುವದು, ಬೆಳೆಯುವದು, ಪರಿಣಮಿಸುವದು, ಸೊರಗುವದು, ನಾಶವಾಗುವದು– ಈ ಎಲ್ಲಾ ವಿಕಾರಗಳನ್ನೂ ಅನುಭವಿಸುತ್ತಿರುವದು ಸರ್ವಲೋಕಪ್ರಸಿದ್ಧವಾಗಿದೆ, ಇಂದ್ರಿಯಗಳಲ್ಲಿಯೂ ಕ್ರಮಕ್ರಮವಾಗಿ ವಿಕಾರಗಳಾಗುತ್ತಿರುವದು ಪ್ರಸಿದ್ಧವೇ ; ಹಾಗಿಲ್ಲದಿದ್ದರೆ ಕಣ್ಣಿನಪಾಟವವು ಹೆಚ್ಚುವದೂ, ಚಾಳೀಸು, ಪರೆ- ಮುಂತಾದವು ಬರುವದೂ ಎಲ್ಲರ ಅನುಭವದಲ್ಲಿಯೂ

ಇರುವದು ಹೇಗೆ ಹೊಂದೀತು ? ಮನಸ್ಸಂತೂ ಹರಿದಾಡುತ್ತಲೇ ಇರುತ್ತದೆ ; ಹಾಗಿಲ್ಲದಿದ್ದರೆ ಅದು ಮನಸ್ಸೆನಿಸುವಂತೆಯೇ ಇಲ್ಲ. ಆತ್ಮನಿಗೆ ಶರೀರಾದಿಗಳಿಲ್ಲವೇ ಇಲ್ಲ ಎಂದು 'ಅಶರೀರಮ್', 'ಅಚಕ್ಷುಷ್ಕಮ್', 'ಅಪ್ರಾಣೋ ಹ್ಯಮನಾಃ ಶುಭ್ರಃ'– ಮುಂತಾದ ಶ್ರುತಿಗಳು ಹೇಳುತ್ತಿವೆ. ಆತ್ಮನು ಸ್ವಪ್ನದಲ್ಲಿಯೂ ಶರೀರಾದಿಗಳ ಸಹಾಯದಿಂದ ವಿಷಯಗಳನ್ನು ಅರಿಯುವಂತೆಯೂ ಚಲಿಸುವಂತೆಯೂ ಕಾಣುತ್ತಿರುತ್ತಾನೆ. ನಿಜವಾಗಿ ಅಲ್ಲಿ ಶರೀರಾದಿಗಳು ಯಾವವೂ ಇರುವದಿಲ್ಲವೆಂಬುದು ಸರ್ವಸಂಮತವಾಗಿರುತ್ತದೆ. ಸುಷುಪ್ತಿಯಲ್ಲಂತೂ ಶರೀರಾದಿಗಳು ಆತ್ಮನಿಗೆ ಏನೊಂದೂ ಕಾಣಿಸುವದಿಲ್ಲವೇ ಇಲ್ಲವೆಂಬುದೂ ಅನುಭವಸಿದ್ಧ. ಆದ್ದರಿಂದ ಆತ್ಮನಿಗೆ ಪ್ರಮಾತೃತ್ವವು ಸ್ವಾಭಾವಿಕವಲ್ಲವೆಂದು ಆಯಿತು ; ಅವನು ಚೈತನ್ಯಸ್ವಭಾವನೇ ಎಂದೂ ಆಯಿತು. ಇಂದ್ರಿಯಗಳ ಮೂಲಕ ನೋಡುತ್ತಿರುವವನೂ ಆತ್ಮನೇ ಆಗಿರುವದರಿಂದಲೂ ಶರೀರಾದಿಗಳು ಮಾರ್ಪಡುತ್ತಿರುವ ಸ್ವಭಾವದವಾಗಿದ್ದು ಸ್ವಪ್ನದಲ್ಲಿಯೂ ಸುಷುಪ್ತಿಯಲ್ಲಿಯೂ ಸ್ವಲ್ಪವೂ ಇಲ್ಲದೆ ಇರುವದರಿಂದಲೂ ನೋಡುವದು, ಕೇಳುವದು– ಮುಂತಾದ ವ್ಯವಹಾರವೆಲ್ಲವೂ ಇಂದ್ರಿಯಗಳ ಸಹಾಯವಿಲ್ಲದೆ ಆತ್ಮನ ಸ್ವಭಾವದಿಂದಲೇ ಆಗುವವೆಂದೂ ಆಯಿತು. ಆದ್ದರಿಂದಲೇ ಶ್ರುತಿಯು

> 'ಅಪಾಣಿಪಾದೋ ಜವನೋ ಗ್ರಹೀತಾ
> ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ |
> ಸ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ
> ತಮಾಹುರಗ್ರ್ಯಂ ಪುರುಷಂ ಮಹಾನ್ತಮ್ ||' ಶ್ವೇ. ೩–೧೯

'ಕೈಕಾಲುಗಳಿಲ್ಲದೆ ಹಿಡಿದುಕೊಳ್ಳುತ್ತಾನೆ, ವೇಗವಾಗಿ ನಡೆಯುತ್ತಾನೆ, ಕಣ್ಣುಗಳಿಲ್ಲದೆ ನೋಡುತ್ತಾನೆ, ಕಿವಿಗಳಿಲ್ಲದೆ ಕೇಳುತ್ತಾನೆ, ಜ್ಞೇಯವಸ್ತುವನ್ನೆಲ್ಲ ಅವನು ಅರಿಯುತ್ತಾನೆ, ಆತನನ್ನು ಅರಿಯುವಾತನು ಯಾವನೂ ಇಲ್ಲ, ಅವನನ್ನೇ ಮೊದಲನೆಯ ಮಹಾಪುರುಷನೆನ್ನುವರು'– ಎಂದು ಹೇಳುತ್ತಿದೆ.

ಹೀಗೆ ವಿದ್ಯಾವಿದ್ಯೆಗಳೆರಡೂ ಅವಿದ್ಯಾದೃಷ್ಟಿಯಿಂದಲೇ ಆಗಿರುವ ವ್ಯವಹಾರವಾದರೆ ಈ ವ್ಯವಹಾರವನ್ನೇ ಮೀರಿರುವ ಸಮ್ಯಗ್ಜ್ಞಾನವೊಂದುಂಟೆ? –ಎಂದರೆ ಉಂಟು, ಅದೇ ಶಾಸ್ತ್ರಜನ್ಯಜ್ಞಾನ. ಅದು ಹೇಗೆ ವಿದ್ಯಾವಿದ್ಯೆಗಳೆರಡನ್ನೂ ಮೀರಿರುತ್ತದೆ?– ಎಂಬುದನ್ನು ಈಗ ಪರಿಶಿಲೀಸಿ ತಿಳಿಯೋಣ.

# ೭. ಶಾಸ್ತ್ರಪ್ರಮಾಣ

(14-5-62)

ಪ್ರಮಾತೃತ್ವವು ಮಿಥ್ಯಾಜ್ಞಾನಕೃತವೆಂದು ಹೇಳಿದ್ದಾಗಿದೆ. ಶರೀರಾದಿಗಳು ಪ್ರತೀತಿಮಾತ್ರಸಿದ್ಧವೆಂದು ತಿಳಿಸಿ 'ಜ್ಞಾನವು ಉಂಟಾಯಿತು' ಎಂಬ ವ್ಯವಹಾರವು ವೃತ್ತಿಯ ಕೊನೆಯಲ್ಲಿ ಚೈತನ್ಯವು ತೋರಿಕೊಳ್ಳುವದರಿಂದಲೇ ಹೊರತು ನಿಜವಾಗಿ ಜ್ಞಾನವೇನೂ ಉಂಟಾಗುವದಿಲ್ಲ– ಎಂದು ಉಪಪತ್ತಿಯನ್ನು ಕೊಟ್ಟಿದ್ದಾಯಿತು. ಕೊನೆಯಲ್ಲಿ ವಿದ್ಯಾವಿದ್ಯೆಗಳೆರಡೂ ಅವಿದ್ಯಾಕ್ಷೇತ್ರದಲ್ಲಿಯೇ– ಎಂದು ಹೇಳಿದ್ದಾಗಿದೆ. ಈಗ ಒಂದು ಶಂಕೆ ಏಳುತ್ತದೆ: ಹೀಗೆ ಎಲ್ಲವೂ ಅವಿದ್ಯಾಕ್ಷೇತ್ರದಲ್ಲಿಯೇ ಆದರೆ ಇವೆರಡನ್ನೂ ಮೀರಿದ ಸಮ್ಯಗ್ಜ್ಞಾನವೆಂಬುದು ಹೇಗೆ ಆಗಬೇಕು? ಯಾವ ಜ್ಞಾನವಾದರೂ ವೃತ್ತಿಯ ವಿಕಾರದಿಂದಲೇ ತಾನೆ ಆಗಬೇಕು? ಅದನ್ನೂ ಹೊಡೆದುಹಾಕುವ ಮತ್ತೊಂದು ಜ್ಞಾನವು ಆಗುವದಿಲ್ಲವೆಂದು ಹೇಗೆ ನಂಬೋಣ? ವ್ಯವಹಾರದಲ್ಲಿಯೇ ಇದ್ದುಕೊಂಡು ಯಾವ ವ್ಯವಹಾರಕ್ಕೂ ನಿಲುಕದ ತತ್ತ್ವವನ್ನು ಪ್ರತಿಪಾದನೆಮಾಡುತ್ತೇವೆನ್ನುವದು ಅಪಹಾಸ್ಯವಾದ ಮಾತಲ್ಲವೆ?

ಇದಕ್ಕೆ ಪರಿಹಾರವೇನೆಂದರೆ: ಇದುವರೆಗೆ ನಾವು ಮಾತನಾಡುತ್ತಿರುವದು ಪ್ರತೀತಿಸಿದ್ಧವಾದ ಶರೀರಾದಿಗಳನ್ನು ಇಟ್ಟುಕೊಂಡು. ಆದ್ದರಿಂದ ಅಜ್ಞಾನವನ್ನು ಜ್ಞಾನವು ಹೊಡೆದುಹಾಕುತ್ತದೆ ಎಂದು ವಿಚಾರದಿಂದ ನಾವು ತಿಳಿದುಕೊಂಡಮೇಲೂ ಇದೇ ಕೊನೆಯ ತೀರ್ಮಾನವೆ?– ಎಂಬ ಶಂಕೆಯುಂಟಾಗುವದು ಸ್ವಾಭಾವಿಕವಾಗಿದೆ. ಆದರೆ ಯಾವ ಪ್ರಮಾಣಕ್ಕೂ ನಿಲುಕದ, ಎಲ್ಲಾ ಪ್ರಮಾಣಗಳ ಪ್ರಾಮಾಣ್ಯಕ್ಕೂ ಆಧಾರವಾಗಿರುವ, ಅನುಭವವನ್ನು ಮಾತ್ರ ಆಧಾರವಾಗಿಟ್ಟುಕೊಂಡು ಶ್ರುತಿಯು ಇದ್ದದ್ದನ್ನು ಇದ್ದಂತೆ ತಿಳಿಸಿಕೊಡುತ್ತದೆ. ಆದ್ದರಿಂದ ಈವರೆಗೆ ನಾವು ವಿಚಾರದಲ್ಲಿ ಅವಲಂಬಿಸಿರುವ ಪ್ರಾತೀತಿಕವಿಷಯಗಳಿಗೂ ಈಗ ಹೇಳುವ ಅನುಭವಸಿದ್ಧವಿಷಯಗಳಿಗೂ ಬಹಳ ವೈಲಕ್ಷಣ್ಯವಿರುತ್ತದೆ. ಶ್ರುತಿಯು 'ಹೀಗೆ ಇರಬೇಕು' ಎಂದು ತರ್ಕಿಸುವದಿಲ್ಲ; 'ಹೀಗೆ ಇದೆ ಎಂದೇ ಇರುವದನ್ನು ಜ್ಞಾಪಿಸುತ್ತದೆ.

ಉದಾಹರಣೆಗೆ ಈ ಶ್ರುತಿವಾಕ್ಯದ ಅಭಿಪ್ರಾಯವನ್ನು ಮನಸ್ಸಿಗೆ ತಂದು ಕೊಳ್ಳಿರಿ. 'ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ।' (ಬೃ. ೩-೪-೧) ಬ್ರಹ್ಮವು ನೇರಾಗಿ ಅಪರೋಕ್ಷವಾಗಿರುವ ನಮ್ಮ ಆತ್ಮನೇ ಆಗಿರುತ್ತದೆ. ಅದಕ್ಕೂ ನಮಗೂ ದೇಶದ ಅಥವಾ ಕಾಲದ ವ್ಯವಧಾನವಿರುವದಿಲ್ಲ; ಇದು ಎಲ್ಲಕ್ಕೂ ಒಳಗಿನ ಆತ್ಮನು. ನಾವು ಶರೀರ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ- ಇವುಗಳನ್ನೆಲ್ಲ 'ನಾನು, ನನ್ನ ಆತ್ಮನು'- ಎಂದು ಅಜ್ಞಾನದಿಂದ ತಿಳಿದುಕೊಂಡಿರಬಹುದು; ಈ ಅನೇಕಾತ್ಮರುಗಳೆಲ್ಲರಿಗಿಂತಲೂ ತೀರ ಒಳಗಿರುವ ನಮ್ಮ ಆತ್ಮನು, ಅಹಂಕಾರಕ್ಕಿಂತಲೂ ಒಳಗಿರುವ ನಮ್ಮ ಆತ್ಮನು, ಯಾವ ಪರಿಚ್ಛೇದವೂ ಇಲ್ಲದವನು- ಎಂಬುದು ಅನುಭವ ಸಿದ್ಧವಾಗಿರುತ್ತದೆ. ಶ್ರುತಿಯು ಹೀಗೆ ಇರುವದನ್ನೇ ಇದ್ದಂತೆ ತಿಳಿಸಿಕೊಡುತ್ತಿದೆ. ಇದು ಬರಿಯ ತರ್ಕದ ಪ್ರತ್ಯಯಗಳ ಆಕಾರಮಾತ್ರಗಳನ್ನು ಒಂದಕ್ಕೊಂದನ್ನು ಹೊಂದಿಸಿ A ಯು Bಗೆ ಸಮನಾದರೆ, B ಯು Cಗೆ ಸಮನಾದರೆ, A ಯು Cಗೆ ಸಮನಾಗಿರಬೇಕು- ಎಂಬಂತೆ ಕಲ್ಪಿಸುವದೇನೂ ಅಲ್ಲ. ನಮ್ಮ ಆತ್ಮನು ಅಪರೋಕ್ಷನು, ಅವ್ಯವಹಿತನಾಗಿ ನಮಗೆ ಅನುಭವವಾಗುತ್ತಿರುವವನು- ಎಂಬುದು ವಿಚಾರಪರರಾದ ಅಧಿಕಾರಿಗಳಿಗೆ ಶ್ರುತಿಯು ಹೇಳಿದ ಮಾತ್ರದಿಂದಲೇ ಸಿದ್ಧವಾಗುತ್ತದೆ.

ಶ್ರುತಿಯಲ್ಲಿಯೂ ತರ್ಕದ ಆಕಾರದಲ್ಲಿ ಕೆಲವು ವಿಷಯಗಳನ್ನು ಬೋಧಿಸಿರುವದುಂಟು; ಆದರೆ ಈ ಶ್ರೌತತರ್ಕಕ್ಕೂ ಲೌಕಿಕತರ್ಕಕ್ಕೂ ವೈಲಕ್ಷಣ್ಯವಿದೆ. ಲೌಕಿಕತರ್ಕದಲ್ಲಿ ಎಷ್ಟೋ ಪರೋಕ್ಷವಾದ ವಿಷಯಗಳು ಇರುತ್ತವೆ; ಅವನ್ನು ಪೂರ್ವಾಪರವಿರೋಧವಿಲ್ಲದಂತೆ ಹೊಂದಿಸಿನೋಡಿದರೆ ಕೊನೆಗೆ ಬರುವ ತೀರ್ಪೇ ನಿರ್ಣಯವೆಂದು ಅಲ್ಲಿ ಗೊತ್ತುಮಾಡುತ್ತೇವೆ. ಶ್ರೌತತರ್ಕದಲ್ಲಿ ಹೀಗಲ್ಲ. ಅಲ್ಲಿ ಪ್ರತಿಯೊಂದು ಮೆಟ್ಟಲಿನಲ್ಲಿಯೂ ಅನುಭವವೇ ಇರುತ್ತದೆ. ಒಂದು ಅನುಭವದಿಂದ ಮತ್ತೊಂದು ಅನುಭವಕ್ಕೆ ಹೋಗುತ್ತಾ ಕೊನೆಗೆ ಪರಮಾನುಭವಕ್ಕೆ ಬಂದು ನಿಲ್ಲುವದೇ ಆ ತರ್ಕದ ರೂಪ. ಉದಾಹರಣೆಗೆ ನೋಡಿ: 'ಅಶರೀರಂ ವಾವ ಸನ್ತಂ ನ ಪ್ರಿಯಾಪ್ರಿಯೇ ಸ್ಪೃಶತಃ' (ಛಾಂ. ೮-೧೨-೧) ಈ ಶ್ರುತಿವಾಕ್ಯಕ್ಕೆ ಯಾರಿಗೆ ಶರೀರವಿಲ್ಲವೋ ಅವನಿಗೆ ಪ್ರಿಯಾಪ್ರಿಯಗಳು ಸೋಂಕುವದಿಲ್ಲ- ಎಂದು ಅರ್ಥವಲ್ಲ; ಆತ್ಮನಿಗೆ ಶರೀರ

ವಿಲ್ಲ, ಆದ್ದರಿಂದ ಪ್ರಿಯಾಪ್ರಿಯಗಳೂ ಅವನನ್ನು ಮುಟ್ಟುವದಿಲ್ಲ- ಎಂದರ್ಥ. ಚಿತ್ರದ ಬೆಕ್ಕು ಚಿತ್ರದ ಹಾಲನ್ನು ಕುಡಿಯುತ್ತಿರುವಂತೆ ಕಂಡಾಗಲೂ 'ಬೆಕ್ಕು ಹಾಲು ಕುಡಿಯುತ್ತಿದೆ' ಎನ್ನುವೆವು ; ಆದರೆ ಅದು ನಿಜವಾದ ಬೆಕ್ಕು ನಿಜವಾದ ಹಾಲನ್ನು ಕುಡಿಯುವಂತೆ ಅಲ್ಲ-ಎಂಬುದು ನಮಗೆಲ್ಲ ಗೊತ್ತಿರುತ್ತದೆ. ಪ್ರಕೃತದಲ್ಲಿ ನಮಗೆ ಶರೀರವು ನಿಜವಾಗಿ ಇದೆ-ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಇದನ್ನು ಭಾಷ್ಯಕಾರರು ಸಮನ್ವಯಸೂತ್ರವ್ಯಾಖ್ಯಾನದಲ್ಲಿ ತೋರಿಸಿರುತ್ತಾರೆ. ಇದನ್ನೇ ಭಗವದ್ಗೀತೆಯಲ್ಲಿಯೂ ತಿಳಿಸಿಕೊಟ್ಟಿದೆ- 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಇಲ್ಲಿ ಸತ್ ಎಂದರೆ ಆತ್ಮನು, ಅಸತ್ ಎಂದರೆ ಅನಾತ್ಮವು, ಶರೀರಾದಿಗಳು. ಆತ್ಮನು ಇಲ್ಲವೆಂಬುದು ಎಂದಿಗೂ ಇಲ್ಲ. ; ಶರೀರಾದಿಗಳು ಇರುತ್ತವೆ ಎಂಬುದೂ ಎಂದಿಗೂ ಇಲ್ಲ- ಎಂಬುದೇ ಈ ಗೀತಾವಾಕ್ಯದ ಅರ್ಥ. ಈ ವಾಕ್ಯದ ಭಾಷ್ಯದಲ್ಲಿ ಕಾರ್ಯವನ್ನು ಚೆನ್ನಾಗಿ ಪರೀಕ್ಷಿಸಿದರೆ ಅದು ತನ್ನ ಕಾರಣಕ್ಕಿಂತ ಬೇರೆಯಾಗಿ ಕಾಣುವದೇ ಇಲ್ಲ ಎಂಬ ಅನುಭವವನ್ನು ಆಧಾರವಾಗಿಟ್ಟುಕೊಂಡು ಆಚಾರ್ಯರು ಕೊನೆಯಲ್ಲಿ ಆತ್ಮನೊಬ್ಬನೇ ಸತ್ಯವೆಂದೂ ಶರೀರಾದಿಗಳು ಬಿಸಿಲುಕುದುರೆಯ ನೀರೇ ಮುಂತಾದವುಗಳಂತೆ ಹುಸಿತೋರಿಕೆಯೇ ಎಂದೂ ತರ್ಕದಿಂದ ಸಿದ್ಧಮಾಡಿ ತೋರಿಸಿರುತ್ತಾರೆ. ಮುಂದೆ ಗೀತೆಯಲ್ಲಿಯೇ ಈ ಶ್ಲೋಕಗಳಿವೆ: "ಅವಿನಾಶಿ ತು ತದ್ವಿದ್ಧಿ ಯೇನ ಸರ್ವಮಿದಂ ತತಮ್ । ವಿನಾಶಮವ್ಯಯಸ್ಯಾಸ್ಯ ನ ಕಶ್ಚಿತ್ ಕರ್ತುಮರ್ಹತಿ । ಅನ್ತವನ್ತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ । ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ (ಗೀ. ೨-೧೭, ೧೮) ಇಲ್ಲಿ ಆತ್ಮನಿಗೆ ಸರ್ವವ್ಯಾಪಿತ್ವವನ್ನು ಅನುಭವಾನುಸಾರವಾಗಿಯೇ ಹೇಳಿರುತ್ತದೆ. ಆತ್ಮನು ಚೈತನ್ಯಸ್ವರೂಪನಾಗಿರುವದರಿಂದಲೂ ಚೈತನ್ಯಕ್ಕೆ ಯಾವ ಎಲ್ಲೆ ಕಟ್ಟೂ ಇಲ್ಲದಿರುವದರಿಂದಲೂ ಅವನು ಸರ್ವವ್ಯಾಪಿ, ಅದಕ್ಕಿಂತ ಬೇರೆಯಾದ ಸತ್ಯವಸ್ತು ಯಾವದೂ ಇಲ್ಲದ್ದರಿಂದ ಮತ್ತೊಂದರಿಂದ ಅದಕ್ಕೆ ಮಾರ್ಪಾಡಿಲ್ಲ. ಆದ್ದರಿಂದ ಆತ್ಮನು ಅವಿನಾಶಿ, ಅವನ ಸ್ವರೂಪಕ್ಕೆ ತನ್ನಿಂದಲೂ ಮಾರ್ಪಾಡಿಲ್ಲ ; ಅವನು ಪರಮಾರ್ಥಸತ್ಯಸ್ವರೂಪನು. ಇನ್ನು ಶರೀರಾದಿಗಳೊ, ಎಂದರೆ ಚೆನ್ನಾಗಿ ಪರೀಕ್ಷಿಸಿ ನೋಡುವವರೆಗೆ ತೋರುತ್ತಿದ್ದು ವಿಚಾರದ ಕೊನೆಯಲ್ಲಿ ಸ್ವಪ್ನಮಾಯಾದೇಹಗಳಂತೆ ಸುಳ್ಳೆಂದು ಬಾಧಿತವಾಗಿಬಿಡುವದರಿಂದ ಅವು ಅಂತ

ವುಳ್ಳವು ; ಸ್ವರೂಪವೇ ಹೋಗಿ ಬಾಧಿತವಾಗತಕ್ಕವು ; ಅವು ಯಾವಾಗಲೂ ಇರಲೇ ಇಲ್ಲ- ಎಂದು ನಿಶ್ಚಯವಾಗಿಬಿಡುತ್ತದೆ ಎಂದರ್ಥ. ಈ ತರ್ಕಕ್ಕೂ ತರ್ಕದ ಆಕಾರವಿದೆ ; ಆದರೂ ಇದು ಅನುಭವವನ್ನೇ ತೋರಿಸುತ್ತಿದೆ. ನಾವೆಲ್ಲರೂ ಇಂಥ ಆತ್ಮನೇ ಆಗಿದ್ದು, 'ಆತ್ಮನೆಂದರೆ ಯಾರು ?' ಎಂದು ಆಶ್ಚರ್ಯದಿಂದ ಕೇಳುತ್ತಿರುತ್ತೇವೆ. ಶ್ರುತಿಯು 'ಅಶರೀರನಾಗಿರುವ ಆತ್ಮನೇ ನೀವು, ನಿಮಗೆ ಈಗಲೇ ಶರೀರವಿಲ್ಲ' ಎನ್ನುತ್ತಿದೆ.

ಹೀಗೆಯೇ 'ಅಪ್ರಾಣೋ ಹ್ಯಮನಾಃ ಶುಭ್ರಃ ... ಏತಸ್ಮಾಜ್ಜಾಯತೇ ಪ್ರಾಣಃ' (ಮುಂ.೨-೧-೨,೩)ಎಂಬ ಶ್ರುತಿಯಲ್ಲಿ ಅಪ್ರಾಣನೂ ಅಮನಸ್ಕನೂ ಆಗಿದ್ದರೂ ಸುಷುಪ್ತಿಯಿಂದ ಎದ್ದವನಿಗೆ ಕನಸಿನಲ್ಲಿ ಪ್ರಾಣ ಮನಸ್ಸುಗಳು ತೋರಿಕೊಳ್ಳುವಂತೆ ಈಗ ಅಜ್ಞಾನದಿಂದ ಪ್ರಾಣಾದಿಗಳು ಇರುವಂತೆ ತೋರುತ್ತದೆ ಎಂದು ಅನುಭವಾನುಸಾರವಾಗಿಯೇ ಹೇಳಿರುತ್ತದೆ.

ಇದರಂತೆ ಇನ್ನೊಂದು ಶ್ರುತಿವಾಕ್ಯ : '**ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ । ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥**' (ಕಾ. ೨-೧-೪) ಕನಸು, ಎಚ್ಚರ-ಈ ಎರಡು ಅವಸ್ಥೆಗಳನ್ನೂ ಯಾವ ಅನುಭವರೂಪದಿಂದ ಕಂಡುಕೊಳ್ಳುತ್ತಾನೋ ಅವನೇ ಮಹಾವಿಭುವಾದ ಆತ್ಮನು ; ಅವನನ್ನು ಅರಿತುಕೊಂಡರೆ ಶೋಕಿಸುವದಿಲ್ಲ -ಎಂಬ ಶ್ರುತಿಯು ಅನುಭವಾನುಸಾರಿಯಾದ ತರ್ಕವನ್ನು ನಮಗೆ ಮುಂದೆ ಒಡ್ಡಿರುತ್ತದೆ. ಸ್ವಪ್ನವನ್ನು ನೋಡುವವನು ಜಾಗರಿತಾವಸ್ಥೆಯ ಪ್ರಮಾತೃವಲ್ಲ; ಏಕೆಂದರೆ ಎಚ್ಚರದ ಪ್ರಮಾತೃವಿನ ಉಪಾಧಿಗಳಾದ ಶರೀರೇಂದ್ರಿಯ ಮನಸ್ಸುಗಳು ಕನಸಿನಲ್ಲಿರುವದೇ ಇಲ್ಲ; ಕನಸಿನ ಶರೀರಾದಿಗಳಂತೂ ಎಚ್ಚರದಲ್ಲಿರುವದೇ ಇಲ್ಲ. ಹೀಗಿದ್ದರೂ 'ಕನಸನ್ನು ಕಂಡೆ ಎನ್ನುವೆವಲ್ಲ ! ಇವು ಒಂದೊಂದಕ್ಕೆ ಸ್ವಲ್ಪವೂ ಸಂಬಂಧವಿಲ್ಲದ ಎರಡವಸ್ಥೆಗಳು ; ಈ ಎರಡನ್ನೂ ತನ್ನ ಚೈತನ್ಯದಿಂದ ವ್ಯಾಪಿಸಿಕೊಂಡು ತಾನೇತಾನಾಗಿರುವ ಅದ್ವಿತೀಯಾತ್ಮನೇ ನಾನು ಎಂದು ತಿಳಿದರೆ ಸಂಸಾರದ ಶೋಕವಿರುವದಿಲ್ಲ ಎಂಬುದು ಸ್ವಾಭಾವಿಕವಾಗಿದೆ. ಈ ತರ್ಕದಲ್ಲಿ ಒಂದೊಂದು ಮೆಟ್ಟಲಿನಲ್ಲಿಯೂ ಅನುಭವವೇ ಇದೆ. ಇದು ತಾರ್ಕಿಕರ **ಪಂಚಾವಯವವಾಕ್ಯರೂಪವಾದ ನ್ಯಾಯವೇನೂ** ಅಲ್ಲವೆಂಬುದು ಸ್ಪಷ್ಟ.

ಇನ್ನೊಂದು ಶ್ರುತಿ: 'ಸತಾ ಸೋಽಮ್ಯ ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ ತಸ್ಮಾದೇನಂ ಸ್ವಪಿತೀತ್ಯಾಚಕ್ಷತೇ ಸ್ವಂ ಹ್ಯಪೀತೋ ಭವತಿ ॥' (ಛಾಂ. ೬-೮-೧) ಈ ಶ್ರುತಿಯಲ್ಲಿ ನಾವೆಲ್ಲರೂ ಸುಷುಪ್ತಿಯಲ್ಲಿ ನಮ್ಮ ಸ್ವರೂಪದಲ್ಲಿಯೇ ಸೇರಿಕೊಳ್ಳುತ್ತೇವೆ; ಆ ಸ್ವರೂಪವು ಸದ್ರೂಪವಾದ ಬ್ರಹ್ಮವೇ- ಎಂದು ಅನುಭವಾನುಸಾರಿಯಾದ ತರ್ಕವನ್ನು ಹೇಳಿದೆ. ಸುಷುಪ್ತಿಯಲ್ಲಿ ನಮ್ಮ ಸ್ವರೂಪಕ್ಕಿಂತ ಬೇರೆಯಾಗಿ ಯಾವದೊಂದೂ ಇರುವದೇ ಇಲ್ಲ; ಅಲ್ಲಿ ನಾವು ನಾವೇ ಸದ್ರೂಪದಿಂದಲೇ ಇರುತ್ತೇವೆ. ಶರೀರಾದಿಗಳು ನಮ್ಮ ಸ್ವಭಾವವಾಗಿದ್ದರೆ ಆಗ ಅವು ಎಲ್ಲಿಗೆ ಹೋದವು?- ಎಂದು ತರ್ಕದಿಂದ ಸಂಸಾರಿತ್ವವನ್ನು ಕಳೆದು ಪರಮಾತ್ಮಸ್ವರೂಪವೇ ನಮ್ಮದೆಂದು ಈ ಶ್ರುತಿಯಲ್ಲಿ ತೋರಿಸಿಕೊಟ್ಟಿದೆ. ಇಲ್ಲಿ ಯಾವ ಪ್ರಮಾಣವೂ ಇಲ್ಲ, ಲೌಕಿಕತರ್ಕವೂ ಇಲ್ಲ.

ಇನ್ನೊಂದು ಶ್ರುತಿಯನ್ನು ನೋಡಿ: 'ಅತ್ರ ಪಿತಾ ಅಪಿತಾ ಭವತಿ ಮಾತಾ ಅಮಾತಾ ಲೋಕಾ ಅಲೋಕಾ ದೇವಾ ಅದೇವಾ ವೇದಾ ಅವೇದಾಃ, ಅತ್ರ ಸ್ತೇನೋಽಸ್ತೇನೋ ಭವತಿ ಭ್ರೂಣಹಾಽಭ್ರೂಣಹಾ ಚಾಂಡಾಲೋಽಚಾಂಡಾಲಃ ಪೌಲ್ಕಸೋಽಪೌಲ್ಕಸೋ ಶ್ರಮಣೋಽಶ್ರಮಣಸ್ತಾಪಸೋಽತಾಪಸೋಽನನ್ವಾಗತಂ ಪುಣ್ಯೇನಾನನ್ವಾಗತಂ ಪಾಪೇನ ತೀರ್ಣೋ ಹಿ ತದಾ ಸರ್ವಾಞ್ಛೋಕಾನ್ ಹೃದಯಸ್ಯ ಭವತಿ ॥' ಬೃ. ೪-೩-೨೨.

ಇಲ್ಲಿ ತಂದೆ ತಾಯಿ ಮುಂತಾದ ಲೌಕಿಕಕರ್ಮಸಂಬಂಧವೂ ಲೋಕದೇವವೇದಾದಿವೈದಿಕಕರ್ಮಸಂಬಂಧವೂ ಸ್ತೇನಾದಿಪಾಪಕರ್ಮಸಂಬಂಧವೂ ಸುಷುಪ್ತಿಯಲ್ಲಿ ಇರುವದಿಲ್ಲವೆಂದು ಹೇಳಿರುವದು ಎಷ್ಟು ಅನುಭವಸಮ್ಮತವಾಗಿದೆ! ಶರೀರೇಂದ್ರಿಯಮನಸ್ಸುಗಳ ಸಂಬಂಧವಿರುವಾಗಲೇ ಅಲ್ಲವೆ, ಅವಿದ್ಯಾಕಾಮಕರ್ಮಗಳು? ಆದ್ದರಿಂದ ಸುಷುಪ್ತಿಯಲ್ಲಿ ಸಂಸಾರದ ಶೋಕವೂ ಇಲ್ಲ ಎಂದು ಅನುಭವಸಂಮತವಾದ ತರ್ಕವನ್ನು ಇಲ್ಲಿ ಕೊಟ್ಟಿರುತ್ತದೆ. ಮತ್ತೊಂದು ಕಡೆಯಲ್ಲಿ ಇದೇ ಉಪನಿಷತ್ತಿನಲ್ಲಿ ಹೇಳಿರುವದು ಹೀಗಿದೆ:

'ಸಲಿಲ ಏಕೋ ದ್ರಷ್ಟಾಽದ್ವೈತೋ ಭವತ್ಯೇಷ ಬ್ರಹ್ಮಲೋಕಃ ಸಮ್ರಾಡಿತಿ ಹೈನಮನುಶಶಾಸ ಯಾಜ್ಞವಲ್ಕ್ಯ ಏಷಾಽಸ್ಯ ಪರಮಾಗತಿ

ರೇಷಾಸ್ಯ ಪರಮಾ ಸಂಪದೇಷೋಽಸ್ಯ ಪರಮೋ ಲೋಕ ಏಷೋಽಸ್ಯ ಪರಮ ಆನನ್ದಃ ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ ॥' ಬೃ. ೪-೩-೩೨.

ಸುಷುಪ್ತಿಯಲ್ಲಿ ಆತ್ಮಸ್ವರೂಪವು ಅತ್ಯಂತಸ್ವಚ್ಛವಾಗಿರುತ್ತದೆ. ಅದ್ವೈತ ದೃಷ್ಟ್ಯರೂಪವಾಗಿರುತ್ತದೆ, ಬ್ರಹ್ಮಸ್ವರೂಪವೇ ಆಗಿರುತ್ತದೆ. ಅಲ್ಲಿ ಜೀವನ ಸಂಸಾರಿಸ್ವರೂಪದ ಸುಳಿವೂ ಇರುವದಿಲ್ಲ. ಇದು ಜೀವನಿಗೆ ಆಗುವ ಪರಮ ಗತಿಯು ; ಅವನಿಗೆ ಸಿಕ್ಕುವ ಪರಮಸಂಪತ್ತು ; ಅವನಿಗೆ ಸಿಕ್ಕುವ ಪರಮ ಲೋಕವು ; ಇದು ಅವನಿಗೆ ಸಿಕ್ಕಬಹುದಾದ ಪರಮ ಆನಂದವು ; ಈ ಆನಂದದ ಅಂಶವನ್ನೇ ಮಿಕ್ಕ ಜೀವರು ಆಶ್ರಯಿಸಿಕೊಂಡು ಜೀವಿಸುತ್ತಾರೆ- ಎಂದು ಶ್ರುತಿಯು ಆ ಸ್ವರೂಪವನ್ನು ಹೊಗಳಿರುತ್ತದೆ. ಆದ್ದರಿಂದ ಎಚ್ಚರದಲ್ಲಿ ಕಾಣುವ ಜೀವಸ್ವರೂಪವು ಆವಿದ್ಯಕವೇ ಎಂದಾಯಿತು.

ಅವಸ್ಥಾತ್ರಯವನ್ನು ನೇರಾಗಿ ನೋಡಿಕೊಂಡವನೊಬ್ಬನಿಗೆ ಅಲ್ಲವೆ, ಈ ಅನುಭವ ? ಮಿಕ್ಕವರಿಗೆ ಹೇಗೆ ?- ಎಂದು ಶಂಕಿಸಬಾರದು. ಅವಸ್ಥೆಯೊಂದೊಂದರಲ್ಲಿಯೂ ಕಾಣುವ ಎಲ್ಲಾ ಜೀವರನ್ನೂ ಒಳಗೊಂಡೇ ಇಲ್ಲಿ ವಿಚಾರವನ್ನು ಮಾಡಿದೆ. ಆದ್ದರಿಂದ 'ಮಿಕ್ಕವರು', 'ನಾನು'- ಎಂಬ ಭೇದವೇ ಅವಿದ್ಯಾಕೃತವಾಗಿದೆ. ಆ ಅನುಭವವನ್ನು ಶಾಸ್ತ್ರೋಪದೇಶದಂತೆ ಮನದಂದರೆ ನಾವು ಅವಸ್ಥಾತೀತರೇ ಆಗಿರುತ್ತೇವೆಂಬ ನಿಶ್ಚಯವಾಗುವದು. ಇದು ಅವಿದ್ಯಾಕೃತವೆಂಬುದು ಸುಷುಪ್ತ್ಯನುಭವದಿಂದ ನಿರ್ಣಯವಾಗುತ್ತದೆ. 'ನಾವು ದೇಹಾದಿಯುಕ್ತರು, ಅವಸ್ಥಾಯುಕ್ತರು, ಸಂಸಾರಿಗಳು' ಎಂಬ ತಪ್ಪು ತಿಳಿವಳಿಕೆಯನ್ನು ತೆಗೆದುಹಾಕಿ ನಮ್ಮ ನಿಜವಾದ ಪರಮಾತ್ಮಸ್ವರೂಪವನ್ನು ಶ್ರುತಿಯು ಅನುಭವಾನುಸಾರಿಯಾದ ತರ್ಕರೂಪದ ವಾಕ್ಯಗಳಿಂದ ಮನಗಾಣಿಸುತ್ತಿದೆ. ಅವಿದ್ಯೆ ಇತ್ತು, ವಿದ್ಯೆಯಿಂದ ಹೋಯಿತು- ಎಂಬ ಎರಡು ಕಲ್ಪನೆಗಳನ್ನೂ ಮೀರಿರುವ ನಿತ್ಯಾನುಭವರೂಪವಾಗಿರುವದರಿಂದ ಶ್ರುತಿಜನ್ಯ ಜ್ಞಾನಕ್ಕೆ ಯಾವ ಬಾಧಕವನ್ನೂ ಶಂಕಿಸುವದಕ್ಕಿಲ್ಲ. 'ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್' ಆತ್ಮನೊಬ್ಬನೇ ಎಂದಾದ ಮೇಲೆ ಯಾರು ಯಾರನ್ನು ಕಾಣುವದು ?

# ೮. ಅಂತ್ಯಪ್ರಮಾಣ

(15-5-62)

ಶ್ರುತಿಯಲ್ಲಿ ಹೇಳಿರುವ ಅನುಭವದ ಹೆಜ್ಜೆಗಳನ್ನೂ ಅನುಭವಾನುಸಾರಿಯಾದ ತರ್ಕದ ಸ್ವರೂಪವನ್ನೂ ತೋರಿಸಿದ್ದಾಯಿತು. ಶ್ರುತಿಯೇ ಅಂತ್ಯ ಪ್ರಮಾಣವು. ಆದ್ದರಿಂದ ಅದರ ಮೇಲೆ ಅಪೀಲುಮಾಡುವದಕ್ಕೆ ಕೋರ್ಟು ಯಾವದೂ ಇರುವದೇ ಇಲ್ಲ- ಎಂದು ತಿಳಿಸಿದ್ದಾಯಿತು. ಈಗ ಅಂತ್ಯ ಪ್ರಮಾಣವೆಂದರೇನು ? ಇದೇ ಕೊನೆಯದು, ಇದಕ್ಕಿಂತ ಹೆಚ್ಚಿನದಿಲ್ಲ, ಇದರ ಮೇಲೆ ಆಕ್ಷೇಪಣೆಮಾಡಬಾರದು-ಎಂತಲೆ? ಹಾಗಾದರೆ ಇದೆಲ್ಲ ಶ್ರದ್ಧಾಮಾತ್ರವೆಂದಾಗಿಬಿಟ್ಟೀತು ! 'ನಮ್ಮ ಮತಗ್ರಂಥವೂ ಹೀಗೆಯೇ ಅಂತ್ಯಪ್ರಮಾಣ ; ಅದನ್ನು ನಂಬದವರಿಗೆ ದುರ್ಗತಿಯಾಗುವದು' ಎಂದು ಆಯಾ ಮತದವರು ಹೇಳುತ್ತಲೇ ಇದಾರೆ. ಕ್ರಿಸ್ತಿಯನರು ತಮ್ಮ ಗ್ರಂಥವು ಪರಮೇಶ್ವರನಿಂದ ಪ್ರೇರಿತರಾದ ಮಹಾತ್ಮರ ಮೂಲಕ ಜನಗಳಿಗೆ ಆವಿಷ್ಕೃತವಾಗಿದೆ ಎನ್ನುವರು ; ಮಹಮ್ಮದೀಯರೂ ಮಹಮ್ಮದನೇ ಕೊನೆಯ ಪೈಗಂಬರನು ; ಅವನು ದೇವರ ಆದೇಶವನ್ನು ತಿಳಿಸಿಕೊಟ್ಟಿರುತ್ತಾನೆ-ಎನ್ನುತ್ತಾರೆ. ಬೌದ್ಧರು ಬುದ್ಧನು ಸರ್ವಜ್ಞನು; ಅವನ ಉಪದೇಶಕ್ಕೆ ಎರಡಿಲ್ಲ-ಎನ್ನುವರು. ಇತ್ಯಾದಿ, ಇತ್ಯಾದಿ. ಹೀಗಿರುವಲ್ಲಿ ಶ್ರುತಿಯೇ ಅಂತ್ಯ ಪ್ರಮಾಣವೆನ್ನುವದು ಹೇಗೆ ಸರಿಯಾದೀತು ?

ಈ ಆಕ್ಷೇಪಕ್ಕೆ ಪರಿಹಾರವೇನೆಂದರೆ, ಶ್ರುತಿಯು ಅಂತ್ಯಪ್ರಮಾಣವೆಂದರೆ ಅದನ್ನು ಎಲ್ಲಕ್ಕೂ ಹೆಚ್ಚಿನ ಪ್ರಮಾಣವೆಂದು ನಂಬಬೇಕು-ಎಂದೇನೂ ಅಭಿಪ್ರಾಯವಲ್ಲ. ಶ್ರುತಿಯು ಅನುಭವಾನುಸಾರಿಯಾಗಿ ತತ್ತ್ವವನ್ನು ತಿಳಿಸಿಬಿಡುತ್ತದೆ ; ಅದು ತಿಳಿಸಿಕೊಟ್ಟಮೇಲೆ ಅದನ್ನು ಕುರಿತು ಆಶಂಕೆಮಾಡುವದಕ್ಕೆ ಬರುವಹಾಗೆಯೇ ಇಲ್ಲ- ಎಂದು ಅಭಿಪ್ರಾಯ. ಅನುಭವವೆಂದರೆ ಮೂಗು ಕೊಯ್ದುಕೊಂಡರೆ ದೇವರ ಸಾಕ್ಷಾತ್ಕಾರವಾಗುವದೆಂದು ಹೇಳಿದ ಮೂಗಿಲ್ಲದ ದಾಸಯ್ಯನ ಅನುಭವದಂತೆ ಅಲ್ಲ ; ಅವನು ಹೇಳಿದ್ದು ವೈಯಕ್ತಿಕವಾದ ಒಂದು ಅನುಭವ ; ಅದನ್ನು ಶ್ರದ್ಧಾಮಾತ್ರದಿಂದ ನಂಬಬೇಕಾಗಿತ್ತು. ಕೊನೆಗೆ ಅವನು ಮೋಸಗಾರನೆಂದು ಎಲ್ಲರೂ ಕಂಡುಕೊಂಡರು. ಪ್ರಕೃತದಲ್ಲಿ

ಹಾಗಲ್ಲ. ಶ್ರುತಿಯು ಎಲ್ಲರಿಗೂ ಇರುವ ಅನುಭವವನ್ನೇ ಜ್ಞಾಪಿಸಿ "ನೀವು ಶರೀರೇಂದ್ರಿಯಮನಸ್ಸುಗಳುಳ್ಳವರಲ್ಲ, ಆದ್ದರಿಂದ ನೀವು ಪ್ರಮಾತೃಗಳೆಂಬುದು ಅವಿದ್ಯಾಕಲ್ಪಿತವಾದದ್ದು. ಇದೇ ಕಾರಣದಿಂದ ಸರ್ವಪ್ರಮಾಣಗಳೂ ಅವಿದ್ಯಾ ಪುರಃಸರವಾಗಿವೆ. ಅವಿದ್ಯಾಭೂಮಿಯಲ್ಲಿ ಪ್ರಮಾಣಗಳು ನಿಜವಾದರೂ ಸರ್ವಾನುಭವಸಂಮತವಾದ ಅದ್ವೈತಾನುಭವದ ದೃಷ್ಟಿಯಿಂದ ನೋಡಿದರೆ ಪ್ರಮಾಣಪ್ರಮೇಯವ್ಯವಹಾರವೇ ಹುಸಿ ಎಂದು ಗೊತ್ತಾಗುತ್ತದೆ ; ಆದ್ದರಿಂದ ನೀವು ನಿಜವಾಗಿ ಪ್ರಮಾತೃಗಳಲ್ಲ, ಸಂಸಾರಿಗಳಲ್ಲ. ಆ ಪರಮಾರ್ಥವಾದ ಪರಮಾತ್ಮನೇ–ಎಂಬುದನ್ನು ತಿಳಿದು ನಿಮ್ಮ ಸ್ವರೂಪದಲ್ಲಿ ನೀವು ಇರಿ" –ಎಂದು ಹೇಳುತ್ತದೆ. ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪರಾಧಿಗಳೊಳಗೇ ಯಾರಾದರೊಬ್ಬರನ್ನು ಅಪ್ರೂವರ್ ಎಂತ ಒಪ್ಪಿಕೊಂಡು ಮಿಕ್ಕವರಮೇಲೆ ತಪ್ಪನ್ನು ಹೊರಿಸುವಂತೆ ವೇದಾಂತಿಗಳು ಶ್ರುತಿಯು ಅನುಭವಾನುಸಾರವಾಗಿ ಹೇಳುವದರಿಂದ ಆ ಪ್ರಮಾಣದ ಆಧಾರದಿಂದ ಎಲ್ಲಾ ಪ್ರಮಾಣಗಳೂ ಅವಿದ್ಯಾಪುರಃಸರವೇ ಎಂದು ನಿಶ್ಚಯಿಸುತ್ತಾರೆ. ಇದರಿಂದ ಶ್ರುತಿಯೂ ಪ್ರಮಾಣವಲ್ಲವೆಂದೇ ಆಗುವದು ನಿಜ ; ಆದರೆ ಅದು ಆತ್ಮನನ್ನು ನಿತ್ಯಶುದ್ಧ ಬುದ್ಧಮುಕ್ತಸ್ವಭಾವನಾದ ಅದ್ವಿತೀಯಬ್ರಹ್ಮವೆಂದು ತಿಳಿಸಿಕೊಟ್ಟಮೇಲೆಯೇ ಅಪ್ರಮಾಣವಾಗುತ್ತದೆ ಎಂಬುದೊಂದು ವಿಶೇಷವು. ಈ ಅರ್ಥದಲ್ಲಿ ಅದು **ಅಂತ್ಯಪ್ರಮಾಣವು**, ಎಂದರೆ ಶ್ರುತಿಯ ಬೋಧೆಯನ್ನು ಅರಿತುಕೊಂಡ ಮೇಲೆ ಪ್ರಮಾಣವ್ಯವಹಾರವು ಉಳಿಯುವದಿಲ್ಲ ಎಂದು ಅರ್ಥ.

ಶ್ರುತಿಯು ಬ್ರಹ್ಮವನ್ನು 'ಇದು' ಎಂದು ವಿಷಯೀಕರಿಸಿ ತಿಳಿಯಿಸುವದಿಲ್ಲ. '**ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ**' ಅರಿಯಲ್ಪಟ್ಟದು, ಅರಿಯಲ್ಪಡದೆ ಇರುವದು– ಈ ಎರಡಕ್ಕಿಂತಲೂ– ವ್ಯಾಕೃತಾವ್ಯಾಕೃತಪ್ರಪಂಚಗಳೆರಡಕ್ಕಿಂತಲೂ– ನಮ್ಮಗಳೆಲ್ಲರ ಆತ್ಮನಾಗಿರುವ ಈ ಪರಬ್ರಹ್ಮವು ಬೇರೆಯೇ ; '**ಅಕ್ಷರಾತ್ ಪರತಃ ಪರಃ**' ಎಲ್ಲಕ್ಕೂ ವಿಲಕ್ಷಣವಾಗಿರುವ ಅವ್ಯಾಕೃತಕ್ಕಿಂತಲೂ ಬೇರೆ ; '**ನೇತಿ ನೇತಿ**' ಇದಲ್ಲ, ಇದಲ್ಲ– ಎಂದೀ ಪರಿಯಲ್ಲಿ ಅನಾತ್ಮವನ್ನೆಲ್ಲ ನಿಷೇಧಮಾಡಿ ಪರಮಾರ್ಥತತ್ತ್ವವನ್ನು ಅದು ತಿಳಿಸುತ್ತದೆ.

ಉಪನಿಷತ್ತಿನಲ್ಲಿರುವ ನಿಷೇಧವಾಕ್ಯಗಳಿಗೂ ಬೌದ್ಧರು ವಸ್ತುಧರ್ಮಗಳನ್ನು ನಿಷೇಧಮಾಡುವ ವಾಕ್ಯಗಳಿಗೂ ಒಂದು ವೈಲಕ್ಷಣ್ಯವಿದೆ. ಅದನ್ನು ಮನಸ್ಸಿಗೆ ತಂದುಕೊಳ್ಳದೆ ಅನೇಕರು ಅದ್ವೈತವೇದಾಂತವು ಬೌದ್ಧಮತವೇ ಎಂದು ಭ್ರಾಂತರಾಗಿರುತ್ತಾರೆ. ಮಾಧ್ಯಮಿಕಕಾರಿಕಾಕರ್ತೃವಾದ ನಾಗಾರ್ಜುನನು 'ಬುದ್ಧನು ಸರ್ವದೃಷ್ಟಿಗಳ ನಾಶಕ್ಕಾಗಿ ಪ್ರತೀತ್ಯಸಮುತ್ಪಾದವನ್ನು ಬೋಧಿಸಿದನು' ಎಂದು ಬರೆದಿರುತ್ತಾನೆ. 'ಶೂನ್ಯತಾ ಸರ್ವದೃಷ್ಟೀನಾಂ ಪ್ರೋಕ್ತಾ ನಿಃಸರಣಂ ಜಿನೈಃ । ಯೇಷಾಂ ತು ಶೂನ್ಯತಾ ದೃಷ್ಟಿಸ್ತಾನಸಾಧ್ಯಾನ್ ಬಭಾಷಿರೇ' (ಮಾ. ಕಾ. ೧೩–೮) ಎಂದರೆ ಯಾವ ದೃಷ್ಟಿಯೂ ಸರಿಯಲ್ಲ, ಯಾವದೊಂದೂ ಇಲ್ಲ ಎಂಬುದೇ ಬೌದ್ಧರ ವಾದವು. ಯಾರು ಶೂನ್ಯತೆಯೇ ನಮ್ಮ ದೃಷ್ಟಿ ಎಂದು ತಿಳಿಯುವರೋ ಅವರಿಗೆ ಹೇಳಿಕೊಡುವದು ಎಂದಿಗೂ ಸಾಧ್ಯವಿಲ್ಲ– ಎಂದರ್ಥ. ಇದು ಬೌದ್ಧರ ದೃಷ್ಟಿಯಂತೆ ನಿಷೇಧವಾಕ್ಯದ ಅಭಿಪ್ರಾಯ. ಸರ್ವವಿಧವಾದ ಕಾರ್ಯಕಾರಣವಾದವನ್ನೂ ಅಲ್ಲಗಳೆಯುವದು– ಪದಾರ್ಥಗಳಿಗೆ ಯಾವದಕ್ಕೂ ಸ್ವಭಾವವಿಲ್ಲವೆನ್ನುವದು– ಶೂನ್ಯವಾದಿಗಳ ಮತ. ಆದರೆ ವೇದಾಂತವಾಕ್ಯಗಳ ಉಪದೇಶವು ಇದಲ್ಲ. ಪರಮಾರ್ಥವೊಂದಿದೆ, ಅದರಲ್ಲಿ ಅಜ್ಞರು ಕಲ್ಪಿಸಿರುವ ಧರ್ಮಗಳು ಯಾವವೂ ನಿಜವಾಗಿ ಇಲ್ಲ ಎಂಬುದೇ ಶ್ರುತಿಯಲ್ಲಿರುವ ನಿಷೇಧವಾಕ್ಯಗಳ ಅಭಿಪ್ರಾಯ. ಆತ್ಮಸ್ವರೂಪವು ಇಂಥದ್ದೆಂದು ತಿಳಿಯಬಾರದು ; ಅದು ಹೀಗಿದೆ ಎಂದು ತಿಳಿಯುವದು ಹೇಗೆ ತಪ್ಪೋ, ಅದು ಹೀಗಿಲ್ಲ ಎಂದು ನಿಷೇಧದಲ್ಲಿ ಪರ್ಯವಸಾನಮಾಡುವದೂ ಹಾಗೇಯೇ ತಪ್ಪು. ಆತ್ಮನನ್ನು ಅತ್ಮನೆಂದು ವರ್ಣಿಸುವದುಕೂಡ ಅಧ್ಯಾಸವೇ, ಭ್ರಾಂತಿಯೇ. ಆತ್ಮನಲ್ಲಿ ಯಾವ ಶಬ್ದಪ್ರವೃತ್ತಿನಿಮಿತ್ತಗಳೂ ಇಲ್ಲ. ಆದ್ದರಿಂದ ಅವನು ಸರ್ವಪ್ರಪಂಚೋಪಶಮನು ಎಂದು ತಿಳಿದು ಆತ್ಮಸ್ವರೂಪದಲ್ಲಿಯೇ ನಿಲ್ಲುವದೇ ಆತ್ಮಾನುಭವ.

ಈ ಎರಡು ವಾದಗಳಲ್ಲಿ ಯಾವದು ಏತಕ್ಕೆ ಒಪ್ಪತಕ್ಕದ್ದು ? ..ಎಂಬುದನ್ನು ಈಗ ಪರಿಶೀಲಿಸೋಣ. ಮಾಧ್ಯಮಿಕಮತದಲ್ಲಿ ದ್ವೈತಪ್ರಪಂಚದಲ್ಲಿ ಕಾಣುವ ಪದಾರ್ಥಗಳೆಲ್ಲವೂ ಪರಸ್ಪರಸಾಪೇಕ್ಷವಾಗಿವೆ ; ಸ್ವತಃ ಅವಕ್ಕೆ ಯಾವ ಸ್ವಭಾವವಾದರೂ ಇದೆ ಎಂದು ತರ್ಕದಿಂದ ತೋರಿಸಿಕೊಡುವದಕ್ಕಾಗುವದಿಲ್ಲ. ಇದೆ, ಇಲ್ಲ, ಇದ್ದೂ ಇಲ್ಲ, ಇಲ್ಲವೇ ಇಲ್ಲ–ಎಂಬ ನಾಲ್ಕು

ಕೋಟಿಗಳಿಂದ ಪರೀಕ್ಷಿಸಿದರೆ ಯಾವದಕ್ಕೂ ಆ ಪದಾರ್ಥಗಳು ಸೇರುವಂತಿಲ್ಲ. ಆದ್ದರಿಂದ 'ಶೂನ್ಯತಾ ಸರ್ವದೃಷ್ಟೀನಾಮ್' ಯಾವ ಮತವೂ ನಿಲ್ಲುವದಿಲ್ಲ -ಎಂಬುದೇ ಸರಿ ಎಂದಾಗುತ್ತದೆ. ಹೀಗೆ ಮಾಧ್ಯಮಿಕಮತವು ಯುಕ್ತಿಯ ಆಧಾರದಮೇಲೆ ನಿಂತಿರುತ್ತದೆ. ಆದರೆ ವೇದಾಂತವು ಅನುಭವ ಮತ್ತು ಅನುಭವಾನುಸಾರಿಯಾದ ಯುಕ್ತಿ- ಇವೆರಡನ್ನೂ ಅವಲಂಬಿಸಿರುತ್ತದೆ. ಯಾವ ವಸ್ತು ನಮಗೆ ತೋರಿದರೂ ಅದರ ತತ್ತ್ವವು ಏನೋ ಒಂದಾಗಿರ ಬೇಕು ; ಏನೂ ಆಧಾರವಿಲ್ಲದೆ ತೋರಲಾರದು. ಬೆಳ್ಳಿಯೆಂದು ತೋರಿದ್ದು ನಿಜವಾದ ಬೆಳ್ಳಿಯಾಗಿರದಿದ್ದರೂ ಕಪ್ಪೆಯಚಿಪ್ಪಾಗಿಯಾದರೂ ಇರುತ್ತದೆ ಎಂಬ ಅನುಭವದ ಆಧಾರದಿಂದ ತಂದೊಡ್ಡಿರುವ ಯುಕ್ತಿಯಿದು. ಇನ್ನು ನಮ್ಮ ಆತ್ಮನು ಇಲ್ಲವೆಂದು ತೋರಿಸಿಕೊಡುವದಕ್ಕೆ ಯಾರಿಂದಲೂ ಆಗುವ ದಿಲ್ಲ. ಮಾಧ್ಯಮಿಕರು 'ಅವಿದ್ಯಮಾನೇ ಭಾವೇ ಚ ಕಸ್ಯಾಭಾವೋ ಭವಿಷ್ಯತಿ । ಭಾವಾಭಾವವಿಧರ್ಮಾ ಚ ಭಾವಾಭಾವಂ ಚ ವೇತ್ತಿ ಕಃ ॥' (ಮಾ. ಕಾ. ೫-೬) ಭಾವವಿಲ್ಲದಮೇಲೆ ಅಭಾವವೂ ಇಲ್ಲ ; ಭಾವಾ ಭಾವಗಳಿಲ್ಲದ್ದರಿಂದ ಭಾವಾಭಾವಗಳನ್ನು ಅರಿಯುವ ತದ್ವಿಲಕ್ಷಣನಾದ ಆತ್ಮನೂ ಇಲ್ಲ- ಎಂದು ಯುಕ್ತಿಯಿಂದ ಆತ್ಮನನ್ನೂ ಇಲ್ಲವೆಂದು ತೋರಿಸು ವದಕ್ಕೆ ಹೊರಟಿದ್ದಾರೆ. ಆದರೆ, ಭಾವವಾಗಲಿ, ಅಭಾವವಾಗಲಿ ಉಂಟೆಂ ದಾಗಲಿ, ಇಲ್ಲವೆಂದಾಗಲಿ- ನಿರ್ಣಯಿಸುವದಕ್ಕೆ ಯಾವನೊಬ್ಬನೂ ಇಲ್ಲವೇ ಇಲ್ಲವಾದರೆ ಉಂಟು, ಅಥವಾ ಇಲ್ಲ- ಎಂಬೆರಡರಲ್ಲಿ ಒಂದೂ ಸಿದ್ಧವಾಗು ವದಿಲ್ಲ ; ಆದ್ದರಿಂದ ಭಾವಾಭಾವಪರೀಕ್ಷಕನನ್ನು ಇಲ್ಲವೆನ್ನುವದು ಸಾಹಸದ ಮಾತು. ತನ್ನನ್ನುತಾನು ಇದೇನೆಂದಾಗಲಿ ಇಲ್ಲವೆಂದಾಗಲಿ ನಿರ್ಣಯಿಸು ವದು ಹುಚ್ಚರ ಪ್ರವೃತ್ತಿ ; ಏಕೆಂದರೆ ತಾನು ಇದೇನೆಂದು ಇಟ್ಟುಕೊಳ್ಳದೆ ಯಾವದರ ನಿರ್ಣಯವೂ ಆಗುವಂತಿಲ್ಲ. ಆದ್ದರಿಂದ ಸರ್ವಸಾಕ್ಷಿಯಾದ ಆತ್ಮನೆಂಬ ತನ್ನ ಸ್ವರೂಪವನ್ನು ಕೊಡವಿಕೊಳ್ಳುವದಕ್ಕೆ ಯಾರಿಂದಲೂ ಆಗುವಂತಿಲ್ಲ-- ಎಂಬ ವೇದಾಂತವಾದವೇ ಇಲ್ಲಿ ಅನುಭವಾನುಸಾರಿಯಾದ ಯುಕ್ತಿಯಿಂದ ನಿಲ್ಲುತ್ತದೆ.

ಹೀಗೆ ಅದ್ವೈತವೇದಾಂತವಾದಕ್ಕೂ ಶೂನ್ಯವಾದಕ್ಕೂ ಇರುವ ವೈಲಕ್ಷಣ್ಯ ವನ್ನು ನಮ್ಮವರೂ ಅನೇಕರು ಅರಿಯಲಾರದೆಹೋಗಿರುತ್ತಾರೆ. ಅದ್ವೈತ

ವನ್ನು ಹಾಸ್ಯಮಾಡುವದಕ್ಕಾಗಿ ಒಬ್ಬ ದ್ವೈತಿಪಂಡಿತರು ಶಂಕರರ ಜೀವನಚರಿತ್ರೆಯನ್ನು ಪರಾಮರ್ಶಿಸಿ ಅವರು 'ಬಕ್ಕಸ್ವಾಮಿ' ಎಂಬವರಲ್ಲಿಗೆ ಹೋದರೆಂದೂ ಆ ಗುರುಗಳು 'ಶೂನ್ಯವೇ ಬ್ರಹ್ಮ, ಅದನ್ನು ಸಾಕ್ಷಾತ್ಕರಿಸಿಕೊ ಎಂದು ಉಪದೇಶಮಾಡಿದರೆಂದೂ ಬರೆದಿದಾರೆ ! ಶೂನ್ಯವೇ ತತ್ತ್ವವೆಂಬುದನ್ನು ಮನದಟ್ಟುಮಾಡಿಕೊಳ್ಳುವದಕ್ಕೆ ಯೋಗಸಮಾಧಿಯನ್ನು ಬೌದ್ಧರು ಹೇಳಿರುವದು ನಿಜ ; ಆದರೆ ಆ ತತ್ತ್ವಸಾಕ್ಷಾತ್ಕಾರವು ಯಾರಿಗಾಗಬೇಕೋ ಅವರನ್ನು ಉಳಿಸಿಕೊಳ್ಳದೆ ಯಾರಿಗೆತಾನೆ ಸಮಾಧಿಯು ಸಾಧ್ಯವಾದಿತು ? ಬೌದ್ಧರ ಚತುಷ್ಕೋಟಿವಾದವನ್ನು ಅವಲಂಬಿಸಿಯೇ ಶ್ರೀಗೌಡಪಾದರು 'ಕೋಟ್ಯಶ್ಚತಸ್ರ ಏತಾಸ್ತು ಗ್ರಹೈರ್ಯಾಸಾಂ ಸದಾವೃತಃ । ಭಗವಾನಾಭಿರಸ್ಪೃಷ್ಟೋ ಯೇನ ದೃಷ್ಟಃ ಸ ಸರ್ವದೃಕ್ ॥' (ಗೌ. ಕಾ. ೪..೮೪) ಇದೆ, ಇಲ್ಲ. ಇದ್ದೂ ಇಲ್ಲ, ಇಲ್ಲವೇ ಇಲ್ಲ.. ಎಂಬ ನಾಲ್ಕುಕೋಟಿಗಳಿಂದ ಆವೃತವಾಗಿರುವ ಅವುಗಳ ಸೋಂಕಿಲ್ಲದ ಭಗವಂತನನ್ನು ಕಂಡವನೇ ಸರ್ವಜ್ಞನು' ಎಂದಿರುತ್ತಾರೆ. ಪ್ರಮಾಣವೆಲ್ಲವೂ ನಿರ್ವಿಕಲ್ಪನಾದ ಆತ್ಮನಲ್ಲಿ ಏನನ್ನಾದರೂ ಕಲ್ಪಿಸುತ್ತಿರುತ್ತದೆ. ಸರ್ವಶಬ್ದಪ್ರವೃತ್ತಿನಿಮಿತ್ತಶೂನ್ಯನಾಗಿರುವ ಆತ್ಮನನ್ನು ಯಾವ ಮಾತಿನಿಂದ ತಿಳಿಸಿದರೂ ತಪ್ಪಾಗುತ್ತದೆ ; ಇದ್ದದ್ದನ್ನು ಇಲ್ಲವೆಂದು ಶ್ರುತಿಯು ನಿಷೇಧಿಸಿಲ್ಲ, ಕಲ್ಪಿತವಾದದ್ದನ್ನು ಇಲ್ಲವೆನ್ನುತ್ತಿದೆ. ತುರೀಯವೆಂದರೆ ಕಲ್ಪಿತವಾಗಿರುವ ಪ್ರಾಣಾದಿಗಳ ಸೋಂಕಿಲ್ಲದ ಆತ್ಮನೆಂದರ್ಥ ; ತುರೀಯವೆಂದರೆ ಅವಸ್ಥೆಯಲ್ಲ ; ಅಧ್ಯಾರೋಪಿತವಾಗಿರುವ ಮೂರೂ ಅವಸ್ಥೆಗಳ ಸಂಪರ್ಕವಿಲ್ಲದ ವಿಲಕ್ಷಣವಾದ ಆತ್ಮತತ್ತ್ವವು.

ವೇದಾಂತದಲ್ಲಿ ನಿಷೇಧವಾಕ್ಯಗಳ ಅಭಿಪ್ರಾಯವೇನೆಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕಾದದ್ದು ಅತ್ಯವಶ್ಯ. 'ಅಸ್ಥೂಲ' ಎಂದರೆ ಸ್ಥೂಲವಲ್ಲ ಎಂದಿಷ್ಟೇ ಅರ್ಥ, ಅಣು ಎಂದಲ್ಲ ; ಆದ್ದರಿಂದ ಅನಣು ಎಂದು ಶ್ರುತಿಯು ಅಣುತ್ವವನ್ನೂ ನಿಷೇಧಿಸಿದೆ. 'ನೇತಿ ನೇತಿ' ಇದಲ್ಲ, ಇದಲ್ಲ.. ಎಂದರೆ ಅಲ್ಲ ಎಂದರ್ಥವನ್ನು ಮಾಡಬಾರದು, ಅಲ್ಲವೆಂಬುದೂ ಅಲ್ಲ ; ಕಲ್ಪಿತವಾದದ್ದೆಲ್ಲ ನಿವೃತ್ತಿಯಾದರೆ ಇದ್ದಂತೆ ಇರುವ ತತ್ತ್ವದಲ್ಲಿ ನೆಲೆನಿಲ್ಲುವೆವು. 'ಸಿದ್ಧಂತು ನಿವರ್ತಕತ್ವಾತ್'– ಅದರದಲ್ಲದ ಧರ್ಮವನ್ನು ನಿವೃತ್ತಿಮಾಡುವದರಿಂದಲೇ ಶಾಸ್ತ್ರಕ್ಕೆ ಪ್ರಾಮಾಣ್ಯ ಎಂದು ದ್ರವಿಡಾಚಾರ್ಯರು ಹೇಳಿರು

ವದಕ್ಕೆ ಇದರಲ್ಲಿಯೇ ತಾತ್ಪರ್ಯ. 'ಇದು ಹಾವಲ್ಲ ಎಂದರೆ ಸಾಲದು, ಹಗ್ಗವೆಂದೂ ತಿಳಿಯಿಸಿಕೊಡಬೇಕಾದದ್ದು ಅವಶ್ಯ' ಎಂದು ಈಗಿನ ಕೆಲವರು ವೇದಾಂತಿಗಳು ವಾದಿಸುತ್ತಿರುತ್ತಾರೆ; ಅನಾತ್ಮನಿಷೇಧವು ಸಾಲದು, ಆತ್ಮಸ್ವರೂಪವನ್ನೂ ಹೇಳಬೇಕು– ಎಂಬುದು ಅವರ ಅಭಿಪ್ರಾಯ. ಇದು ಆಗದ ಕೆಲಸ. ಆತ್ಮನು ನಿರ್ವಿಶೇಷನು; ಯಾವ ವಾಕ್ಯಕ್ಕೂ ಮನಃಪ್ರತ್ಯಯಕ್ಕೂ ವಿಷಯನಲ್ಲ, ಆತನು. ಅವನನ್ನು ವಿಧಿಮುಖವಾಗಿ ತಿಳಿಸಿಕೊಡುವದು ಹೇಗೆತಾನೆ ಆದೀತು? ತತ್ತ್ವಶಾಸ್ತ್ರವೆಂದರೆ ಇದು ಏನು? ಎಂದು ತತ್ತ್ವವನ್ನು ನಿರ್ಣಯಿಸುವದು– ಎಂದು ಪಾಶ್ಚಾತ್ಯರಲ್ಲಿ ಒಬ್ಬಾತನು ಹೇಳಿರುತ್ತಾನೆ. ಅದು ಸರಿಯಲ್ಲ. ಕಲ್ಪಿಸಿ ನಿರ್ಣಯಿಸುವದನ್ನು ತಪ್ಪಿಸಿ ತತ್ತ್ವದಲ್ಲಿ ನೆಲೆನಿಲ್ಲಿಸುವದೇ ಪರಮತತ್ತ್ವಶಾಸ್ತ್ರ, ಎಂಬುದು ವೇದಾಂತಸಿದ್ಧಾಂತ.

ಅಂತೂ ಇಷ್ಟು ನಿರ್ಣಯವಾಯಿತು: ಜ್ಞಾತೃತ್ವಕರ್ತೃತ್ವಾದಿ ವ್ಯವಹಾರಗಳನ್ನು ಆಶ್ರಯಿಸಿಯೇ ಮಿಕ್ಕ ಶಾಸ್ತ್ರಗಳೆಲ್ಲವೂ ಪ್ರವೃತ್ತವಾಗಿವೆ. ಅವುಗಳಲ್ಲಿ ಅವಿದ್ಯಾಪುರಸ್ಸರವಾಗಿರುವ ತಿಳಿವಳಿಕೆಯನ್ನೇ ವಿದ್ಯೆಯೆಂದು ಕರೆದಿದೆ. ವಿದ್ಯಾವಿದ್ಯೆಗಳೆಂದರೂ ಅವಿದ್ಯೆಯೇ; ಸರ್ವವ್ಯವಹಾರಾತೀತನಾದ ನಿತ್ಯಶುದ್ಧಬುದ್ಧಮುಕ್ತಾತ್ಮನಲ್ಲಿ ನೆಲೆನಿಲ್ಲುವ ಪರಮಾನುಭವವೇ ಪರಮಾರ್ಥವಿದ್ಯೆ– ಎಂಬುದೇ ಶಾಂಕರ ವೇದಾಂತದ ತಿರುಳು.

# ೯. ಶ್ರೀಶಂಕರಭಗವತ್ಪಾದರ ಗುಣಕಥನ

(16—5—62)

ಆಚಾರ್ಯರ ಗುಣಕಥನವನ್ನು ಮಾಡುವದು ಹೇಗೆ?- ಎಂಬುದನ್ನು ಯೋಚಿಸಿ ನಾನು ಒಂದು ತೀರ್ಪಿಗೆ ಬಂದಿರುತ್ತೇನೆ. ಯಾವ ಒಂದು ಗುಣವನ್ನು ಹೇಳಿದರೆ ಎಲ್ಲಾ ಗುಣವನ್ನೂ ಹೇಳಿದಂತೆ ಆಗುತ್ತದೆಯೋ ಅಂಥ ಯಾವದಾದರೊಂದು ಗುಣವಿದ್ದರೆ ಅದನ್ನು ಹೇಳಿಬಿಟ್ಟರಾಯಿತು. ಆ ಮಹಾಮಹಿಮರು ಸರ್ವವ್ಯವಹಾರಾತೀತವಾದ ತಮ್ಮ ಸ್ವರೂಪವಾದ ಪರಮಾತ್ಮಭಾವದಲ್ಲಿಯೇ ಇರುತ್ತಿದ್ದರು. ಇದೇ ಅವರಲ್ಲಿದ್ದ ಅಸಾಧಾರಣಗುಣ.

ಪರಮಾತ್ಮನು ಎತರಲ್ಲಿ ಪ್ರತಿಷ್ಠಿತನಾಗಿರುತ್ತಾನೆ?- ಎಂಬ ಪ್ರಶ್ನೆಗೆ 'ತನ್ನ ಮಹಿಮೆಯಲ್ಲಿ' ಎಂದು ಛಾಂದೋಗ್ಯದಲ್ಲಿ ಉತ್ತರವನ್ನು ಹೇಳಿರುತ್ತದೆ. ಸರ್ವವ್ಯವಹಾರಾತೀತನಾಗಿ ತನ್ನ ಸ್ವರೂಪದಲ್ಲಿಯೇ ಪರಮಾತ್ಮನು ಇದ್ದುಕೊಂಡಿರುವದರಿಂದ ಅವನಿಗೆ ಮತ್ತೊಂದು ಆಧಾರವಾಗಿರುವ ಸಂಭವವಿಲ್ಲ. ಭೋಕ್ತೃತ್ವ, ಕರ್ತೃತ್ವ, ಜ್ಞಾತೃತ್ವ- ಇವುಗಳಲ್ಲಿ ಹಿಂದುಹಿಂದಿನದಕ್ಕೆ ಮುಂದುಮುಂದಿನ ವ್ಯವಹಾರವು ಆಧಾರವಾಗಿರುತ್ತದೆ. ವ್ಯವಹಾರವೆಂದರೆ **ಪ್ರತ್ಯಯ, ವ್ಯಪದೇಶ,** ಕರ್ಮ- ಅರಿಯುವದು, ನುಡಿಯುವದು, ನಡೆಯುವದು. ಇಚ್ಛಾದ್ವೇಷದಿಂದುಂಟಾದ ದ್ವಂದ್ವಮೋಹವು ಹುಟ್ಟಿದ ಪ್ರಾಣಿಮಾತ್ರಕ್ಕೆ ಅಂಟಿಕೊಂಡಿರುತ್ತದೆ- ಎಂದು ಭಗವಂತನು ಅರ್ಜುನನಿಗೆ ಹೇಳಿರುತ್ತಾನೆ. ಯಾವನಿಗೆ ಅಹಂಭಾವವಿಲ್ಲವೋ ಅವನಿಗೆ 'ಇಚ್ಛಾ ದ್ವೇಷಃ **ಸುಖಂ ದುಃಖಂ ಸಂಘಾತಶ್ಚೇತನಾ** ಧೃತಿಃ' ಎಂದು ಹೇಳಿದ ಕ್ಷೇತ್ರಧರ್ಮಗಳು ಯಾವವೂ ಇರುವಂತಿಲ್ಲ ; ಕರ್ತೃತ್ವಭೋಕ್ತೃತ್ವಜ್ಞಾತೃತ್ವ- ಎಂಬ ವ್ಯವಹಾರಗಳು ಅವನನ್ನು ಸೋಂಕುವದೇ ಇಲ್ಲ.

ವೇದಾಂತಿಗಳು ಹೇಳುವ ಅಕರ್ತೃತ್ವಜ್ಞಾನದ ರಹಸ್ಯವನ್ನರಿಯದೆ 'ಇದು ಸೋಮಾರಿಗಳ ಶಾಸ್ತ್ರ' ಎಂದು ಕೆಲವರು ಜರಿಯುತ್ತಾರೆ. ಏನನ್ನಾದರೂ ಮಾಡುವದು ಅಥವಾ ಬಿಡುವದು- ಇವೇ ಅಲ್ಲವೆ, ಜೀವನದ ಗುರುತುಗಳು ? ಇವಿಲ್ಲ

ದಿದ್ದರೆ ಕಲ್ಲು ಮುಂತಾದ ಜಡವಸ್ತುಗಳಿದ್ದಂತೆ ಇರಬೇಕಾದೀತು- ಎಂಬುದು ಅವರ ಅಭಿಪ್ರಾಯ. ಆದರೆ ನಿಜವೇನೆಂದರೆ : ವೇದಾಂತದಲ್ಲಿ ಹೇಳಿರುವದು ಕರ್ಮ, ಅಕರ್ಮ-ಇವೆರಡನ್ನೂ ಮೀರಿದ ಸ್ಥಿತಿ. ಜನಕಾದಿಗಳು ಲೋಕಸಂಗ್ರಹಕ್ಕಾಗಿ ರಾಜ್ಯಭಾರವನ್ನು ವಹಿಸುವದೇ ಮುಂತಾದ ಕರ್ಮವನ್ನು ಮಾಡುತ್ತಿದ್ದರೂ ನಿಷ್ಕ್ರಿಯಾತ್ಮನಲ್ಲಿಯೇ ಇದ್ದರು ; ಎಷ್ಟೋ ಜನ ಅವಧೂತರು ಬಾಹ್ಯದಲ್ಲಿ ಮೌನವನ್ನು ಧರಿಸಿ ಆತ್ಮಚಿಂತನದಲ್ಲಿಯೇ ಇರುತ್ತಿದ್ದರೂ ಅವರ ಸನ್ನಿಧಿಯ ಮಹಿಮೆಯಿಂದ ಜನರು ಅದ್ಭುತಕಾರ್ಯಗಳನ್ನು ಮಾಡಿರುತ್ತಾರೆ. ಯಾಜ್ಞವಲ್ಕ್ಯರು ಲೋಕಕ್ಕೆ ಸಂಮತವಾಗಿ ಗಾರ್ಹಸ್ಥ್ಯವನ್ನೂ ಮಾಡಿ ಸಂನ್ಯಾಸವನ್ನೂ ಮಾಡಿ ಆದರ್ಶವಾದ ನಡತೆಯನ್ನು ತೋರಿಸಿದರು. ಅವರ ಬೋಧೆಯು ನಮಗೆಲ್ಲ ಶ್ರೇಯಃಸಾಧನವಾಗಿದೆ. ಬಾಲ್ಯದಲ್ಲಿಯೇ ಪರಮಹಂಸರಾದ ಆಚಾರ್ಯರು ತಮ್ಮ ಹದಿನಾರನೆಯ ವಯಸ್ಸಿನೊಳಗಾಗಿ ಮಾಡಿದ ಮಹಾದ್ಭುತಕಾರ್ಯಗಳು ಈಗ ಯಾರಿಂದತಾನೆ ಸಾಧ್ಯ ?

ಆಚಾರ್ಯರನ್ನು ಹೊಗಳುವವರು ಈಗ ಹಲವರು ಇರುತ್ತಾರೆ. ಊರೂರಲ್ಲಿಯೂ ಶಂಕರಜಯಂತಿಯ ಉತ್ಸವಗಳಾಗುತ್ತಿವೆ. ಕೋಸಂಬರಿಪಾನಕಗಳ ಹಂಚುವಿಕೆಯಿಂದ ಶಂಕರಾರಾಧನೆಯಾಯಿತೆಂದು ಬಗೆಯುವವರು ಎಷ್ಟೋ ಮಂದಿ ! ಆದರೆ ಆಚಾರ್ಯರು ಬೋಧಿಸಿರುವ ಸರ್ವವ್ಯವಹಾರಾತೀತಬ್ರಹ್ಮಾತ್ಮಭಾವದ ರಹಸ್ಯವನ್ನು ಮನದಂದುಕೊಂಡಿರುವ ಮಹಾತ್ಮರು ಎಷ್ಟುಮಂದಿ ? ವ್ಯವಹಾರಾತೀತನಾಗಿರುವದೆಂದರೆ ಏನೂ ಮಾಡದೆ ಸುಮ್ಮನೆ ಒಂದುಕಡೆ ಕೂತಿರುವದಲ್ಲ, 'ನೈವ ಕಿಞ್ಚಿತ್ ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿದ್ । ಪಶ್ಯನ್ ಶೃಣ್ವನ್ ಸ್ಪೃಶನ್ ಜಿಘ್ರನ್ನಶ್ನನ್ ಗಚ್ಛನ್ ಸ್ವಪನ್ ಶ್ವಸನ್ । ಪ್ರಲಪನ್ ವಿಸೃಜನ್ ಗೃಹ್ಣನ್ನುನ್ಮಿಷನ್ನಿಮಿಷನ್ನಪಿ ॥' (ಗೀ. ೫-೮, ೯) ಎಂದಿರುವಂತೆ ಜ್ಞಾನಿಗಳು ಸಕಲಕರ್ಮಗಳನ್ನೂ ಮಾಡುತ್ತಿದ್ದರೂ ನಾನು ಏನೂ ಮಾಡುತ್ತಿಲ್ಲವೆಂಬ ಅನುಭವದಲ್ಲಿ ನಲಿದಾಡುತ್ತಿರುವರು. ಆತ್ಮನು 'ಕೈಯಿಲ್ಲದೆ ಹಿಡಿಯುತ್ತಾನೆ, ಕಾಲಿಲ್ಲದೆ ನಡೆಯುತ್ತಾನೆ, ಕಣ್ಣಿಲ್ಲದೆ ನೋಡುತ್ತಾನೆ, ಕಿವಿಯಿಲ್ಲದೆ ಕೇಳುತ್ತಾನೆ' ಎಂಬ ಸ್ಥಿತಿಯನ್ನು ನೇರಾಗಿ ಅನುಭವಕ್ಕೆ ತಂದುಕೊಂಡಿರುತ್ತಾರೆ.

ಆಚಾರ್ಯರ ಉಪದೇಶವನ್ನು ಮನಗಂಡಿರುವ ಮಹಾತ್ಮರನ್ನು ಕಂಡರೆ ನಮಗೆ ಮನಃಶಾಂತಿಯು ಬರುತ್ತದೆ. ಅಳುವವರನ್ನು ಕಂಡರೆ ನಮಗೆ ದುಃಖವಾಗುವಂತೆ- ಹಸನ್ಮುಖರನ್ನು ಕಂಡರೆ ನಮಗೂ ಸಂತೋಷವಾಗುವಂತೆ ಅಂಥ ಜ್ಞಾನಿಗಳ ಸಂನಿಧಿಯಲ್ಲಿ ವ್ಯವಹಾರದ ತಾಪತ್ರಯವೆಲ್ಲ ಹಾರಿಹೋಗುತ್ತದೆ, ಶಾಂತಿಯೂ ದೊರಕುತ್ತದೆ. ಇದೇ ಆಚಾರ್ಯರ ಮಹಿಮೆ.

ಕವಿತೆಯಲ್ಲಿ ಅಭಿರುಚಿಯಿರುವವರು ಆಚಾರ್ಯರನ್ನು 'ಮಹಾಕವಿ' ಎಂದು ಹೊಗಳುತ್ತಾರೆ; ಲಾಯರುಗಳು 'ಇವರು ಚೆನ್ನಾಗಿ ಯುಕ್ತಿಗಳನ್ನು ಮುಂದಿಡುತ್ತಾರೆ'-ಎನ್ನುತ್ತಾರೆ; ಸಾಹಿತ್ಯಶಾಸ್ತ್ರಜ್ಞರು, 'ಎಂಥ ಶೈಲಿ, ಎಂಥ ಭಾಷೆ!' ಎನ್ನುವರು. ಸುಧಾರಕರು ಎಂಥ 'ಸಮಾಜಸುಧಾರಕರು' ಎನ್ನುತ್ತಾರೆ. ತತ್ತ್ವಶಾಸ್ತ್ರಜ್ಞರು 'ವಿಚಾರಶೈಲಿ ಎಷ್ಟು ಮುದ್ದು!' ಎನ್ನುವರು. ಹೀಗೆ ಅವರವರ ಅಂತಸ್ತಿಗೆ ತಕ್ಕಂತೆ ಅವರವರು ಆಚಾರ್ಯರನ್ನು ಹೊಗಳುತ್ತಾರೆ. ನಿಜವಾಗಿ ಆಚಾರ್ಯರ ಸ್ಥಿತಿ ಏನೆಂಬುದು ನಮಗೆ ಯಾರಿಗೂ ಪೂರ್ಣವಾಗಿ ಮನದಟ್ಟಾಗಿಲ್ಲ. ಆಚಾರ್ಯರು ಸರ್ವವ್ಯವಹಾರವನ್ನೂ ಲೋಕದೃಷ್ಟಿಯಿಂದ ಉತ್ತಮರೀತಿಯಲ್ಲಿ ಮಾಡಿದವರಾದರೂ ಎಂದೆಂದಿಗೂ ತಮ್ಮ ಅದ್ವಿತೀಯ ಮಹಿಮೆಯಲ್ಲಿಯೇ ನಿಂತಿರುತ್ತಾರೆ. ಅವರ ಅನುಗ್ರಹವು ನಮಗೆಲ್ಲರಿಗೂ ಆಗಲಿ- ಎಂದು ನಮ್ರತೆಯಿಂದ ನಾವೆಲ್ಲರೂ ಅವರನ್ನೇ ಪ್ರಾರ್ಥಿಸೋಣ!

ಓಂ ತತ್ ಸತ್

15-9-1990, 1500. ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.